
ಬಿ. ಗುರುಸಿದ್ದಪ್ಪ, ಚಳ್ಳಕೆರೆ

# ಬಿ. ಗುರುಸಿದ್ದಪ್ಪ

ಡಾ. ಮೀರಾಸಾಬಿಹಳ್ಳಿ ಶಿವಣ್ಣ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು ಮಾಲಿಕೆ

# ಬಿ. ಗುರುಸಿದ್ದಪ್ಪ

ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**B. Gurusiddappa**
A Monograph in Kannada by **Dr. Meerasabihalli Shivanna**
Published by **Mr. Siddaraju,** Registrar, Karnataka Nataka Academy, Kannada Bhavana, J.C.Road, Bengaluru- 560002 . Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : viii + ೭೪ = ೮೨
ಬೆಲೆ : ರೂ. ೭೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್,
ಕರ್ನಾಟಕ ನಾಟಕ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
**ಪ್ರಿಂಟ್ ಪಾಯಿಂಟ್**
ಬೆಂಗಳೂರು – ೫೬೦ ೦೪೦

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟಣಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟಣಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ವೇದಾವತಿ ತೀರದ ನಾಟಕಕಾರ ಬಿ.ಗುರುಸಿದ್ದಪ್ಪ**

ಕಥಾ ಕೀರ್ತನ, ಅಭಿನಯ, ಸಂಗೀತ ನಿರ್ದೇಶನ, ಪಕ್ಕವಾದ್ಯಕಾರ, ನಾಟಕ ರಚನೆ, ನಿರ್ದೇಶನ –ಹೀಗೆ ರಂಗಭೂಮಿಯ ಬಹುಮುಖಿ ಪ್ರತಿಭೆ ಬಿ.ಗುರುಸಿದ್ಧಪ್ಪನವರು. ಚಳ್ಳಕೆರೆ, ಚಿತ್ರದುರ್ಗ, ಬಳ್ಳಾರಿ, ದಾವಣಗೆರೆ, ಆಂಧ್ರದ ಗಡಿಭಾಗದ ಹಲವು ಪಟ್ಟಣ ಹಾಗೂ ಹತ್ತಾರು ಹಳ್ಳಿಗಳಲ್ಲಿ ಅರ್ಧ ಶತಮಾನಕ್ಕೂ ಹೆಚ್ಚು ಕಾಲ ನಾಟಕ ಪ್ರಯೋಗಗಳಿಗೆ ಸಂಚಲನ ತಂದವರು ಅವರು.

ಗ್ರಾಮೀಣ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಬಿ.ಗುರುಸಿದ್ದಪ್ಪನವರ ಬದುಕಿನ ಆಪ್ತ ಚಿತ್ರಣ ನೀಡಿದವರು ಖ್ಯಾತ ಜಾನಪದ ವಿದ್ವಾಂಸ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅವರು. ಸಿವಿಜಿ ಪಬ್ಲಿಕೇಶನ್ ಮುಖಾಂತರ ಮೂಲೆಗುಂಪಾಗಿದ್ದ ಹಲವು ಲೇಖಕರ ಪುಸ್ತಕಗಳನ್ನು ಹೊರತಂದ ಶಿವಣ್ಣ ಕತೆಗಾರರೂ, ಅನುವಾದಕರೂ, ಸಂಶೋಧಕರೂ ಹೌದು. ಅಂತೆಯೇ ಶಿವಣ್ಣನವರ ಈ ಬರಹದಲ್ಲಿ ಕತೆಗಾರನ ಸುಭಗತೆ ಹಾಗೂ ಇತಿಹಾಸಕಾರನ ನಿಖರತೆ ಮೇಳೈಸಿವೆ. ಆ ಪ್ರದೇಶದ ಗ್ರಾಮೀಣ ರಂಗಭೂಮಿ ಚರಿತ್ರೆ ಕಟ್ಟಿಕೊಟ್ಟಿರುವುದು ಈ ಪುಸ್ತಕದ ವಿಶೇಷತೆ.

–ಗುಡಿಹಳ್ಳಿ ನಾಗರಾಜ

ಪ್ರಕಟಣಾ ಸಮಿತಿ ಸದಸ್ಯರು :
ಕೆ. ಜಗುಚಂದ್ರ
ಉಮೇಶ್ ಸಾಲಿಯಾನ್
ಹಾಲ್ಕುರಿಕೆ ಶಿವಶಂಕರ್

# ಕರ್ನಾಟಕ ನಾಟಕ ಅಕಾಡೆಮಿ


ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

ರಾಜಪ್ಪ ಕಿರಗಸೂರು
ಕಲ್ಪನಾ ನಾಗನಾಥ್
ಪಿ.ತಿಪ್ಪೇಸ್ವಾಮಿ
ಎಂ.ಎಸ್.ಗುಣಶೀಲನ್
ಮುದ್ದಣ್ಣ ರಟ್ಟೆಹಳ್ಳಿ
ಅನ್ನಪೂರ್ಣ ಸಾಗರ
ಗುಡಿಹಳ್ಳಿ ನಾಗರಾಜ
ಎಚ್.ಷಡಾಕ್ಷರಪ್ಪ ಹೊಸಮನ
ಶ್ರೀಪಾದ ಭಟ್
ಉಮೇಶ ಸಾಲಿಯಾನ್
ಎ.ಎನ್.ಅಕ್ಕಿ
ಬಿ.ಎಂ.ರಾಮಚಂದ್ರ
ಎನ್.ಕೆ.ರಾಮಕೃಷ್ಣ
ಎ.ವರಲಕ್ಷ್ಮಿ
ಎಸ್.ಕೆ.ಕೊನೆಸಾಗರ
ಹಾಲ್ಕುರಿಕೆ ಶಿವಶಂಕರ್
ಎಲ್.ಎಚ್.ರಂಗನಾಥಪ್ಪ
ಕೆ.ಜಗುಚಂದ್ರ

ರಿಜಿಸ್ಟ್ರಾರ್:
ಸಿದ್ದರಾಜು

ಯೋಜನಾ ಸಹಾಯಕರು:
ಕೆ.ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಲೇಖಕರ ಮಾತು

ಗೆಳೆಯರೂ, ನಾಟಕ ಅಕಾಡೆಮಿಯ ಸದಸ್ಯರೂ ಆದ ಗುಡಿಹಳ್ಳಿ ನಾಗರಾಜ ಮತ್ತು ಪಿ. ತಿಪ್ಪೇಸ್ವಾಮಿಯವರು ರಂಗಭೂಮಿಗೆ ಸೇವೆ ಸಲ್ಲಿಸಿದ ಹಿರಿಯರನ್ನು ಕುರಿತ ಜೀವನ ಚರಿತ್ರೆಗಳನ್ನು ಬರೆಸುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಅದರ ಅಂಗವಾಗಿ ಚಿತ್ರದುರ್ಗ ಭಾಗದ ಹಿರಿಯ ರಂಗನಟ, ನಿರ್ದೇಶಕ, ಪಕ್ಕವಾದ್ಯಕಾರ – ಹೀಗೆ ಬಹುಮುಖಿ ಸೇವೆ ಸಲ್ಲಿಸಿರುವ ಚಳ್ಳಕೆರೆಯಲ್ಲಿರುವ ಬಿ. ಗುರುಸಿದ್ದಪ್ಪನವರನ್ನು ಕುರಿತು ಬರೆದು ಕೊಡಲು ಕೇಳಿದರು. ಗುರುಸಿದ್ದಪ್ಪನವರನ್ನು ಬಲ್ಲ ನಾನು ಬರೆದರಾಯಿತು ಎಂದು ಗೆಳೆಯರ ಸ್ನೇಹ, ವಿಶ್ವಾಸಕ್ಕೆ ಕಟ್ಟುಬಿದ್ದು ಒಪ್ಪಿದೆ. ಆಗಾಗ್ಗೆ ನಾನು ಚಳ್ಳಕೆರೆಗೆ ಹೋದಾಗಲೆಲ್ಲ ಗುರುಸಿದ್ದಪ್ಪನವರನ್ನು ವೈಯಕ್ತಿಕವಾಗಿ ಕಂಡು ಮಾಹಿತಿ ಸಂಗ್ರಹಿಸತೊಡಗಿದೆ.

ನಾನು ಮಾಹಿತಿ ಸಂಗ್ರಹಿಸಲು ಪ್ರಾರಂಭಿಸಿದಾಗ ಅವರು ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ಎದ್ದು ಕುಳಿತು ಮಾಹಿತಿ ನೀಡುವುದು ಕಷ್ಟಕರವಾಗಿತ್ತು. ಅಂಥರದಲ್ಲಿ ಎರಡು ಮೂರು ಭೇಟಿಗಳಲ್ಲಿ ಸಾಕಷ್ಟು ಮಾಹಿತಿ ಸಂಗ್ರಹಿಸಿದೆ. ಅವರ ಮಕ್ಕಳು ಪ್ರೀತಿಯಿಂದ ಸಹಕರಿಸಿ ಅವರ ಬಗೆಗಿನ ೫–೬ ಪುಟಗಳ ಮಾಹಿತಿಯನ್ನು ಬರೆದುಕೊಟ್ಟು ಸಹಕರಿಸಿದರು. ಒಮ್ಮೆಯಂತೂ ಅವರ ಶಿಷ್ಯರನ್ನೆಲ್ಲ ಕರೆಸಿ ಗುಂಪು ಫೋಟೋ ತೆಗೆಸಿದರು. ಹೀಗೆ ತಮ್ಮಿಂದ ಸಾಧ್ಯವಾದ ಮಾಹಿತಿಯನ್ನೆಲ್ಲಾ ಒದಗಿಸಿದರು. ಇವರಿಗೆಲ್ಲಾ ನನ್ನ ಕೃತಜ್ಞತೆಗಳನ್ನು ಹೇಗೆ ತಿಳಿಸಲಿ?

ಆದರೆ ಬೇರೆ ಕಾರ್ಯಭಾರಗಳ ಒತ್ತಡದಲ್ಲಿದ್ದ ನಾನು ಮಾಹಿತಿಗಳನ್ನು ಕ್ರಮಬದ್ಧವಾಗಿ ಸಂಯೋಜಿಸಿಕೊಂಡು ಬರೆಯಲು ಸಾಧ್ಯವಾಗಿರಲಿಲ್ಲ. ನಾನು ಬಿಡುವು ಮಾಡಿಕೊಂಡು ಬರೆಯುವುದರೊಳಗೆ ಎಲ್ಲಿ ಅವರು ನಮ್ಮಿಂದ ದೂರವಾಗಿ ಬಿಡುತ್ತಾರೋ ಎಂಬ ಆತಂಕವೂ ಕಾಡಿತು. ಯಾವಾಗ ಬರೆಯುತ್ತೀರಿ ಎಂದು ಗುರುಸಿದ್ದಪ್ಪನವರೂ ಆಗಾಗ್ಗೆ ಕೇಳತೊಡಗಿದರು. ಕೊನೆಗೆ ಗುಡಿಹಳ್ಳಿ ನಾಗರಾಜ ಅವರು ಕುತ್ತಿಗೆಯ ಮೇಲೆ ಕೂತು ಒತ್ತಡ ಹಾಕದಿದ್ದರೆ ಇದು ಇನ್ನಷ್ಟು ಕಾಲ ಮುಂದಕ್ಕೆ ಹೋಗುತ್ತಿತ್ತೇನೋ... ಆದರೆ ಗುಡಿಹಳ್ಳಿಯವರ ವಿಶ್ವಾಸ, ಒತ್ತಡ ನನ್ನ ಕೈಹಿಡಿದು ಬರೆಸಿತು. ಇದಕ್ಕಾಗಿ ಅವರಿಗೆ ಆಭಾರಿಯಾಗಿದ್ದೇನೆ.

ಮಾಹಿತಿ ಸಂಗ್ರಹದ ಸಂದರ್ಭದಲ್ಲಿ ನನ್ನ ಜೊತೆಗಿದ್ದು ಸಹಕರಿಸಿದ್ದಲ್ಲದೆ, ನಾನು ಕೇಳಿದ ಮಾಹಿತಿಗಳೆಲ್ಲವನ್ನೂ ಒದಗಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಪಿ. ತಿಪ್ಪೇಸ್ವಾಮಿಯವರನ್ನು, ಇಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನಾನು ಬರೆದು ಮುಗಿಸಿದ ಪ್ರತಿಯನ್ನು, ಗುರುಸಿದ್ದಪ್ಪನವರ ಅವಗಾಹನೆಗೆ ನೀಡಿ ವಿವರಗಳು ಸರಿಯಾಗಿವೆಯೇ ಪರಿಶೀಲಿಸಿ ಎಂದು ಹೇಳಿದೆ. ನಾನು ಅವರ ಇತಿವೃತ್ತ ಬರೆದು ಮುಗಿಸುವಷ್ಟರಲ್ಲಿ ಆಶ್ಚರ್ಯಕರವೆಂಬಂತೆ ಹಾಸಿಗೆ ಹಿಡಿದಿದ್ದ ಅವರು ಸಂಪೂರ್ಣ ಚೇತರಿಸಿಕೊಂಡು ಓಡಿಯಾಡುತ್ತಿದ್ದುದು ಸಂತೋಷದ ಸಂಗತಿ.

ಅಂತೂ ನನಗೆ ಈ ಅವಕಾಶ ನೀಡಿ ಇಂಥದೊಂದು ಬರವಣಿಗೆಗೆ ಕಾರಣರಾದ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಷೇಕ್ ಮಾಸ್ತರ್ ಮತ್ತು ನಾಟಕ ಅಕಾಡೆಮಿ ಸದಸ್ಯ ಮತ್ತು ಸಿಬ್ಬಂದಿ ವರ್ಗದವರಿಗೆ ನನ್ನ ನೆನಕೆಗಳು ಸಲ್ಲುತ್ತವೆ.

ವಂದನೆಗಳೊಡನೆ ತಮ್ಮ ವಿಶ್ವಾಸದ

**ಡಾ. ಮೀರಾಸಾಬಿಹಳ್ಳಿ ಶಿವಣ್ಣ**

# ವೇದಾವತಿ ತೀರದ ನಾಟಕಕಾರ

## ಪರಿಸರ

ಗುರುಸಿದ್ದಪ್ಪನವರ ಹುಟ್ಟೂರು ಚಿತ್ರದುರ್ಗ ಜಿಲ್ಲೆಯ ಪೂರ್ವದಂಚಿನ ಆಂಧ್ರ ಪ್ರದೇಶದ ಗಡಿಯನ್ನು ಹಂಚಿಕೊಂಡಿರುವ ಚಳ್ಳಕೆರೆ ತಾಲ್ಲೂಕಿನ ನಾಗಗೊಂಡನಹಳ್ಳಿ, (ಉಚ್ಚಾರಣೆಯಲ್ಲಿ ನಾಗ್ಗೊಂಡನಳ್ಳಿ > ನಾಗ್ಗೇನಹಳ್ಳಿ ಆಗಿದೆ) ಇದು ತಾಲ್ಲೂಕಿನ ಏಕೈಕ ನದಿ ವೇದಾವತಿ ದಡದಲ್ಲಿರುವ ಹಳ್ಳಿ. ಅಂದರೆ ಈ ನದಿ ಊರಿಗೆ ಅಂಟಿಕೊಂಡೇ ಹರಿಯುತ್ತದೆ. ಆದರೆ ಇದು ಹೆಸರಿಗೆ ನದಿ, ಎಲ್ಲೋ ಅಪರೂಪದ ಮಳೆಗಾಲದಲ್ಲಿ ಮಾತ್ರ ಒಮ್ಮೊಮ್ಮೆ ತುಂಬಿ ಹರಿಯುವ ನದಿ ಅಷ್ಟೆ. ಬೇಸಿಗೆ ಬಂತೆಂದರೆ ಇದು ಸಂಪೂರ್ಣವಾಗಿ ಬತ್ತಿ ಹೋಗುತ್ತದೆ. ಬಹಳ ಹೆಚ್ಚು ಎಂದರೆ ಒಂದು ಸಣ್ಣ ಕಾಲುವೆಯಲ್ಲಿ ಹರಿಯುವಷ್ಟು ನೀರು ಹರಿದೀತು. ಆದರೆ ಇತ್ತೀಚಿನ ದಿನಗಳಲ್ಲಿ ಅದೂ ಕಾಣೆಯಾಗುತ್ತಿದೆ. ನದಿಯ ಪಾತ್ರದ ಉದ್ದಕ್ಕೂ ವಿಪರೀತ ಮರಳು ತೆಗೆದ ಪರಿಣಾಮ ಇದು. ಮಳೆಗಾಲದಲ್ಲಿ ಹರಿದುಹೋಗುವ ನೀರು ಆಂಧ್ರಗಡಿಯೊಳಗಿರುವ ಭೈರವನ ತಿಪ್ಪೆ ಡ್ಯಾಮ್ ಎಂದು ಕರೆಯಲ್ಪಡುವ ಅತ್ತ ಡ್ಯಾಮೂ ಅಲ್ಲ ಇತ್ತ ದೊಡ್ಡಕೆರೆಯೂ ಅಲ್ಲದ ಜಲಾಶಯ ಸೇರುತ್ತದೆ. ನದಿಯ ಅಕ್ಕಪಕ್ಕದ ದಡದಲ್ಲಿರುವ ಕೆಲವು ಹಳ್ಳಿಗಳಿಗೆ ಬಿಟ್ಟರೆ, ಕರ್ನಾಟಕದ ರೈತರಿಗೆ ಹೆಚ್ಚಿನ ನೀರಾವರಿ ಸೌಕರ್ಯವನ್ನೇನೂ ಈ ನದಿ ಒದಗಿಸಿಲ್ಲ. ಮಾರಿಕಣಿವೆ (ವಾಣಿವಿಲಾಸ ಸಾಗರ ಜಲಾಶಯ)ಯಿಂದ ಕೆಳಗೆ ಸಿದ್ಲಯ್ಯನ ಕೋಟೆಯ ಬಳಿ ಸಣ್ಣ ಅಣೆಯನ್ನು ಕಟ್ಟಿ ಅಲ್ಲಿಂದ ಎಡ–ಬಲ ಕಾಲುವೆಗಳ ಮೂಲಕ ಹಾಯಿಸಿಕೊಂಡು ಕೆಲವು ಕೆರೆಗಳಿಗೆ ನೀರು ತುಂಬಿಸಿ ಕೃಷಿಗೆ ಬಳಸುತ್ತಾರೆ. ಇದು ಅಂಥ ದೊಡ್ಡ ಪ್ರಮಾಣದ್ದೇನೂ ಅಲ್ಲ. ಹಾಗೂ ನಾಗಗೊಂಡನಹಳ್ಳಿ ತನ್ನ ಸುತ್ತ 'ಗೊಂಡ' ಹೆಸರಿನಿಂದ ಅಂತ್ಯಗೊಳ್ಳುವ ಹಾಲಿಗೊಂಡನಹಳ್ಳಿ, ಅರವಿ(ಹರವಿ)ಗೊಂಡನಹಳ್ಳಿ, ಕ್ಯಾತಗೊಂಡನಹಳ್ಳಿ, ಕಸವಿಗೊಂಡನಹಳ್ಳಿ ಮತ್ತು ತಪ್ಪಗೊಂಡನಹಳ್ಳಿ ಹೆಸರಿನ ಗ್ರಾಮಗಳಿಂದ ಆವೃತವಾಗಿದೆ. ಈ ಹಳ್ಳಿಗಳಲ್ಲಿ ಕಾಡುಗೊಲ್ಲ ಸಮುದಾಯಕ್ಕೆ

ಸೇರಿದ ಜನಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇವರೆಲ್ಲಾ ಒಂದು ಕಾಲಕ್ಕೆ ಪಶುಪಾಲಕರಾಗಿದ್ದು, ಈಗ ಕುರಿಗಾಹಿಗಳಾಗಿದ್ದಾರೆ.

ಊರಿನ ಬಲಬದಿಗೆ ಒಂದೆರಡು ಕಿ.ಮೀ ದೂರದಲ್ಲಿ 'ಚಿಲುಮೆ ಸ್ವಾಮಿ' ಗದ್ದುಗೆ ಇದೆ. ಗದ್ದುಗೆ ಎಂದು ಕರೆಯಲ್ಪಡುವ ಇದು ಚಿಲುಮೆಸ್ವಾಮಿಗಳ ಸಮಾಧಿ ಎಂದು ಹೇಳುತ್ತಾರೆ. ಇದು ವೇದಾವತಿ ನದಿ ದಡದಲ್ಲೇ ಇದೆ. ಈ ಸ್ವಾಮಿಗಳು ದೊರೆತುದು ಕೂಡಾ ಈ ನದಿಯಲ್ಲೇ. ಬೇಸಿಗೆ ಕಾಲದಲ್ಲಿ ನದಿ ಬತ್ತಿದಾಗ ಇಲ್ಲಿ ದನ ಕಾಯುತ್ತಿದ್ದ ಹುಡುಗರು ಬಾಯಾರಿಕೆ ತಣಿಸಿಕೊಳ್ಳಲು ಮರಳಿನಲ್ಲಿ ಚಿಲುಮೆ ತೋಡಿದರಂತೆ. ಹೀಗೆ ತೋಡುತ್ತಿರುವಾಗ ಮರಳಿನಲ್ಲೇ ಹೂತು ಹೋಗಿದ್ದ ಜಟಾಜೂಟಧಾರಿಯೊಬ್ಬ ಕಾಣಿಸಿದರಂತೆ. ಅವರಿಗೆ ತಿಳಿವು ಬಂದಾಗ ಸುತ್ತ ಕಣ್ತೆರೆದು ನೋಡಿದರಂತೆ. ಅವರು ಆಡಿದ ಮಾತುಗಳೂ ಸಹ ಒಬ್ಬರಿಗೂ ಅರ್ಥವಾಗಲಿಲ್ಲವಂತೆ. ಜನ ಇವರನ್ನು ಯಾರೋ ಮಹಿಮಾಪುರುಷರಿರಬೇಕೆಂದು ಅವರನ್ನು ನಿತ್ಯ ಭಜನೆಯ ಮೂಲಕ ಆರಾಧಿಸಿದರಂತೆ. ಅವರು ಕೇವಲ ಫಲಾಹಾರ ಮಾತ್ರ ಮಾಡುತ್ತಿದ್ದರಂತೆ. ಕೊನೆಗೆ ಅವರ ಕೋರಿಕೆಯಂತೆ ಅಲ್ಲೇ ಅವರನ್ನು ಜೀವಸಮಾಧಿ ಮಾಡಿದರಂತೆ. ಆ ಸ್ಥಳವೇ ಈಗ ಗದ್ದುಗೆಯಾಗಿದೆ. ಇಲ್ಲಿ ಮೊದಲಿಗೆ ಪ್ರತಿವರ್ಷ ದನಗಳ ಜಾತ್ರೆ ಆಗುತ್ತಿತ್ತು. ಈ ಸುತ್ತಿನ ರೈತಾಪಿ ಜನಗಳ ಜೀವನಾಡಿಯಾದ ವ್ಯವಸಾಯಕ್ಕೆ ಬೇಕಾದ ಎತ್ತುಗಳ ಖರೀದಿ ಮಾರಾಟ ನಡೆಯುತ್ತಿತ್ತು. ಜಾತ್ರೆಯ ಕಾಲದಲ್ಲಿ ಇಲ್ಲಿ ನಾಟಕ ಪ್ರದರ್ಶನ, ಟೆಂಟ್ ಸಿನಿಮಾಗಳು ನಡೆಯುತ್ತಿದ್ದವು. ಹೀಗಾಗಿ ಇದೊಂದು ಸಾಂಸ್ಕೃತಿಕ ಕೇಂದ್ರವಾಗಿತ್ತು. ದನದ ಜಾತ್ರೆಯ ಕೊನೆಯಲ್ಲಿ ಇಲ್ಲಿ ರಥೋತ್ಸವವೂ ನಡೆಯುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಅಲ್ಲಿ ರಥೋತ್ಸವ ಮಾತ್ರ ನಡೆಯುತ್ತದೆ. ದನಗಳು ಜಾತ್ರೆ ನಿಂತು ಹೋಗಿದೆ. ಈ ಸ್ಥಳದಲ್ಲಿ ಊರು ಇರುವುದಿಲ್ಲ. ಜಾತ್ರೆಯ ಕಾಲದಲ್ಲಿ ಮಾತ್ರ ಜನ ಸೇರುತ್ತಾರೆ, ಉಳಿದಂತೆ ಇದು ನಿರ್ಜನ ಪ್ರದೇಶ. ಒಂದೆರಡು ಕಿ.ಮೀ. ದೂರದಲ್ಲಿ ಹ(ಅ)ರವಿಗೊಂಡನಹಳ್ಳಿಯಿದೆ. ಅದರ ಪಕ್ಕ ಮತ್ಸಮುದ್ರ ಗ್ರಾಮವಿದೆ. ಇಲ್ಲಿ ವ್ಯಾಸರಾಯರು ಸ್ಥಾಪಿಸಿದ ಆಂಜನೇಯಸ್ವಾಮಿ ದೇವಸ್ಥಾನವಿದೆ. ಇಲ್ಲಿ ನೆರೆಯುವ ಪರಿಷೆ 'ಉಟ್ಲುಮರ' ಎಂಬ ಆಚರಣೆಗೆ ಪ್ರಸಿದ್ಧವಾಗಿದೆ. ಇದು ಸುಪ್ರಸಿದ್ಧ ಸನಾದಿ (ಷಹನಾಯ್) ವಾದಕ ಜಾನಪದ ಅಕಾಡೆಮಿ ಪ್ರಶಸ್ತಿ ವಿಜೇತ ಚನ್ನಬಸಪ್ಪನ ಊರು. ಈ ಗ್ರಾಮಕ್ಕೆ ಒಂದೆರಡು ಕಿ.ಮೀ.ಗಳ ಅಂತರದಲ್ಲೇ ಚೆನ್ನಮ್ಮನಾಗತಿಹಳ್ಳಿ ಎಂಬ ಗ್ರಾಮವಿದೆ. ಹುರುಳಿ – ನವಣೆ ನಿಷೇಧಕ್ಕೆ ಹೆಸರಾದ, ಕಳ್ಳೆ ಗುಡಿಕಟ್ಟಿ ಕಳಶ ಕೀಳುವ ರೋಚಕ ಆಚರಣೆಗೆ ಕಾರಣವಾದ ಕ್ಯಾತೇದೇವರು (ಕ್ಯಾತರುಲಿಂಗ<ಕೇದಾರಲಿಂಗ) ನೆಲೆಸಿದೆ.

ನಾಗಗೊಂಡನಹಳ್ಳಿ ಊರಿನ ಬಲಕ್ಕೆ ನಾಲ್ಕೈದು ಕಿ.ಮೀ.ಗಳಲ್ಲಿ ಕಸವಿಗೊಂಡನಹಳ್ಳಿ (ಕಸಗಾನಹಳ್ಳಿ>ಕಸ್ಗಾನಳ್ಳಿ) ಎಂಬ ಊರಿದೆ. ಈ ಊರಿನ ಗೊಲ್ಲ ಸಮುದಾಯಕ್ಕೆ ಸೇರಿದ ನಾಗ(ಣ್ಣ) ಎಂಬ ವ್ಯಕ್ತಿ ಸೇಡಿನಿಂದ ಹಲವು ವ್ಯಕ್ತಿಗಳನ್ನು ಕೊಚ್ಚಿ ಹಾಕಿದ್ದರಿಂದ ಆತ ಜನಗಳ ಪಾಲಿನ ದಂತಕತೆಯಾದ. ಕೊನೆಗೆ ಆತನ ಜೀವನ ಕಥನ ಜನಪದರಲ್ಲಿ ಕೋಲುಪದವಾಗಿ ವಿಜೃಂಭಿಸಿತು. ಇಂಥ ಈ ನಾಗ(ಣ್ಣ)ನೇ ಇದೇ ನಾಗಗೊಂಡನಹಳ್ಳಿಯ ಪಕ್ಕದ ಜಾಜೂರಿನ ಕಂಪಾಲಿನಾಯ್ಕ ಎಂಬಾತನನ್ನು ನಡು ಊರಿನಲ್ಲಿ ಅಟ್ಟಾಡಿಸಿಕೊಂಡು ಕುರಿ ಕಡಿಯುವಂತೆ ಕಡಿದ ರೋಚಕ ಕತೆ ಇದೆ. ನಾಗಣ್ಣನ ಕತೆಯನ್ನು ಕೋಲುಪದ ಮಾಡಿ ಹಾಡಿದ, ಅದಕ್ಕಾಗೇ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ದಿವಂಗತ ನಿಂಗದಹಳ್ಳಿ ಮಾರಪ್ಪ ಬಾಳಿ ಬದುಕಿದ ಊರು ಕರೀಕೆರೆ (ಚಳ್ಳಕೆರೆಯಿಂದ ನಾಗಗೊಂಡನಹಳ್ಳಿಗೆ ಹೋಗುವ ದಾರಿಯಲ್ಲೇ ಸಿಗುತ್ತದೆ). ಸಮೀಪದಲ್ಲೇ ಜಾನಪದ ಸಾಹಿತ್ಯ ಕೃಷಿಗೆ ಹೆಸರಾದ ಶಿವಣ್ಣನವರ ಮೀರಾಸಾಬಿಹಳ್ಳಿಯೂ ಇದೆ. ಮೈಸೂರಿನ ಮಹರಾಜರು, ಅವರ ತಾಯಿ ರಾಣಿ ಲಕ್ಷ್ಮಮ್ಮಣ್ಣಿ ಅವರ ಹೆಸರಿನಲ್ಲಿ ಕಟ್ಟಿಸಿದ ರಾಣೀಕೆರೆಯಿದೆ. ಇದು ಮತ್ತು ಮಾರೀಕಣಿವೆ ಜಲಾಶಯ ಎರಡೂ ೧೯೦೭ರಲ್ಲಿ ಏಕಕಾಲಕ್ಕೆ ಕಟ್ಟಿಸಿದವುಗಳು. ಈ ಕೆರೆಯ ಹಿನ್ನೀರಿನ ಬಳಿ ಇರುವ ದೊಡ್ಡೇರಿಯೂ ರಾಷ್ಟ್ರ ರಾಜಕಾರಣಿ ಸಿ.ಕೆ. ಜಾಫರ್ ಷರೀಫ್ ಅವರಿಂದ ಪ್ರಸಿದ್ಧವಾಗಿದೆ. ಹತ್ತಿರದಲ್ಲೇ ತಳುಕಿನಲ್ಲೇ ನೆಲೆಸಿದ್ದ ತಳಕು ಸಾಹಿತ್ಯ ಮನೆತನ (ತ.ಸು.ಶ್ಯಾಮರಾಯ, ಟಿ.ಎಸ್.ವೆಂಕಣ್ಣಯ್ಯ, ತ.ರಾ.ಸು.) ಹಾಗೂ ಬೆಳೆಗೆರೆ ಸಾಹಿತ್ಯ ಮನೆತನ (ಬೆಳಗೆರೆ ಜಾನಕಮ್ಮ, ಬೆಳಗೆರೆ ಕೃಷ್ಣಶಾಸ್ತ್ರಿ) ಇದೆ.

ನಾಗಗೊಂಡನಹಳ್ಳಿಯ ಪೂರ್ವಕ್ಕೆ ನದಿ ದಾಟಿದರೆ ಸಿಗುವ ಊರೇ ಜಾಜೂರು. ಇದು ಆಚೆಯ ದಡದಲ್ಲಿದೆ ಅಷ್ಟೆ. ಇದು ಕೂಡಾ ಡಿ.ಮಂಜುನಾಥ್ ಎಂಬ ಪ್ರಸಿದ್ಧ ರಾಜಕೀಯ ನೇತಾರನನ್ನು ಕೊಟ್ಟ ಗ್ರಾಮ. ಈ ಊರಿನ ಸುತ್ತಮುತ್ತ ಕಾಮಸಮುದ್ರ, ಪಾತಪ್ಪನಗುಡಿ, ತಿಪ್ಪರೆಡ್ಡಿಹಳ್ಳಿ, ತಪ್ಪಗೊಂಡನಹಳ್ಳಿ, ಶಿರಿವಾಳ, ಮೋದೂರು ಎಂಬ ಆಂಧ್ರ ಗಡಿಯಂಚಿನ ಗ್ರಾಮಗಳಿವೆ. ತಪ್ಪಗೊಂಡನಹಳ್ಳಿ ನಾಟಕದ ಸೀನರಿಗಳಿಗೆ ಹೆಸರಾದರೆ, ಮೋದೂರು– ತೇಜ ಎಂಬ ಲೇಖಕನಿಗೆ ಜನ್ಮ ಕೊಟ್ಟ ನೆಲ.

ಸಮೃದ್ಧ ಬಿಸಿಲು, ಮಳೆಯೇ ಇಲ್ಲದೆ ಬರ ತುಂಬಿ ತುಳುಕುವ, ಬರೀ ಬಳ್ಳಾರಿ (ಸೀಮೆ) ಜಾಲಿಯೇ ತುಂಬಿರುವ ಇಂಥ ಪರಿಸರದಲ್ಲಿ ಹುಟ್ಟಿ ಬೆಳೆದವರು ಗುರುಸಿದ್ದಪ್ಪನವರು.

## ಬಾಲ್ಯ

ಚಿತ್ರದುರ್ಗ ಭಾಗದಲ್ಲಿ ತುಂಬಾ ಅಪರೂಪದ ಸಮುದಾಯವಾದ ಕುಡಿ ಒಕ್ಕಲಿಗರ ಜಾತಿಯಲ್ಲಿ ಜನಿಸಿದರು. ಈ ಸಮುದಾಯ ಉತ್ತರ ಕರ್ನಾಟಕದ ಬಿಜಾಪುರದ ಕಡೆ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಇವರನ್ನು 'ಸಿದ್ದರಾಮನ ಕುಲದವರು' ಎಂದೂ ಕರೆಯುತ್ತಾರೆ. ರಾಘವಾಂಕನ ಸಿದ್ಧರಾಮ ಚಾರಿತ್ರದಲ್ಲಿ ಬರುವ ಕುಡಿ ಒಕ್ಕಲಿಗರ ಸಿದ್ಧರಾಮ ತಮ್ಮ ಕುಲದ ಆದ್ಯ ಎಂದು ಭಾವಿಸುತ್ತಾರೆ. ಈ ಸಮುದಾಯದ ರೈತ ಕುಟುಂಬದ ಬಸಪ್ಪ–ರುದ್ರಮ್ಮ ದಂಪತಿಗೆ ಅಣ್ಣ ಸಿದ್ದಯ್ಯ, ತಂಗಿ ಪುಟ್ಟೀರಮ್ಮರ ಮಧ್ಯದ (ನಡುವಲ) ಮಗನೇ ಗುರುಸಿದ್ದಪ್ಪ.

ಬಿ. ಗುರುಸಿದ್ಧಪ್ಪನವರು ೧೦–೭–೧೯೩೦ರಲ್ಲಿ ಜನಿಸುತ್ತಾರೆ. ಆದರೆ ಇದು ಸರ್ಕಾರಿ ದಾಖಲೆಗಳಲ್ಲಿ ೧೯೩೨ ಎಂದು ಎರಡು ವರ್ಷ ಚಿಕ್ಕವರಾಗಿ ದಾಖಲಾತಿ ಆಗಿದೆ. ಬಹುಶಃ ಇವರನ್ನು ಶಾಲೆಗೆ ಸೇರಿಸುವಾಗ ವಯಸ್ಸು ಮೀರಿದ್ದರಿಂದ, ಹೀಗೆ ವಯಸ್ಸನ್ನು ಕಡಿಮೆ ನಮೂದಿಸಿ ಸೇರಿಸಿರಬೇಕು. ಏಕೆಂದರೆ ವಯಸ್ಸು ಏಳು ವರ್ಷಗಳಾದರೂ ಶಾಲೆಗೆ ಹೋಗದೆ ಉಂಡಾಡಿ ಗುಂಡನಾಗಿ, ಗೋಲಿ–ಗಜ್ಜುಗ, ಚಿನ್ನಿ–ದಾಂಡ, ಉಪ್ಪಾರಪಟ್ಟೆ ಆಟಗಳನ್ನು ಆಡಿಕೊಂಡು ಕಾಲ ಕಳೆದಿದ್ದ. ಆಟದ ಗೀಳಿನಿಂದ ಶಾಲೆ ಮರೆತಿದ್ದ. ಜೊತೆಗೆ ಬಾಲ್ಯದಲ್ಲಿ ತುಂಬಾ ದಷ್ಟಪುಷ್ಟವಾಗಿ ಬೆಳೆದಿದ್ದ ಹುಡುಗ ಸರೀಕ ಹುಡುಗರೊಂದಿಗೆ ಹೊಡೆದು–ಬಡಿದು ಜಗಳವಾಡುತ್ತಿದ್ದ. ಅವರೇನಾದರು ತಿನ್ನಲು ಜೇಬಿನಲ್ಲಿ ತಿಂಡಿ ತುಂಬಿಕೊಂಡು ಬಂದರೆ ಅವರ ಎರಡೂ ಕೈಗಳನ್ನು ತನ್ನ ಒಂದೇ ಕೈಯಲ್ಲಿ ಹಿಡಿದುಕೊಂಡು ಮತ್ತೊಂದು ಕೈಯಿಂದ ಅವರ ಜೇಬಿನಲ್ಲಿಯ ತಿಂಡಿಯನ್ನು ತಿಂದು ಮುಗಿಸುತ್ತಿದ್ದ. ಅವರು ಅರಚಿದರೂ–ಕಿರುಚಿದರೂ ಜೇಬಿನಲ್ಲಿಯ ತಿಂಡಿ ಖಾಲಿ ಆಗುವವರೆಗೂ ಏನು ಮಾಡಿದರೂ ಅವರನ್ನು ಬಿಡುತ್ತಿರಲಿಲ್ಲ. ದಿನನಿತ್ಯ ಇಂಥ ಅನೇಕ ದೂರುಗಳು ಅವರ ತಂದೆ–ತಾಯಿಯ ಬಳಿಗೆ ಹೋಗುತ್ತಿದ್ದವು. ಅವರು ಹಿಡಿದುಕೊಂಡು ಹೊಡೆದು–ಬಡಿದು ಬುದ್ಧಿ ಹೇಳಿದರೂ ಬಿಡುತ್ತಿರಲಿಲ್ಲ. ಕೊನೆಗೆ ರೋಸಿಹೋದ ತಾಯಿ ತನಗಿಂತ ಐದು ವರ್ಷ ಚಿಕ್ಕವಳಾದ ತಂಗಿಯನ್ನು ಆಟವಾಡಿಸಿಕೊಂಡು ಬರುವ ಜವಬ್ದಾರಿ ವಹಿಸುತ್ತಾರೆ– ಹೀಗಾದರೂ ಇವನ ಉಪಟಳ ಕಡಿಮೆಯಾದೀತೆಂದು. ಆದರೆ ಈ ತಂಗಿಯನ್ನು ಆಟವಾಡಿಸುವ ಕೆಲಸದಿಂದ ತಪ್ಪಿಸಿಕೊಳ್ಳಲು ತಂಗಿಯನ್ನು ಕಣದಲ್ಲಿರುವ ಬತ್ತದ ಹುಲ್ಲಿನ ರಾಶಿ (ಬಣವೆ) ಹತ್ತಿಸಿ ಅಲ್ಲಿಂದ ಕೆಡವಿದ್ದರಿಂದ ಆಕೆಯ ಕೈ ಮುರಿಯುತ್ತದೆ.

ಮಗನ ಅವಾಂತರದಿಂದ ಬೇಸರಗೊಂಡ ಅಪ್ಪ ತಮ್ಮ ಊರಿನಲ್ಲೇ ಇದ್ದ ಪ್ರಾಥಮಿಕ ಶಾಲೆಗೆ ಹಾಕಿದರು. ಆಗ ಆತನಿಗೆ ವಯಸ್ಸು ಹೆಚ್ಚು ಕಡಿಮೆ ಎಂಟು ವರ್ಷವಾಗಿತ್ತು. ಕ್ರಮೇಣ ಆಟದ ಮೇಲಿದ್ದ ಗಮನ ಓದಿನತ್ತ ಹರಿಯಿತು. ಆಟ, ತಂಟೆ–ತಕರಾರುಗಳ ಕಡೆಗಿದ್ದ ಮನಸ್ಸು ಪಾಠಗಳ ತಿರುಗಿತು. ಹುಡುಗ ಬದಲಾದ. ಹಂಗೂ ಹಿಂಗೂ ನಾಲ್ಕನೆಯ ತರಗತಿಯ ತನಕ ಓದಿದ. ಆದರೆ ತಮ್ಮ ಊರಿನಲ್ಲಿ ಶಾಲೆ ಇದ್ದದ್ದು ನಾಲ್ಕನೆ ತರಗತಿಯವರೆಗೆ ಮಾತ್ರ, ೫ನೇ ತರಗತಿಯ ಮಾಧ್ಯಮಿಕ ಶಾಲೆಗೆ ಸೇರಬೇಕೆಂದರೆ ತೊರೆಯ ಆ ಗಡ್ಡೆಯಲ್ಲಿರುವ ಜಾಜೂರಿಗೆ ಹೋಗಬೇಕಿತ್ತು. ಈಗಿನಂತೆ ಆಗ ಈ ವೇದಾವತಿ ನದಿ ದಾಟಲು ಸೇತುವೆ ಇರಲಿಲ್ಲ. ನದಿಯಲ್ಲೇ ನಡೆದುಕೊಂಡು ಹೋಗಬೇಕಾಗಿತ್ತು. ಆದರೆ ಮಳೆಗಾಲದಲ್ಲಿ ಹಳ್ಳ ಬರುತ್ತಿದ್ದರಿಂದ ನದಿ ದಾಟುವುದು ಕಷ್ಟವಾಗುತ್ತಿತ್ತು. ಆದರೆ ಸೊಂಟ ಮಟ್ಟ, ಎದೆ ಮಟ್ಟ ನೀರಿದ್ದರೆ ಹೇಗೋ ಧೈರ್ಯಮಾಡಿ ನದಿ ದಾಟಿಕೊಂಡು ಶಾಲೆಗೆ ಹೋಗುತ್ತಿದ್ದ. ಆದರೆ ಮೊದಲಿಗೆ ನದಿ ಬೇಸಿಗೆಯಲ್ಲಿ ಈಗಿನಂತೆ ಒಣಗುತ್ತಿರಲಿಲ್ಲ. ಮೊಣಕಾಲು ಮಟ್ಟದವರೆಗಾದರೂ ನೀರು ಹರಿಯುತ್ತಿದ್ದವು. ಆಗ ಹುಡುಗರೊಂದಿಗೆ ಈಜಾಡುವುದೆಂದರೆ ಎಲ್ಲಿಲ್ಲದ ಖುಷಿ.

ಇನ್ನು ಊರಿನಲ್ಲಿ ಹಬ್ಬ–ಜಾತ್ರೆ ನಡೆದಾಗ ಉರುಮೆ (ಅರೆ)–ತಮಟೆ ವಾದ್ಯಗಳನ್ನು ಬಡಿಸಿಕೊಂಡು ಅವುಗಳ ತಾಳದ ಗತ್ತಿಗೆ ಕುಣಿಯುತ್ತಿದ್ದ. ವಾರಿಗೆ ಹುಡುಗರೊಂದಿಗೆ ಸೇರಿ ಕೋಲು ಹಾಕುವುದನ್ನು ಕಲಿತು ಒಂದು ತಂಡವನ್ನೇ ಕಟ್ಟಿ ಅದರ ಮುಮ್ಮೇಳಗಾರನಾದ. ಭಜನೆ ಪದಗಳನ್ನು ಕಲಿತು, ತನ್ನ ಬಳಗದ ಹುಡುಗರೊಂದಿಗೆ ವಾರಕ್ಕೊಮ್ಮೆ ದೇವಸ್ಥಾನದಲ್ಲಿ ಭಜನೆ ಮಾಡುತ್ತಾ ಹೊತ್ತು ಕಳೆಯುತ್ತಿದ್ದ.

ತಾಯಿ ರುದ್ರಮ್ಮ ಜನಪದ ಗಾಯಕಿಯಾಗಿದ್ದಳು. ತಾಯಿಯ ಹಾದಿಯಲ್ಲಿ ತಂಗಿ ಪುಟ್ಟೀರಮ್ಮನೂ ನಡೆಯುತ್ತಿದ್ದುದರಿಂದ ಅವಳೂ ಒಳ್ಳೆಯ ಹಾಡುಗಾತಿಯಾಗಿದ್ದಳು. ತಂದೆ ಬಸಪ್ಪ, ಅಣ್ಣ ಸಿದ್ದಯ್ಯ ಬಯಲಾಟದಲ್ಲಿ ಪಾತ್ರಗಳನ್ನು ಮಾಡುತ್ತಿದ್ದರು. ಬಹುಶಃ ಮನೆಯಲ್ಲಿನ ಕಲಾಮಯ ವಾತಾವರಣವೇ ಗುರುಸಿದ್ದಪ್ಪನವರನ್ನು ಕಲಾವಿದನಾಗಿ ರೂಪಿಸಲು ಕಾರಣವಾಗಿದ್ದಂತೆ ತೋರುತ್ತದೆ.

ಬಾಲಕ ಗುರುಸಿದ್ದಪ್ಪನಿಗೆ ಸಾಹಿತ್ಯ–ಸಂಗೀತವೆಂದರೆ ಎಲ್ಲಿಲ್ಲದ ಪ್ರೀತಿ. ಆಗ ಸುತ್ತಿನ ಹಳ್ಳಿಗಳಲ್ಲಿ ಬಯಲಾಟಗಳು ಸಾಕಷ್ಟು ನಡೆಯುತ್ತಿದ್ದವು. ಎಲ್ಲೇ ಬಯಲಾಟ ನಡೆದರೂ ತನ್ನ ಸ್ನೇಹಿತರ ದಂಡು ಕಟ್ಟಿಕೊಂಡು ಹೋಗಿ ನೋಡಿ ಬರುತ್ತಿದ್ದ. ಬಯಲಾಟದ ಹಾಡುಗಳೆಂದರೆ ಪ್ರಾಣ, ಅವುಗಳನ್ನು ಕಷ್ಟಪಟ್ಟು ಕಲಿತುಕೊಂಡು

ಕಂಠಪಾಠ ಮಾಡಿ ಹಾಡುತ್ತಾ ಸಂತೋಷಪಡುತ್ತಿದ್ದ. ಹೇಗಾದರು ಮಾಡಿ ಈ ಹಾಡುಗಳನ್ನು ತಾಳ–ಮದ್ದಲೆ ವಾದ್ಯಗಳೊಂದಿಗೆ ಹಾಡಬೇಕೆಂಬ ಆಸೆ. ಬಡಗಿ ಲಕ್ಷ್ಮಣಾಚಾರಿಯವರ ಮನೆಯಲ್ಲಿ ಈ ಸಂಗೀತ ವಾದ್ಯಗಳು ಇದ್ದವು. ಇವುಗಳನ್ನು ಬಾರಿಸುವ ಅನುಭವ ಇಲ್ಲದಿದ್ದರೂ, ಮನೆಯಲ್ಲಿ ಗೆಳೆಯನ ತಂದೆ–ತಾಯಿಗಳು ಇಲ್ಲದ ಸಮಯ ನೋಡಿ ಹಾಡುತ್ತಾ, ತನಗೆ ತೋಚಿದಂತೆ ವಾದ್ಯಗಳನ್ನು ಬಡಿಯುತ್ತಾ ಖುಷಿಪಡುತ್ತಿದ್ದ. ಹೀಗೆ ಹೊತ್ತು–ಗೊತ್ತು ಇಲ್ಲದೆ, ಹಗಲು–ರಾತ್ರಿ ಎನ್ನದೆ, ಯಾವಾಗ ಬೇಕೆಂದರೆ ಆವಾಗ ವಾದ್ಯಗಳನ್ನು ಬಡಿದು ಸದ್ದು ಗದ್ದಲ ಸೃಷ್ಟಿಸುತ್ತಿದ್ದ ಹುಡುಗ ಅನೇಕ ಬಾರಿ ಊರಿನ ಗೌಡ ಹನುಮಂತರಾಯಪ್ಪನವರಿಂದ ಬಯ್ಯಿಸಿಕೊಂಡದ್ದುಂಟು.

ಹೀಗೆ ಸಾಹಿತ್ಯ–ಸಂಗೀತದ ಹುಚ್ಚು ಹತ್ತಿಸಿಕೊಂಡರೂ ಶಾಲೆಯ ಓದಿನಲ್ಲಿ ಹಿಂದೆ ಬೀಳುತ್ತಿರಲಿಲ್ಲ. ಹೀಗಾಗಿ ೧೯೪೩ರಲ್ಲಿ ಜಾಜೂರಿನ ಹವ್ಯಾಸಿ ಕಲಾವಿದರು ಅಭಿನಯಿಸಿದ 'ಭಕ್ತ ಮಾರ್ಕಾಂಡೇಯ' ನಾಟಕದಲ್ಲಿ ಒಂದು ಪುಟ್ಟ ಸ್ತ್ರೀಪಾತ್ರ ಮಾಡುವ ಅವಕಾಶ ಸಿಕ್ಕಿತು. ಹೀಗೆ ಅವರ ರಂಗಪ್ರವೇಶದ ಪ್ರಥಮ ಕಾರ್ಯಕ್ರಮದ ಉದ್ಘಾಟನೆಯಾಯಿತು. ಬಾಲಕನಲ್ಲಿ ಸುಪ್ತವಾಗಿದ್ದ ಪ್ರತಿಭೆ ಹೊರಹೊಮ್ಮಲು ಇದು ವೇದಿಕೆಯಾಯಿತು.

ಬೆಳೆಯುವ ಸಿರಿ ಮೊಳಕೆಯಲ್ಲೇ ಎಂಬಂತೆ ಗುರುಸಿದ್ದಪ್ಪನವರ ಆಸಕ್ತಿಗಳು ಒಂದೊಂದೇ ಚಿಗುರುತ್ತಾ ಬೆಳೆಯತೊಡಗಿದವು. ಅದನ್ನು ನೀರೆರೆದು ಪೋಷಿಸಿದ ಗುರುಗಳೆಂದರೆ ಜಾಜೂರಿನ ಬ್ರಾಹ್ಮಣರ ರಾಮದಾಸಪ್ಪ, ವಿಡಪನಕುಂಟೆಯ ಒಕ್ಕಲಿಗರ ವಿ.ಎ.ರುದ್ರಪ್ಪ ಅವರು. ಇವರ ಗಾಢ ಪ್ರಭಾವ ಮತ್ತು ಮಾರ್ಗದರ್ಶನ ಅವರನ್ನು ಬೇರೆಯದೇ ವ್ಯಕ್ತಿಯಾಗಿ ರೂಪಿಸಿತು. ಅತ್ತ ನಾಗಗೊಂಡನಹಳ್ಳಿಯಿಂದ ಜಾಜೂರಿಗೆ ಓಡಿಯಾಡುತ್ತಲೇ ೭ನೇ ತರಗತಿ ಮುಗಿಸಿದರು, ಉನ್ನತ ಶ್ರೇಣಿಯಲ್ಲಿ ಪಾಸಾದರು. ಹುಡುಗ ಯಾವತ್ತೂ ಪಟ್ಟು ಹಿಡಿದು ಕೂತು ಓದಿದವನಲ್ಲ. ಶಾಲೆಯಲ್ಲಿ ಮನಸ್ಸಿಟ್ಟು ಪಾಠ ಕೇಳುತ್ತಿದ್ದ, ಚೆನ್ನಾಗಿ ಮನನನ ಮಾಡಿಕೊಳ್ಳುತ್ತಿದ್ದ, ಓದಿದ್ದು ಮನಸ್ಸಿನಲ್ಲಿ ಅಚ್ಚೊತ್ತಿದ್ದಂತೆ ಉಳಿದು ಬಿಡುತ್ತಿತ್ತು. ಹೀಗಾಗೇ ಹೊರನೋಟಕ್ಕೆ ಹೆಚ್ಚು ಕಷ್ಟಪಟ್ಟಂತೆ ಕಾಣದಿದ್ದರೂ ಪರೀಕ್ಷೆಗಳಲ್ಲಿ ಮಾತ್ರ ತೇರ್ಗಡೆಯಾಗಿ ಬಿಡುತ್ತಿದ್ದ.

## ನಾಟಕದ ಗೀಳು

ಮಿಡಲ್‌ಸ್ಕೂಲ್ ಮುಗಿದ ಮೇಲೆ ಹೈಸ್ಕೂಲು ಓದಬೇಕೆಂದರೆ ಆಗ ತಾಲ್ಲೂಕು ಕೇಂದ್ರವಾದ ಚಳ್ಳಕೆರೆಗೇ ಹೋಗಬೇಕಿತ್ತು. ಅದು ತಮ್ಮ ಹಳ್ಳಿಯಿಂದ ಸುಮಾರು ೩೦ ಕಿ.ಮೀ. ದೂರದಲ್ಲಿತ್ತು. ಆಗ ಇಡೀ ತಾಲ್ಲೂಕಿಗೆ ಇದ್ದದ್ದು ಒಂದೇ ಪ್ರೌಢಶಾಲೆ.

೧೯೪೭ರಲ್ಲಿ ಹೋಗಿ ಪ್ರೌಢಶಾಲೆಯ ೪ನೇ ಫಾರಂಗೆ ಅಂದರೆ ಆಗಿನ ೮ನೇ ತರಗತಿಗೆ ಸೇರಿದರು. ದೇಹ ಚಳ್ಳಕೆರೆಯಲ್ಲಿದ್ದರೂ ಮನಸ್ಸು ಮಾತ್ರ ತಮ್ಮ ಹಳ್ಳಿಯ ಸುತ್ತಲೇ ಸುತ್ತುತ್ತಿತ್ತು. ಊರಿಗೆ ಹೋಗುವ ಒಂದು ಸಣ್ಣ ಅವಕಾಶ ಸಿಕ್ಕರೂ ಬಿಡುತ್ತಿರಲಿಲ್ಲ. ಬೇಸಿಗೆ ರಜೆಯಲ್ಲಿ ಊರಿಗೆ ಹೋದಾಗ ಹುಡುಗನ ನಾಟಕದ ಆಸಕ್ತಿ ಗರಿಬಿಚ್ಚಿ–ಕುಣಿಯುತ್ತಿತ್ತು. ಅತ್ತೆಯ ಊರು ಅರವಿಗೊಂಡನಹಳ್ಳಿ ತಮ್ಮ ಹಳ್ಳಿಯಿಂದ ಕೇವಲ ೪–೫ ಕಿಲೋ ಮೀಟರ್ ದೂರದಲ್ಲಿತ್ತು. ಅಲ್ಲಿಗೆ ಹೋಗಿ ಗೆಳೆಯರನ್ನು ಸಂಘಟಿಸಿ 'ಸತೀ ಸುಲೋಚನ' ನಾಟಕ ಕಟ್ಟಿ, ಅದರಲ್ಲಿ ರಾವಣನ ಪಾತ್ರವಹಿಸಿ ಅಪಾರ ಜನಮೆಚ್ಚಿಗೆ ಗಳಿಸಿದ.

ಮತ್ತೊಂದು ಬೇಸಿಗೆ ರಜೆಯಲ್ಲಿ ತನ್ನ ಹಳ್ಳಿ ನಾಗಗೊಂಡನಹಳ್ಳಿಯಲ್ಲೇ ಹಿರಿಯರು ಕಟ್ಟಿದ 'ಕುರುಕ್ಷೇತ್ರ' ನಾಟಕದಲ್ಲಿ ಅಭಿಮನ್ಯು ಪಾತ್ರವಹಿಸಿ ಜನರ ಪ್ರೀತಿಗೆ ಪಾತ್ರನಾದ. ಮತ್ತೆ ೧೯೪೮ರಲ್ಲಿ ತಮ್ಮ ಊರಿನ ಗೆಳೆಯರೊಂದಿಗೆ ಸೇರಿ 'ಭೌಮಾಸುರ' ನಾಟಕದಲ್ಲಿ ಭೌಮಾಸುರನ ಪಾತ್ರವನ್ನೇ ವಹಿಸಿ ಅದ್ಭುತವಾದ ಯಶಸ್ಸು ಸಂಪಾದಿಸಿದ. ದಷ್ಟಪುಷ್ಟವಾಗಿ ಮೈಕೈ ತುಂಬಿಕೊಂಡ ದೇಹ, ದುಂಡು ಮುಖದ ಸುರದ್ರೂಪ ಆ ಪಾತ್ರಕ್ಕೆ ಮೆರುಗು ತಂದಿತ್ತು. ಜೊತೆಗೆ ಸೊಗಸಾದ ಇಂಥ ಶರೀರಕ್ಕೆ ಇಂಪಾದ ಶಾರೀರ (ಕಂಠ)ವೂ ಕೂಡಿದ್ದು, ನಾಟಕದ ಮಟ್ಟುಗಳನ್ನು ಲೀಲಾಜಾಲವಾಗಿ ಹಾಡುತ್ತಿದ್ದುದು ಪ್ರೇಕ್ಷಕರಲ್ಲಿ ಹುಚ್ಚೆಬ್ಬಿಸಿತು. ಈ ನಾಟಕದ ಮೂಲಕ ಒಬ್ಬ ಪರಿಪೂರ್ಣ ಕಲಾವಿದನ ಅವತಾರವಾಗಿತ್ತು. ಮುಂದಿನ ದಿನಗಳಲ್ಲಿ ಇವನೊಬ್ಬ ಒಳ್ಳೆಯ ಕಲಾವಿದನಾಗುವುದರಲ್ಲಿ ಸಂಶಯವಿಲ್ಲ ಎಂಬ ಭರವಸೆ ಮೂಡಿಸಿದ್ದ.

ಈ ನಾಟಕದ ಸಂದರ್ಭದಲ್ಲೇ ಒಂದು ಸ್ವಾರಸ್ಯಕರ ಘಟನೆ ನಡೆಯಿತು. ಭೌಮಾಸುರನ ಅಂತ್ಯ ಸಮೀಪಿಸಿದಾಗ ಅವನು ದುಃಖದಿಂದ ವಿಲಾಪಿಸುತ್ತಾ, ಹಾಡುತ್ತಾ ನೆಲಕ್ಕೆ ಬಿದ್ದು ಸಾಯುವ ದೃಶ್ಯ ಅಮೋಘವಾಗಿ ಮೂಡಿ ಬಂತು. ಭೌಮಾಸುರ ಪಾತ್ರಧಾರಿಯಾದ ಗುರುಸಿದ್ದಪ್ಪನವರು ಸಾಯುತ್ತಾ ನೆಲಕ್ಕೆ ಬೀಳುವ ದೃಶ್ಯವನ್ನು ಪರಿಣಾಮಕಾರಿಯಾಗಿ ಅಭಿನಯಿಸಿದರು. ಪ್ರೇಕ್ಷಕರ ಮನಸೂರೆಗೊಂಡ ಈ ದೃಶ್ಯಕ್ಕೆ 'ಒನ್ಸ್‌ಮೋರ್' (ಮತ್ತೊಮ್ಮೆ ಅಭಿನಯಿಸಿ) ಎಂಬ ಬೇಡಿಕೆ ಬಂತು. ಜನರ ಕೋರಿಕೆಗೆ ಮಣಿದು ಸತ್ತು ನೆಲಕ್ಕೆ ಬಿದ್ದ ಭೌಮಾಸುರ ಮತ್ತೆ ಮೇಲೆದ್ದು ಇನ್ನೊಮ್ಮೆ ಹಾಡಿ ಮತ್ತೆ ಸಾಯುತ್ತಾ ನೆಲಕ್ಕೆ ಬೀಳುವ ದೃಶ್ಯವನ್ನು ಪುನರಭಿನಯಿಸಬೇಕಾಯಿತು! ಆಗ ನಾಟಕಗಳಲ್ಲಿ ಹುಡುಗಿಯೊಂದಿಗಿನ ಕುಣಿತಕ್ಕೆ 'ಒನ್ಸ್‌ಮೋರ್' ಬೀಳುತ್ತಿತ್ತು. ಆದರೆ ಇಲ್ಲಿ ದುಃಖದ ದೃಶ್ಯಕ್ಕೂ ಒನ್ಸ್‌ಮೋರ್ ಬಿತ್ತು!

ಮತ್ತೆ ಎದ್ದು ಅಭಿನಯಿಸದಿದ್ದರೆ ಪ್ರೇಕ್ಷಕರು ಸಿಟ್ಟಾಗಿ ಗಲಾಟೆ ಮಾಡುತ್ತಿದ್ದರು. ಅದಕ್ಕೇ ನಾಟಕದ ಹ್ಯಾಂಡ್‌ಬಿಲ್ (ಕರಪತ್ರ)ಗಳಲ್ಲಿ 'ಒನ್ಸ್‌ಮೋರ್' ಎಂದಲ್ಲಿ ಅಭಿನಯಿಸುವುದು ಪಾತ್ರಧಾರಿಗಳಿಗೆ ಇಷ್ಟಕ್ಕೆ ಬಿಟ್ಟದ್ದು ಎಂಬ ವಿಶೇಷ ಸೂಚನೆ ಪ್ರಕಟಿಸುವ ಪರಿಪಾಠ ಬಂದದ್ದನ್ನು ನೆನೆಯಬಹುದು.

ಹೀಗೆ ಆಡುತ್ತಾ ಓದುತ್ತಾ ಎಸ್.ಎಸ್.ಎಲ್.ಸಿ. ಪರೀಕ್ಷೆ ಪಾಸಾಗಿ ಬಿಟ್ಟ, ಆ ಕಾಲಕ್ಕೆ ಇದೊಂದು ದೊಡ್ಡ ಸಾಧನೆ. ಆಗ ಸುತ್ತಿನ ಹಳ್ಳಿಗಳಲ್ಲಿ ಎಸ್.ಎಸ್.ಎಲ್.ಸಿ. ಪಾಸಾದವರು ಬೆರಳೆಣಿಕೆಯಲ್ಲಿ ಇದ್ದರು.

### ಸಂಸಾರ ಜೀವನ

ಎಸ್.ಎಸ್.ಎಲ್.ಸಿ. ಪಾಸಾದ ಹುಮ್ಮಸ್ಸಿನಲ್ಲಿದ್ದ ಗುರುಸಿದ್ದಪ್ಪನಿಗೆ ಮುಂದಕ್ಕೆ ಓದಬೇಕೆಂಬ ಹಂಬಲ. ಆದರೆ ಬದುಕು ಅನಿರೀಕ್ಷಿತ ತಿರುವು ಪಡೆಯಿತು. ಕೇವಲ ೨೦ ವರ್ಷದ ಎಳೆಯ ವಯಸ್ಸಿಗೇ ತಂದೆ-ತಾಯಿ ಮದುವೆ ಮಾಡಿಬಿಡಬೇಕೆಂಬ ನಿರ್ಧಾರಕ್ಕೆ ಬಂದರು. ಸೋದರತ್ತೆ ಶಾಂತಮ್ಮನವರು ಮಗಳು ತಿಪ್ಪಮ್ಮನನ್ನು ತಂದು ೧೯೫೦ರಲ್ಲಿ ಮದುವೆ ಮಾಡಿದರು. ಸಂಸಾರಿಯಾದದ್ದರಿಂದ ಹೆಚ್ಚಿನ ಓದಿಗೆ ಮನೆಯವರಿಂದ ಉತ್ತೇಜನ ದೊರೆಯಲಿಲ್ಲ. ಕುಲಕಸುಬಾದ ವ್ಯವಸಾಯ ಮಾಡಿಕೊಂಡು ಹೋಗಲಿ ಎಂಬುದು ತಂದೆ-ತಾಯಿಗಳ ಬಯಕೆಯಾಗಿತ್ತು.

ಆದರೆ ಗುರುಸಿದ್ದಪ್ಪ ಕುಟುಂಬದ ಜವಬ್ದಾರಿಗೆ ಹೆಗಲು ಕೊಡದೆ ಗೆಳೆಯರನ್ನು ಸೇರಿಸಿಕೊಂಡು ಒಂದು ಹವ್ಯಾಸಿ ನಾಟಕ ತಂಡವನ್ನು ಕಟ್ಟಿ, ಈ ಹಿಂದೆ ಹೆಸರು ತಂದುಕೊಟ್ಟಿದ್ದ 'ಅಭಿಮನ್ಯು' ನಾಟಕವನ್ನೇ ಅಭಿನಯಿಸಬೇಕು ಎಂದುಕೊಂಡರು. ಆದರೆ ಆ ಕಾಲದಲ್ಲಿ ಜನಗಳಲ್ಲಿ ಸಾಮಾಜಿಕ ನಾಟಕದ ಹೊಸ ಗಾಳಿ ಬೀಸತೊಡಗಿತು. ಇಲ್ಲಿಯವರೆಗೂ ಅಭಿನಯಿಸಿಕೊಂಡು ಬಂದಿದ್ದ ಪೌರಾಣಿಕ ನಾಟಕಗಳತ್ತ ಆಕರ್ಷಣೆ ಕಡಿಮೆಯಾಗತೊಡಗಿತು. ಆದಾಗ್ಯೂ ಹಳೆಯ ನಾಟಕಗಳನ್ನು ಸಂಪೂರ್ಣವಾಗಿ ಕೈಬಿಡುವ ಬಗ್ಗೆ ನಟರಲ್ಲೇ ಭಿನ್ನಾಭಿಪ್ರಾಯವಿದ್ದುದರಿಂದ ಪೌರಾಣಿಕದೊಂದಿಗೆ ಸಾಮಾಜಿಕ ನಾಟಕವನ್ನೂ ಕಲಿಯಲು ತೀರ್ಮಾನಿಸಿದರು. ಇದಕ್ಕಾಗಿ 'ಕಾಲೇಜ್ ಗರ್ಲ್' ಎಂಬ ನಾಟಕವನ್ನು ಆರಿಸಿದರು. ಇವರ ನಾಟಕಗಳ ಆಯ್ಕೆ 'ಹಳೆ ಬೇರು ಹೊಸ ಚಿಗುರು' ಎಂಬಂತಿತ್ತು.

ಈ ಎರಡೂ ನಾಟಕಗಳನ್ನು ಕಲಿಸುವ ನಾಟಕದ ಮಾಸ್ಟರ್ ಅಂದರೆ ಹಾರ್ಮೋನಿಯಂ ನುಡಿಸುವ ಸಂಗೀತ ಮಾಸ್ಟರ್ ಯಾರನ್ನು ಕರೆಸಬೇಕು ಎಂಬ ಬಗ್ಗೆ ಚರ್ಚೆಯಾಯಿತು. ಕೊನೆಗೆ ಆಗ ಬಹುದೊಡ್ಡ ಹೆಸರು ಮಾಡಿದ್ದ ಚಳ್ಳಕೆರೆ

ತಾಲ್ಲೂಕಿಗೇ ಸೇರಿದ ಬಾಲೇನಹಳ್ಳಿಯ ಬಿ.ಪಿ. ಮಲ್ಲಾರೆಡ್ಡಿಯವರನ್ನು ಕರೆಸಲು ತೀರ್ಮಾನವಾಯಿತು. ಆಗ ಹಾರ್ಮೋನಿಯಂ ನುಡಿಸಿ ಸಂಗೀತ ನೀಡುವ, ಹಾಡು ಕಲಿಸುವ ಸಂಗೀತ ಮಾಸ್ತರೇ ಅಭಿನಯವನ್ನು ಹೇಳಿಕೊಡುವ ನಿರ್ದೇಶನದ ಕೆಲಸವನ್ನೂ ಮಾಡಬೇಕಿತ್ತು. ಈಗ ಹವ್ಯಾಸಿ ನಾಟಕ ತಂಡಗಳಲ್ಲಿ ನಿರ್ದೇಶನಕ್ಕೋಸ್ಕರವೇ ಸಿನಿಮಾದಂತೆ ಬೇರೊಬ್ಬ ವ್ಯಕ್ತಿಯಿದ್ದರೆ, ಈಗಲೂ ಹಳ್ಳಿಯಲ್ಲಿ 'ಡ್ರಾಮಾ' ಎಂದು ಕರೆಸಿಕೊಳ್ಳುವ ನಾಟಕಕ್ಕೆ ಹಳೆಯ ವ್ಯವಸ್ಥೆಯೇ ಮುಂದುವರೆದಿದೆ. ಯಕ್ಷಗಾನ ನಾಟಕಗಳಲ್ಲಿ ಭಾಗವತ (ಮುಮ್ಮೇಳಗಾರ) ಈ ಕಾರ್ಯ ನಿರ್ವಹಿಸುತ್ತಿದ್ದ.

ಸಂಗೀತದಲ್ಲಿ ಅದ್ಭುತವಾದ ಸಾಧನೆ ಮಾಡಿದ್ದ ಮಲ್ಲಾರೆಡ್ಡಿಯವರೇ ಇವರಿಗೆ ನಾಟಕದ ಮಾಸ್ತರಾಗಿ ದೊರೆತದ್ದರಿಂದ ಗುರುಸಿದ್ದಪ್ಪನವರ ಬದುಕಿನಲ್ಲಿ ಮಹತ್ವದ ತಿರುವಿಗೆ ಕಾರಣವಾದುದು ಒಂದು ಯೋಗಾಯೋಗವೆನ್ನಬೇಕು.

### ನಾಟಕ–ಸಂಗೀತಗಳ ಸಮಾಗಮ

'ಅಭಿಮನ್ಯು' ಮತ್ತು 'ಕಾಲೇಜ್ ಗರ್ಲ್' ನಾಟಕಗಳಲ್ಲಿ ಕ್ರಮವಾಗಿ ಅಭಿಮನ್ಯು, ಬಾಲಚಂದ್ರನ ಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸಿದ ಗುರುಸಿದ್ದಪ್ಪನವರ ಶರೀರ (ದೇಹಸೌಷ್ಠವ) ಮತ್ತು ಶಾರೀರ (ಧ್ವನಿ ಸೌಂದರ್ಯ)ಗಳ ಹೊಂದಾಣಿಕೆ ಅಮೋಘವಾಗಿದ್ದುದರಿಂದ ಜನ ಮೆಚ್ಚಿ ಪ್ರಶಂಸೆಯ ಸುರಿಮಳೆಯನ್ನೇ ಸುರಿಸಿದರು. ದೈವದತ್ತವಾಗಿ ದೊರೆತ ಗುರುಸಿದ್ದಪ್ಪನವರ ಧ್ವನಿಯನ್ನು ಮಲ್ಲಾರೆಡ್ಡಿಯವರು ಅಭ್ಯಾಸದ ಮೂಲಕ ಚೆನ್ನಾಗಿ ಸಾಣೆ ಹಿಡಿದರು. ಹಾಡ್ತಾ ಹಾಡ್ತಾ ರಾಗ ಎಂಬಂತೆ ಸಂಗೀತವನ್ನೇ ಯಾಕೆ ಕಲಿಯಬಾರದು ಎಂಬ ಆಸಕ್ತಿ ಗುರುಸಿದ್ದಪ್ಪನವರಲ್ಲಿ ಮೊಳೆಯಿತು. ಹೇಗೂ ನಾಟಕ ಕಲಿಸಲು ಊರಿಗೆ ಆಗಮಿಸಿದ್ದ ಮಲ್ಲಾರೆಡ್ಡಿಯವರೇ ಸಂಗೀತದ ಗುರುವಾದರು. ನಾಟಕದ ಅಭ್ಯಾಸದ ಜೊತೆಜೊತೆಗೇ ಶಾಸ್ತ್ರೀಯ ಸಂಗೀತದ ಪಾಠವೂ ಷುರುವಾಯಿತು. ಒಂದು ವರ್ಷದಲ್ಲಿ ಕಲಿಯುವ ಪಾಠವನ್ನು ಗುರುಸಿದ್ದಪ್ಪನವರು ಆಶ್ಚರ್ಯಕರವೆಂಬಂತೆ ಮೂರೇ ತಿಂಗಳಲ್ಲಿ ಕಲಿತರು. ಜೊತೆಗೇ ಹಾರ್ಮೋನಿಯಂ ವಾದ್ಯ ನುಡಿಸುವುದನ್ನು ಕಲಿತು, ೧೯೫೦ರ ಅದೇ ವರ್ಷ ಹಾರ್ಮೋನಿಯಂ ಮಾಸ್ತರಾಗಿ ತಮ್ಮ ಊರಿನ ಪಕ್ಕದ ಹರವಿಗೊಂಡನಹಳ್ಳಿಯಲ್ಲಿ 'ದಾನಶೂರ ಕರ್ಣ' ನಾಟಕವನ್ನು ಆಡಿಸಿ ನಾಟಕ ನಿರ್ದೇಶಕರೆನಿಸಿಕೊಂಡರು. ಆ ನಾಟಕ ಪ್ರದರ್ಶನ ಸಂದರ್ಭದಲ್ಲಿ ಒಂದು ಸ್ವಾರಸ್ಯಕರ ಘಟನೆ ನಡೆಯಿತು. ನಾಟಕ ಆಡುವ ದಿನದ ಬೆಳಿಗ್ಗೆ ೧೦ ಗಂಟೆಗೆ ಗುರುಸಿದ್ದಪ್ಪನವರ ಅತ್ತಿಗೆ ಸತ್ತಳು. ನಾಟಕ ಏರ್ಪಾಟು ಮಾಡಿಕೊಂಡವರೆಲ್ಲ ತಲೆಯ ಮೇಲೆ ಕೈಹೊತ್ತು ಕೂತರು. ಏಕೆಂದರೆ

ನಾಟಕವನ್ನು ಕಲಿಸಿದವರು ಗುರುಸಿದ್ದಪ್ಪನವರೇ. ಅವರಿಗೆ ಹಾರ್ಮೋನಿಯಂ ನುಡಿಸಿ ಎಂದು ಹೇಗೆ ಹೇಳುವುದು ಎಂದು ಎಲ್ಲರೂ ಪರಿತಾಪ ಪಡುತ್ತಿದ್ದರು. ಇವರ ಪಡಿಪಾಟಲು ನೋಡಿದ ಗುರುಸಿದ್ದಪ್ಪನ ಅಪ್ಪ ಮಗನನ್ನು ಕರೆದು "ನಾಟಕ ನಿಂತೋದರೆ ಸತ್ತ ಅತ್ತಿಗೆ ಎದ್ದು ಬರ್ತಾಳೇನೋ? ಸಂಜೆ ಹೊತ್ತಿಗೆ ಮಣ್ಣಾಗುತ್ತೆ. ಹೋಗಿ ನಾಟ್ಕ ಆಡೋಗು" ಎಂದರು. ಹೀಗೆ ಮಗನ ಅಭಿನಯ ಕಲೆಯನ್ನು ಪ್ರೋತ್ಸಾಹಿಸುವ ತಂದೆಯರು ಎಲ್ಲಿ ಸಿಗುತ್ತಾರೆ. ಗುರುಸಿದ್ದಪ್ಪನವರಿಗೆ ಓದು ಕೈಬಿಟ್ಟಿತು ಎನ್ನುವಷ್ಟರಲ್ಲಿ ಸಂಗೀತ ಕೈ ಹಿಡಿಯಿತು. ಅದೇ ವೃತ್ತಿಜೀವನವೂ ಆಯಿತು. ಅವರ ಕುಟುಂಬದ ಕಸುಬು ವ್ಯವಸಾಯವೇ ಆಗಿದ್ದರೂ ಯಾಕೋ ಅದರತ್ತ ಇವರ ಮನಸ್ಸು ಹರಿಯಲಿಲ್ಲ. ಒಲಿದು ಬಂದ ಸಂಗೀತ ಶಾರದೆಯನ್ನೇ ಆರಾಧಿಸತೊಡಗಿದರು. ಸಂಗೀತ–ನಾಟಕ ಅವರ ಎರಡು ಕಣ್ಣುಗಳಾದವು.

## ಗ್ರಾಮೀಣ ರಂಗಭೂಮಿ

೫೦–೬೦ರ ದಶಕಗಳು ನಾಟಕ ಕಲೆಯ ಉಚ್ಛ್ರಾಯ ಕಾಲಗಳಾಗಿದ್ದವು. ಎಲ್ಲ ಹಳ್ಳಿಗಳಲ್ಲೂ ವರ್ಷಕ್ಕೆ ಒಂದೆರಡು ನಾಟಕಗಳನ್ನಾದರೂ ಆಡುವ ಪರಿಪಾಠವಿತ್ತು. ಆಗಾಗ್ಗೆ ನಾಟಕದ ಕಂಪನಿಗಳೂ ಬಂದು, ಹಲವು ತಿಂಗಳುಗಳ ಕಾಲ ನೆಲೆನಿಂತು ನಾಟಕ ಪ್ರದರ್ಶಿಸುತ್ತಿದ್ದವು. ಜನ ಪ್ರೀತಿಯಿಂದ ಕಲೆ–ಕಲಾವಿದರನ್ನು ಆದರಿಸುವ ವಾತಾವರಣವಿತ್ತು.

ಇಂಥ ಸುಷುಮ ಕಾಲದಲ್ಲಿ ಸಂಗೀತ–ನಾಟಕಗಳೆರಡನ್ನೂ ಒಲಿಸಿಕೊಂಡ ಗುರುಸಿದ್ದಪ್ಪನವರಿಗೆ ಸುತ್ತಿನ ಹತ್ತಾರು ಹಳ್ಳಿಗಳಲ್ಲಿ ನಾಟಕ ಕಲಿಸಲು ಬೇಡಿಕೆ ಬರುತ್ತಿದ್ದವು. ಆಗೆಲ್ಲ ಒಂದೊಂದು ನಾಟಕಕ್ಕೆ ಕನಿಷ್ಠ ೨–೩ ತಿಂಗಳುಗಳ ಕಾಲ ಪ್ರಾಕ್ಟೀಸ್ ನಡೆಯುತ್ತಿತ್ತು. ಪಾತ್ರಧಾರಿಗಳು ತಮ್ಮ ಇಷ್ಟದ ಪಾತ್ರವನ್ನು ಆರಿಸಿಕೊಂಡ ನಂತರ ಅವರವರ ಡೈಲಾಗ್ (ಸಂಭಾಷಣೆ) ಕೈಯಲ್ಲೇ ಬರೆದುಕೊಂಡು (ಆಗ ಜೆರಾಕ್ಸ್‌ಗಳು ಇಲ್ಲದಿದ್ದರಿಂದ ಪ್ರತಿಯೊಬ್ಬ ಪಾತ್ರಧಾರಿಯೂ ತನ್ನ ಮತ್ತು ತನ್ನೊಂದಿಗೆ ಮಾತು ಇರುವ ಪಾತ್ರದ ಸಂಭಾಷಣೆಗಳನ್ನು ತಾವೇ ಕೈಯಾರೆ ಬರೆದುಕೊಳ್ಳಬೇಕಿತ್ತು.) ಚೆನ್ನಾಗಿ ಬಾಯ್‌ಹರ್ಟ್ (ಕಂಠಪಾಠ) ಮಾಡುತ್ತಿದ್ದರು. ಇನ್ನು ಸ್ಕ್ರಿಪ್ಟ್ (ಇದನ್ನು 'ಪ್ಲಾಟ್' ಎಂದು ಕರೆಯುತ್ತಿದ್ದರು.) ನೋಡಿಕೊಳ್ಳದೇ ನೆನಪಿನ ಶಕ್ತಿಯಿಂದ ತಮ್ಮ ಡೈಲಾಗ್ ತಾವೇ ಹೇಳುವಷ್ಟರಮಟ್ಟಿಗೆ ತಯಾರಿ ಆದ ನಂತರ ನಾಟಕದ ಮೇಸ್ತ್ರ ಪ್ರವೇಶ ಆಗುತ್ತಿತ್ತು. ಅವರ ಆಗಮನದೊಂದಿಗೆ ಲೆಗ್ ಹಾರ್ಮೋನಿಯಂ ಬರುತ್ತಿತ್ತು. ಅದನ್ನು ತಿಂಗಳ ಬಾಡಿಗೆ ಅಥವಾ ಒಟ್ಟು ನಾಟಕ ಮುಗಿಯುವವರೆಗೆ ಎಂಬ

ಕರಾರಿನ ಮೇಲೆ ತರುತ್ತಿದ್ದರು. ಕೈಯಿಂದ ತಿದಿ ಹಾಕುತ್ತಾ ನುಡಿಸುವ ಹಾರ್ಮೋನಿಯಂ ನಾಟಕದ ಪ್ರಾಕ್ಟೀಸ್‌ಗೆ ಸರಿಹೋಗುತ್ತಿರಲಿಲ್ಲ ಅಥವಾ ಅದರಿಂದ ಹೊರಡುವ ಧ್ವನಿ ಸಾಕಾಗುತ್ತಿರಲಿಲ್ಲ. ಹೀಗಾಗಿ ಕಾಲಿನಿಂದ ತಿದಿ ಹಾಕುತ್ತಾ ನುಡಿಸುವ ಲೆಗ್ (ಕಾಲು) ಹಾರ್ಮೋನಿಯಂ ಬೇಕಾಗುತ್ತಿತ್ತು. ಇದರ ಧ್ವನಿ ಮೈಕ್ ಇಲ್ಲದೆಯೇ ಒಂದು ಕಿ.ಮೀ. ದೂರದವರೆಗೂ ಕೇಳುವ ಸಾಮರ್ಥ್ಯ ಹೊಂದಿದೆ. ಆಗಿನ ಕಾಲದಲ್ಲಿ ಇದಕ್ಕೆ ಬಾಡಿಗೆಯೆಂದು ದಿನಕ್ಕೆ ಒಂದು ರೂಪಾಯಿ ಇದ್ದರೆ, ಇದೀಗ ಅದಕ್ಕೆ ದಿನಕ್ಕೆ ೧೦೦/– ರವರೆಗೆ ಇದೆ.

ನಾಟಕ ಕಲಿಸಲು ಬರುವ ಮೇಸ್ತ್ರಿಗೆ ವಾಸಕ್ಕೆ ಉಳಿದುಕೊಳ್ಳಲು ಪ್ರಾಕ್ಟೀಸ್‌ನ ಮನೆ ಇಲ್ಲವೇ ಅನುಕೂಲವಿರುವ ಯಾರಾದರೊಬ್ಬ ಪಾತ್ರಧಾರಿಯ ಮನೆಯ ಜಗಲಿಯೇ ಮಲಗುವ ಸ್ಥಳವಾಗುತ್ತಿತ್ತು. ಹಾಗೂ ಊಟಕ್ಕೆ ಅನುಕೂಲಸ್ಥ ಪಾತ್ರಧಾರಿಯ ಮನೆ ಗೊತ್ತು ಮಾಡುತ್ತಿದ್ದರು. ಇಲ್ಲವೇ ಒಬ್ಬರಿಗೇ ಹೊರೆಯಾಗದಿರಲೆಂದು ಬೆಳಿಗ್ಗೆ ಒಬ್ಬರ ಮನೆಯಾದರೆ, ರಾತ್ರಿಗೆ ಮತ್ತೊಬ್ಬರ ಮನೆಯನ್ನು ಗೊತ್ತು ಮಾಡುತ್ತಿದ್ದರು. ಸಾಮಾನ್ಯವಾಗಿ ನಾಟಕದ ಮೇಸ್ತ್ರಿಗೆ ಎಲೆ ಅಡಿಕೆ ಜಗಿಯುವ, ಬೀಡಿ ಸೇದುವ ಮತ್ತು ಮದ್ಯಪಾನ ಮಾಡುವ ಅಭ್ಯಾಸ ಇರುತ್ತಿತ್ತು. ಇವೆಲ್ಲ ಬೇಡಿಕೆಗಳಿಗೆ ನಾಟಕಕ್ಕೆ ಪಾತ್ರಧಾರಿಗಳಿಂದ ಸಂಗ್ರಹಿಸಿದ ವಂತಿಗೆಯಿಂದ ಖರ್ಚು ಹಾಕಿ ಕೊಡುತ್ತಿದ್ದರು. ಆದರೆ ಗುರುಸಿದ್ದಪ್ಪನವರಿಗೆ ಈ ಯಾವ ಅಭ್ಯಾಸಗಳೂ ಇರಲಿಲ್ಲ!

೬೦–೭೦ರ ದಶಕದಲ್ಲಿ ನಾಟಕಗಳಲ್ಲಿನ ಸ್ತ್ರೀಪಾತ್ರಗಳನ್ನು ಗಂಡಸರೇ ನಿರ್ವಹಿಸುತ್ತಿದ್ದರು. ಸ್ವಲ್ಪ ಕೋಮಲ ದೇಹದ, ಮಧುರ ಕಂಠದ ಗಂಡಸರನ್ನು ಇಂತ ಪಾತ್ರಗಳಿಗೆ ಆರಿಸಲಾಗುತ್ತಿತ್ತು. ಎಲ್ಲರೂ ತಿರಸ್ಕರಿಸಿದ ಸ್ತ್ರೀಪಾತ್ರಗಳಲ್ಲಿ ಅಭಿನಯಿಸುವ ಕಲಾವಿದರಿಗೆ ಅವರು ಹಾಕುವ ವಂತಿಗೆಯಲ್ಲಿ ರಿಯಾಯಿತಿ ಸಿಗುತ್ತಿತ್ತು. ಏಕೆಂದರೆ ಇಡೀ ನಾಟಕದ ಖರ್ಚು ವೆಚ್ಚಗಳಿಗೆ ಅಂದರೆ ಸೀನರಿ, ಮೈಕ್‌ಸೆಟ್ ಮತ್ತು ತಬಲಾ ಮುಂತಾದ ಪಕ್ಕವಾದ್ಯದವರಿಗೆ, ನಾಟಕ ಪ್ರಾಕ್ಟೀಸ್ ಮಾಡಿಸಿದ ಸಂಗೀತ ಮಾಸ್ತರಿಗೆ ಸಂಭಾವನೆ ಇತ್ಯಾದಿಗಳ ಅಂದಾಜು ವೆಚ್ಚವನ್ನು ಸ್ಥೂಲವಾಗಿ ಲೆಕ್ಕ ಹಾಕಿ ಎಲ್ಲ ಪಾತ್ರಧಾರಿಗಳು ಹಂಚಿಕೊಂಡು ವಂತಿಗೆ ಸಂಗ್ರಹಿಸುತ್ತಿದ್ದರು. ನಾಯಕ ಮತ್ತು ಖಳನಾಯಕ ಪಾತ್ರ ಮಾಡುವವರು ಬೇರೆಯವರಿಗಿಂತ ಹೆಚ್ಚಿನ ವಂತಿಗೆ ನೀಡುತ್ತಿದ್ದರು, ಏಕೆಂದರೆ ಆ ಪಾತ್ರಗಳಿಗಾಗಿ ಕಲಾವಿದರಲ್ಲಿ ಪೈಪೋಟಿ ಇರುತ್ತಿತ್ತು.

ಬರಬರುತ್ತಾ ಸ್ತ್ರೀಪಾತ್ರಗಳನ್ನು ಮಾಡುವವರೇ ಇಲ್ಲದಂತಾಯಿತು. ಆಗ

ಹೊರಗಡೆಯಿಂದ ಇಂಥ ಪಾತ್ರಗಳಿಗಾಗಿಯೇ ಇರುತಿದ್ದ ನಾಟಕದ ಹುಡುಗಿಯರನ್ನು ಕರೆಸುತ್ತಿದ್ದರು. ಅವರು ನಾಟಕ ಪ್ರದರ್ಶನವಾಗುವ ೨-೩ ದಿನಗಳ ಮುಂಚೆ ಬರುತ್ತಿದ್ದರು. ಆ ಅಲ್ಪ ಅವಧಿಯಲ್ಲೇ ಸಂಭಾಷಣೆ ಕಲಿತು, ಸಹನಟರೊಂದಿಗೆ ಪ್ರಾಕ್ಟೀಸಿನಲ್ಲಿ ಸಹಕರಿಸುತ್ತಿದ್ದರು. ನಾಟಕದ ಹುಡುಗಿಯರಿಗೆ ಅವರ ಸೌಂದರ್ಯಕ್ಕೆ ಅನುಗುಣವಾಗಿ ಸಂಭಾವನೆ ನೀಡುತ್ತಿದ್ದರು. ಥಳುಕುಬಳುಕಿನ ಈ ಹುಡುಗಿಯರೊಂದಿಗೆ ಎಲ್ಲರೂ ಹಾಡಿ, ನರ್ತಿಸಲು ಆಸೆ ಪಡುತ್ತಿದ್ದರು. ಈ ಹುಡುಗಿಯರ ಕೈಕೈ ಹಿಡಿದುಕೊಂಡು, ಅವರ ದೇಹ ಮುಟ್ಟುತ್ತಾ ಹಾಡು ಹೇಳುವುದಕ್ಕೆ ಸಂಭ್ರಮಿಸುತ್ತಿದ್ದರು. ತಮಗೆ ಆಕೆಯೊಂದಿಗೆ ಹಾಡುವ, ಕುಣಿಯುವ ಅವಕಾಶ ನಾಟಕದಲ್ಲಿ ಇಲ್ಲದಿದ್ದರೂ ಹೇಗಾದರೂ ಮಾಡಿ ಆಕೆಯೊಂದಿಗೆ ಹಾಡು ಹಾಕಿ ಕೊಡಿ ಎಂದು ಸಂಗೀತ ಮೇಸ್ತ್ರಿಗೆ ದುಂಬಾಲು ಬೀಳುತ್ತಿದ್ದರು. ಇಂಥ ಹುಡುಗಿಯರೊಂದಿಗೆ ಅನೈತಿಕ ಸಂಬಂಧಕ್ಕೆ ಹಾತೊರೆಯುವುದೂ ಮಾಮೂಲಾಗಿತ್ತು. ಎಷ್ಟೋ ಜನ ತಮ್ಮ ಸಂಸಾರಗಳನ್ನು ಹಾಳುಮಾಡಿಕೊಂಡು ಇಂಥ ಹುಡುಗಿಯರ ಹಿಂದೆ ಹೋದ, ಅವರನ್ನೇ ಮದುವೆಯಾದ, ದುರಂತ ಅಂತ್ಯ ಕಂಡ ಬೇಕಾದಷ್ಟು ಉದಾಹರಣೆಗಳಿವೆ.

ಅದೇನೇ ಇರಲಿ ಇಂಥ ಹುಡುಗಿಯರು ನಾಟಕಕ್ಕೆ ಹಳ್ಳಿಗೆ ಬಂದಾಗ ಅವರ ಊಟೋಪಚಾರಗಳಿಗೆ ತಮ್ಮ ತಮ್ಮ ಮನೆಗೆ ಕರೆದುಕೊಂಡು ಹೋಗಲು ಪಾತ್ರಧಾರಿಗಳಲ್ಲೇ ಪೈಪೋಟಿ ಉಂಟಾಗುತ್ತಿತ್ತು. ಕೊನೆಗೆ ಆ ನಾಟಕದ ಹುಡುಗಿಯರು ಊರು ಬಿಡುವಾಗ ಭಾರೀ ಕಾಣಿಕೆ, ಕಾಳು-ಕಡಿಗಳೊಂದಿಗೆ ಹೋಗುತ್ತಿದ್ದರು.

ಹಾಡುಗಳಿರುವ ಪಾತ್ರಧಾರಿಗಳು ಅವರ ಬಿಡುವಿನ ವೇಳೆಯಲ್ಲಿ ಬಂದು ಸಂಗೀತ ಮೇಸ್ಟರ ದಿಗ್ದರ್ಶನ ಮತ್ತು ಹಾರ್ಮೋನಿಯಂ ಸಾಥಿಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಅಪರೂಪಕ್ಕೆ ಒಬ್ಬೊಬ್ಬರ ಕಂಠಗಳು ಮಧುರವಾಗಿದ್ದರೆ ಬಹುಪಾಲು ಪಾತ್ರಧಾರಿಗಳ ಕಂಠಗಳು ಕರ್ಕಶವಾಗೇ ಇರುತ್ತಿದ್ದವು. ಅಂಥ ಕಗ್ಗಲ್ಲುಗಳನ್ನು ಕೆತ್ತಿ ಶಿಲ್ಪ ಮಾಡಬೇಕಿತ್ತು ಸಂಗೀತ ಮಾಸ್ಟರು. ಈಗಿನಂತೆ ಸಿನಿಮಾ ಹಾಡು ಹಾಕಿಕೊಂಡು ಹಾಡುವ ಅಥವಾ ಹಿನ್ನೆಲೆ ಗಾಯಕರಿಂದ ಹಾಡಿಸುವ ಪರಿಪಾಠವಿರಲಿಲ್ಲ. ಅದೆಂಥದೇ ಕಂಠವಿದ್ದರೂ ಪಾತ್ರಧಾರಿಗಳೇ ಹಾಡಬೇಕಿತ್ತು.

ಮೊದಲಿಗೆ ಬರೀ ಪೌರಾಣಿಕ-ಐತಿಹಾಸಿಕ ನಾಟಕಗಳನ್ನೇ ಆಡುವ ಪರಿಪಾಠವಿತ್ತು. ಅಷ್ಟೇನು ಸುಶಿಕ್ಷಿತರಲ್ಲದ ಜನ ಬಯಲಾಟ ಆಡುತ್ತಿದ್ದರು. ಆದರೆ ಬರಬರುತ್ತಾ ಬಯಲಾಟ ಆಡುವವರ ಸಂಖ್ಯೆ ಕ್ಷೀಣಿಸಿ ಎಲ್ಲರೂ ಕ್ರಮೇಣ 'ಡ್ರಾಮಾ' ಎಂದು ಕರೆಯುವ ನಾಟಕದತ್ತ ವಾಲತೊಡಗಿದರು. ಕ್ರಮೇಣ ಇವರು

ಪೌರಾಣಿಕ–ಐತಿಹಾಸಿಕ ನಾಟಕಗಳಿಂದಲೂ ಸರಿಯತೊಡಗಿ ಸಾಮಾಜಿಕ ನಾಟಕಗಳನ್ನೇ ಹೆಚ್ಚು ಅಭಿನಯಿಸತೊಡಗಿದರು. ಅಪರೂಪಕ್ಕೊಮ್ಮೆ ಐತಿಹಾಸಿಕ ನಾಟಕಗಳನ್ನು ಆಡುತ್ತಿದ್ದರು. ಸಾಮಾಜಿಕ ನಾಟಕಗಳಿಗಿಂತ ಐತಿಹಾಸಿಕ ನಾಟಕಗಳಿಗೆ ವೇಷಭೂಷಣ, ಸೀನರಿ ವಿಚಾರಗಳಲ್ಲಿ ಹೆಚ್ಚು ಖರ್ಚು ಬರುತ್ತಿತ್ತು. ಹೀಗಾಗಿ ಕ್ರಮೇಣ ಐತಿಹಾಸಿಕ ನಾಟಕಗಳೂ ಮೂಲೆಗೆ ಸರಿಯತೊಡಗಿದವು. ಉತ್ತರ ಕರ್ನಾಟಕದ ನಾಟಕಕಾರಾದ ಧುತ್ತರಗಿ, ಅರಿಶಿಷಣಗೋಡಿಯವರ ನಾಟಕಗಳನ್ನೇ ಆಡುತ್ತಿದ್ದರು. ಕಂದಗಲ್ ಹನುಮಂತರಾವ್, ಬಿ.ಪುಟ್ಟಸ್ವಾಮಯ್ಯ, ಮರಡಿಹಳ್ಳಿ ಸೀತಾರಾಮರೆಡ್ಡಿ ಅವರ ಪೌರಾಣಿಕ–ಐತಿಹಾಸಿಕ ನಾಟಕಗಳನ್ನು ೮೦ರ ದಶಕದವರೆಗೂ ಹೆಚ್ಚು ಆಡುತ್ತಿದ್ದುದು, ನಂತರದ ದಿನಗಳಲ್ಲಿ ಸಾಮಾಜಿಕ ನಾಟಕಗಳೇ ವಿಜೃಂಭಿಸತೊಡಗಿದವು.

ಐತಿಹಾಸಿಕ ನಾಟಕಗಳಲ್ಲಿ ಸುದೀರ್ಘವಾದ ಸಂಭಾಷಣೆಗಳು ಇರುತ್ತಿದ್ದವು. ಇಲ್ಲಿ ಅಭಿನಯಕ್ಕಿಂತ ಡೈಲಾಗ್ ಡೆಲಿವರಿಗೇ ಹೆಚ್ಚಿನ ಪ್ರಾಶಸ್ತ್ಯವಿರುತ್ತಿತ್ತು. ಎಷ್ಟೋ ಜನರಿಗೆ ಕೆಲವು ಪೌರಾಣಿಕ–ಐತಿಹಾಸಿಕ ಪಾತ್ರಗಳು ಒಪ್ಪುತ್ತಿದ್ದವೆಂದರೆ, ನಾಟಕ ಮುಗಿದು ಅವರ ಜೀವಿತಶೇಷದವರೆಗೂ ನಾಟಕದ ಪಾತ್ರದ ಹೆಸರುಗಳೇ ಅವರಿಗೆ ಸ್ಥಿರವಾಗಿ ನಿಂತು ಬಿಡುತ್ತಿದ್ದವು. ಅವರ ಹುಟ್ಟು ಹೆಸರುಗಳು ಶಾಶ್ವತವಾಗಿ ಮರೆಯಾಗಿ ಬಿಡುತ್ತಿದ್ದವು.

ಇಂಥ ವಾತಾವರಣದಲ್ಲಿ ಗುರುಸಿದ್ದಪ್ಪನವರು ಅಭಿನಯ ಕ್ಷೇತ್ರಕ್ಕೆ ಧುಮುಕಿದರು. ಒಮ್ಮೆ ಆಗ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಚಳ್ಳಕೆರೆಗೆ ಬಂದಿದ್ದರು. ಆಗಿನ ಹಳೆ ಟಿ.ಬಿ. (ಈಗಿನ ಆಸ್ಪತ್ರೆ ಹಿಂಭಾಗದ ಪ್ರಯೋಗಶಾಲೆಯಿರುವ ಹೆಂಚಿನ ಕಟ್ಟಡ)ಯ ಮುಂದುಗಡೆಯೇ ಇದ್ದ ಸಭಾಕಟ್ಟೆಯನ್ನೇ ರಂಗಭೂಮಿ ಮಾಡಿಕೊಂಡು ಬೆಳೆಗೆರೆ ಕೃಷ್ಣಶಾಸ್ತ್ರಿಯವರ 'ಹಳ್ಳಿಚಿತ್ರ' ನಾಟಕ ಪ್ರದರ್ಶನವನ್ನು ಅವರಿಗಾಗಿ ಏರ್ಪಾಟು ಮಾಡಿದ್ದು, ನೈಜವಾದ ಹಳ್ಳಿಯ ಚಿತ್ರ ರಂಗಭೂಮಿ ಮೇಲೆ ಒಡಮೂಡಿದ್ದನ್ನು ಹನುಮಂತಯ್ಯನವರು ಬಹುವಾಗಿ ಮೆಚ್ಚಿಕೊಂಡರು.

ಬಿ.ಪಿ. ಮಲ್ಲಾರೆಡ್ಡಿಯವರಿಂದಲೇ ರಚಿತವಾದ 'ಭಾನುಮತಿ' ನಾಟಕದಲ್ಲಿ ಕರ್ಣನ ಪಾತ್ರವನ್ನು ಗುರುಸಿದ್ದಪ್ಪನವರು ಅನೇಕ ಬಾರಿ ಮಾಡಿದ್ದರು. ತಮ್ಮ ಊರಿನ ಪಕ್ಕದ ಚಿತ್ರನಾಯಕನಹಳ್ಳಿಯಲ್ಲಿ 'ಅಣ್ಣ–ತಮ್ಮ' ನಾಟಕ ಇತ್ತು. ಅದನ್ನು ನೋಡೋಣವೆಂದು ಬೆಳಿಗ್ಗೆಯೇ ಅಲ್ಲಿಗೆ ಬಂದಿದ್ದರು. ಸಂಜೆಯವರೆಗೆ ಮಾಡುವುದೇನೆಂದು, ಪಕ್ಕದ ಊರಲ್ಲಿ ನಾಟಕ ಕಲಿಸುತ್ತಿದ್ದ ತಮ್ಮ ಸಂಗೀತ ಗುರುಗಳಾದ ಮಲ್ಲಾರೆಡ್ಡಿಯವರನ್ನು ಮಾತನಾಡಿಸಿಕೊಂಡು ಬರೋಣವೆಂದು

ಘಟಪರ್ತಿಗೆ ಹೋದರು. ಅದೇ ದಿನ ರಾತ್ರಿ 'ಕರ್ಣ' ನಾಟಕ ಪ್ರದರ್ಶನ ಇದ್ದುದರಿಂದ ಮಲ್ಲಾರೆಡ್ಡಿಯುವರು ಗುರುಸಿದ್ದಪ್ಪನವರನ್ನು ಬಲವಂತವಾಗಿ ಅಲ್ಲಿಯೇ ಉಳಿಸಿಕೊಂಡರು. ನಾಟಕ ಪ್ರಾರಂಭವಾಯಿತು. ಒಂದೆರಡು ದೃಶ್ಯಗಳ ನಂತರ ಕರ್ಣನ ಪಾತ್ರ ಪ್ರವೇಶ. ಆದರೆ ಪಾತ್ರಧಾರಿಯೇ ನಾಪತ್ತೆ. ಮೇಕಪ್ ಮಾಡಿಕೊಂಡು ಎಲ್ಲೋ ಕುಡಿದು ಮಲಗಿದವನು, ಎಷ್ಟು ಹುಡುಕಿದರೂ ಸಿಗಲಿಲ್ಲ. ಅನಿರೀಕ್ಷಿತವಾಗಿ ಗುರುಸಿದ್ದಪ್ಪನವರ ಕೊರಳಿಗೆ ಕರ್ಣ ಪಾತ್ರ ಬಿತ್ತು. ಮುಖದ ತುಂಬಾ ಬೆಳೆದಿದ್ದ ಗಡ್ಡವೂ ತೆಗೆದಿರಲಿಲ್ಲ. ಆಗ ಇನ್ನೂ ಕರೆಂಟ್ ಬಂದಿರಲಿಲ್ಲ, ಡೈನಾಮೋ ಕೂಡ ಇರಲಿಲ್ಲ. ಪೆಟ್ರೋಮ್ಯಾಕ್ಸ್ ಲೈಟಲ್ಲಿ ನಾಟಕ ಆಡುತ್ತಿದ್ದರು. ಮೇಕಪ್ ರೂಮಿನಲ್ಲಿ ಬರೀ ಲಾಟೀನು ಬೆಳಕಿತ್ತು. ಅದು ಸಾಕಾಗುತ್ತಿರಲಿಲ್ಲ. ಅದೇ ಬೆಳಕಲ್ಲಿ ಕಷ್ಟಪಟ್ಟು ಗಡ್ಡ ಕೆರೆದು ಮೇಕಪ್ ಮಾಡಿಕೊಂಡು, ಯಶಸ್ವಿಯಾಗಿ ಪಾತ್ರ ಕಳೆಗಟ್ಟಿಸಿದರು. ಗುರುಸಿದ್ದಪ್ಪನವರು ತಾವೇ ಸ್ವತಃ ಸಂಗೀತ ನೀಡಿ, ನಾಟಕ ನಿರ್ದೇಶನ ಮಾಡುವ ಮಟ್ಟಕ್ಕೆ ಬೆಳೆದರೂ ಅವರ ಪ್ರಾರಂಭದ ದಿನಗಳಲ್ಲಿ ಪ್ರಥಮ ಪ್ರಾಶಸ್ತ್ಯ ನೀಡುತ್ತಿದ್ದುದು ಅಭಿನಯಕ್ಕೇ. ಹೊರಗಿನ ಎಷ್ಟೋ ನಾಟಕ ತಂಡದವರು ಸುಪ್ರಸಿದ್ಧ ಪಾತ್ರಗಳನ್ನು ಅಭಿನಯಿಸಲು ಇವರಿಗೆ ಎಲ್ಲರಿಗಿಂತ ಹೆಚ್ಚಿನ ಸಂಭಾವನೆ ನೀಡಿ ಕರೆಸುತ್ತಿದ್ದರು. ಆದಾಗ್ಯೂ ಅಲ್ಲೊಂದು-ಇಲ್ಲೊಂದು ನಾಟಕಗಳಿಗೆ ಸಂಗೀತ ಮತ್ತು ನಿರ್ದೇಶನ ನೀಡುತ್ತಿದ್ದರು.

ಆಗ ಡ್ರಾಮಾ ಸೀನರಿಗಳಿಗೆ ತಪ್ಪಗೊಂಡನಹಳ್ಳಿಯ ಪದ್ಮಶಾಲಿ (ನೆಯ್ಗೆಯವರು) ಜಾತಿಗೆ ಸೇರಿದ ಹನುಮಂತರಾಯಪ್ಪನದು ಹೆಸರಾಗಿತ್ತು. ಸೀನರಿಗಳನ್ನು ಸ್ವಯಂ ಹನುಮಂತರಾಯಪ್ಪನೇ ಬರೆಯುತ್ತಿದ್ದ. ಇವರ ಸೀನರಿ ಕಂಪನಿಯ ಸೂಚನೆ ಎಂಬಂತೆ ಸೈಡ್‌ವಿಂಗ್‌ಗಳಲ್ಲಿ 'ಕೈಮುಗಿದ ಕೋತಿಯ ಚಿತ್ರ' ಇರುತ್ತಿತ್ತು. ಈಗ ಈ ವ್ಯವಹಾರವನ್ನು ಅವರ ಮಕ್ಕಳಾದ ಗೋವಿಂದಪ್ಪ-ಮಲ್ಲಿಕಾರ್ಜುನ ನೋಡಿಕೊಳ್ಳುತ್ತಿದ್ದಾರೆ. ಹಿಂದೆ ಸೀನರಿಗಳನ್ನು ಎತ್ತಿನಗಾಡಿಯಲ್ಲಿ ಹೇರಿಕೊಂಡು ಬರುತ್ತಿದ್ದರು. ಈಗ ಟ್ರಾಕ್ಟರ್‌ಗಳಲ್ಲಿ ತರುತ್ತಾರೆ. ಇದರ ಜೊತೆಗೆ ತಬಲ ಮುರಿಗಪ್ಪನ ಸೀನರಿ ಕೂಡಾ ಇತ್ತು. ಆದರೆ ಶಿರಾ ತಾಲ್ಲೂಕಿನ ತರೂರು ಸೀನ್ ಅದರ ವೈಭವಕ್ಕೆ ಹೆಸರಾಗಿತ್ತು. ಆದರೆ ತಪ್ಪಗೊಂಡನಹಳ್ಳಿ ಸೀನರಿಗೆ ಇದು ಸಾಟಿಯಾಗುತ್ತಿರಲಿಲ್ಲ. ತುಂಬಾ ಅತ್ಯಾಧುನಿಕ ಸೌಲಭ್ಯಗಳಿಂದ ಕೂಡಿದ್ದ ಅದನ್ನು ಲಾರಿಯಿಂದ ತಂದು ಕೆಲವೇ ಗಂಟೆಗಳಲ್ಲಿ ಸ್ಟೇಜ್ ನಿರ್ಮಾಣ ಮಾಡುತ್ತಿದ್ದರು. ಮೇಕಪ್ ಕೂಡಾ ಸೀನರಿಯವರ ಜವಾಬ್ದಾರಿಯೇ ಆಗಿತ್ತು. ತರೂರು ಸೀನ್ಸ್ ಐತಿಹಾಸಿಕ ನಾಟಕಗಳಿಗಂತೂ ಹೇಳಿ ಮಾಡಿಸಿದಂತಿತ್ತು. ಆದರೆ ತುಂಬಾ ದುಬಾರಿ ಎಂದು ಕರೆಸುತ್ತಿರಲಿಲ್ಲ.

ತಮ್ಮ ಊರಿಗೆ ಸಮೀಪದ ಚಿಲುಮೆಸ್ವಾಮಿ ಕ್ಷೇತ್ರದಲ್ಲಿ ಪ್ರತಿವರ್ಷ ತಪ್ಪದೆ ಜಾತ್ರೆ ನಡೆಯುತ್ತಿತ್ತು. (ಇತ್ತೀಚಿನ ಹತ್ತು ಹದಿನೈದು ವರ್ಷಗಳಲ್ಲಿ ದನಗಳ ಜಾತ್ರೆ ನಿಂತಿದೆ, ಆದರೆ ಉತ್ಸವ, ತೇರು ನಿಂತಿಲ್ಲ. ಆದರೆ ದನಗಳ ಜಾತ್ರೆಯ ಸಂದರ್ಭದಲ್ಲಿ ಒಂದು ವಾರದ ಉದ್ದಕ್ಕೂ ಇರುತ್ತಿದ್ದ ಜನಸಂದಣಿ ಈಗ ಇಲ್ಲ. ಈಗ ಕೇವಲ ಒಂದು ದಿನದ ರಥೋತ್ಸವ, ಅಷ್ಟೆ) ಆಗ ತಪ್ಪದೆ ದಿನ ಬಿಟ್ಟು ದಿನ ನಾಟಕಗಳು ನಡೆಯುತ್ತಿದ್ದವು. ಕ್ರಮೇಣ ಚಲನಚಿತ್ರದ ಟೂರಿಂಗ್ ಟಾಕೀಸ್ ಕೂಡಾ ಬರುತ್ತಿತ್ತು. ಆದಾಗ್ಯೂ ನಾಟಕ ತನ್ನ ಆಕರ್ಷಣೆಯನ್ನೇನೂ ಕಳೆದುಕೊಂಡಿರಲಿಲ್ಲ. ಅದಕ್ಕೆ ಅದರದೇ ಆದ ಪ್ರೇಕ್ಷಕರಿದ್ದರು. ಹತ್ತಿರದಲ್ಲೇ ಇದ್ದ ಗುರುಸಿದ್ದಪ್ಪನವರಿಗೆ ಇದು ತಮ್ಮ ಪ್ರತಿಭಾ ಪ್ರದರ್ಶನದ ಆಡೊಂಬೊಲವಾಯಿತು.

## ಶಾಸ್ತ್ರಿಯವರ ಪ್ರಭಾವ

೧೯೫೫ರಲ್ಲಿ ಬೆಳಗೆರೆ ಕೃಷ್ಣಶಾಸ್ತ್ರಿಗಳ ಪರಿಚಯವಾದ ನಂತರ (ಆಗ ಅವರು ಮೀರಾಸಾಬಿಹಳ್ಳಿಯ ಪ್ರೈಮರಿ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು.) ಅವರೇ ಬರೆದ 'ಪಾಶುಪತಾಸ್ತ್ರ' ನಾಟಕದಲ್ಲಿ ಅರ್ಜುನನ ಪಾತ್ರ, 'ಸೊಹ್ರಾಬ್ ರುಸ್ತುಂ' ನಾಟಕದಲ್ಲಿ ಸೊಹ್ರಾಬ್‌ನ ಪಾತ್ರ, 'ಹಳ್ಳಿಚಿತ್ರ' ನಾಟಕದಲ್ಲಿ ಸುಧಾಕರ ಮತ್ತು ಬಯಲಾಟದ ಪಾತ್ರಗಳನ್ನು ಅಭಿನಯಿಸಿದ ನಂತರ ಶಾಸ್ತ್ರಿಯವರೊಂದಿಗೆ ಬೆಳೆದ ಆತ್ಮೀಯತೆ ವಿಶ್ವಾಸಕ್ಕೆ ತಿರುಗಿತು. ಅವರೊಂದಿಗಿನ ಲೋಕಾಭಿರಾಮ ಮಾತುಕತೆಯಲ್ಲಿ ಸುಪ್ತವಾಗಿದ್ದ ಸಾಹಿತ್ಯ ಪ್ರೀತಿ ಗರಿಗೆದರತೊಡಗಿತು. ಅವರೊಂದಿಗಿನ ಚರ್ಚೆ ಜೈಮಿನಿ ಭಾರತವನ್ನು ಮತ್ತಷ್ಟು ಆಳಕ್ಕಿಳಿದು ತಿಳಿದುಕೊಳ್ಳಲು ಸಹಾಯವಾಯಿತು. (ಇದರ ದಟ್ಟವಾದ ಪ್ರಭಾವವೇ ಗುರುಸಿದ್ದಪ್ಪನವರಿಂದ ಮುಂದಿನ ದಿನಗಳಲ್ಲಿ 'ಭಕ್ತ ಸುಧನ್ವ' ನಾಟಕವನ್ನು ಬರೆಸಿತು.) ಅಲ್ಲದೆ ಅವರ ಒಡನಾಟ, ಅನೇಕ ಸಾಹಿತ್ಯ ಕೃತಿಗಳನ್ನು ಓದಿಕೊಳ್ಳಲು ಪ್ರೇರಣೆಯಾಯಿತು. ಕುಮಾರವ್ಯಾಸನ ಗದುಗಿನ ಭಾರತ, ಲಕ್ಷ್ಮೀಶನ ಜೈಮಿನಿ ಭಾರತ, ರನ್ನನ ಗಧಾಯುದ್ಧ, ಪಂಪನ ವಿಕ್ರಮಾರ್ಜುನ ವಿಜಯ, ನಾಗಚಂದ್ರನ ಜೈನ ರಾಮಾಯಣ; ರಾಘವಾಂಕನ ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಚರಿತೆ, ಸೋಮನಾಥ ಚರಿತೆ, ವೀರೇಶ ಚರಿತೆ; ಚಾಮರಸನ ಪ್ರಭುಲಿಂಗಲೀಲೆ, ಹರಿಹರನ ರಗಳೆಗಳು, ಶಿವಶರಣರ ವಚನ ಸಾಹಿತ್ಯ, ಕುವೆಂಪುರವರ ರಾಮಾಯಣ ದರ್ಶನಂ – ಹೀಗೆ ಸಾಹಿತ್ಯ ಪ್ರೀತಿ ಬೆಳೆಯತೊಡಗಿತ್ತು. [ಬಹುಶಃ ಇದರ ಪ್ರಭಾವವೇ ಇರಬೇಕು ಅವರು ೧೯೭೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 'ರತ್ನ' ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾದರು. ಈ ಓದಿನಿಂದ ಮುಂದೆ ಅವರು ಅನೇಕ ನಾಟಕಗಳನ್ನು ಬರೆದರು (ಅದನ್ನು ಮುಂದೆ ವಿವರಿಸಲಾಗುವುದು).]

### ಅನ್ಯ ಪ್ರಭಾವ

ಚಿತ್ರದುರ್ಗ ಜಿಲ್ಲಾ ಕಲಾವಿದರ ಸಂಘದಿಂದ ಮರಡಿಹಳ್ಳಿ ಸೀತಾರಾಮರೆಡ್ಡಿಯವರ ಚಕ್ರವ್ಯೂಹ, ದುರ್ದೈವ ನಾಟಕಗಳಲ್ಲಿ ಅಭಿನಯಿಸಿದ ನಂತರ ರೆಡ್ಡಿಗಳ ಒಡನಾಟವೂ ದೊರೆಯಿತು. ಕೊಂಡ್ಲಹಳ್ಳಿಯ ಅಶ್ವತ್ಥಪ್ಪನವರ ನಟನೆಯನ್ನು ಅಪಾರವಾಗಿ ಮೆಚ್ಚಿಕೊಳ್ಳುತ್ತಿದ್ದ ಗುರುಸಿದ್ದಪ್ಪನವರಿಗೆ ಅವರು ಆದರ್ಶ ನಟರೆನಿಸಿದ್ದರು. ಹೀಗಾಗಿ ತಾವು ಆಡಿಸುತ್ತಿದ್ದ ನಾಟಕಗಳ ಪ್ರಾಕ್ಟೀಸಿಗೆ ತಮ್ಮ ಮೆಚ್ಚಿನ ನಟನನ್ನು ಕರೆಸಿ ಪಾತ್ರಧಾರಿಗಳಿಗೆ ಸ್ಫೂರ್ತಿ ತುಂಬುತ್ತಿದ್ದರು, ಅವರಿಂದ ಮಾರ್ಗದರ್ಶನ ಮಾಡಿಸುತ್ತಿದ್ದರು. ಅದರಲ್ಲೂ ರೆಡ್ಡಿಯವರ 'ರಾಜಾವೀರ ಮದಕರಿನಾಯಕ' ನಾಟಕ ಜನರ ಮನಸೂರೆಗೊಂಡಿತ್ತು. ಅದು ಜಿಲ್ಲೆಯ ಗಡಿಗಳನ್ನು ದಾಟಿ ಜನಪ್ರಿಯವಾಗಿತ್ತು. ಹಿರಿಯೂರಿನ ಸುಬ್ಬಾವಧಾನಿಗಳ ನೇತೃತ್ವದಲ್ಲಿ ನಡೆಯುತ್ತಿದ್ದ ನಾಟಕದಲ್ಲಿ 'ಎಚ್ಚಮನಾಯಕ'ನ ಪಾತ್ರವಹಿಸುತ್ತಿದ್ದರು. ಕೃಷ್ಣಶಾಸ್ತ್ರಿಯವರು ಮೀರಾಸಾಬಿಹಳ್ಳಿಯಿಂದ ಹೆಗ್ಗೆರೆಗೆ ವರ್ಗವಾದ ನಂತರ ಅಲ್ಲಿ ಆಡಿಸಿದ 'ಶ್ರೀ ಬಸವೇಶ್ವರ' ನಾಟಕದಲ್ಲಿ ಬಸವೇಶ್ವರನ ಪಾತ್ರವಹಿಸಿ ಪ್ರಸಿದ್ಧರಾದರು. ಹೀಗೆ ಅವರ ಬದುಕೇ ನಾಟಕಕ್ಕೆ ಮುಡಿಪಾಯಿತು. ಆ ಕಾಲಕ್ಕೆ ಪಾತ್ರವಹಿಸಲು ಕೇವಲ ನಟನಾಗಿ ಆಹ್ವಾನಿತರಾದರೆ ಬೇರೆಯವರಿಗೆ ರೂ. ೧೦೦/- ಸಂಭಾವನೆ ಇದ್ದರೆ ಇವರಿಗೆ ರೂ.೧೫೦-೨೦೦ ಕೊಡುತ್ತಿದ್ದರು.

### ಸಂಗೀತದ ಗುಂಗು

ನಟನೆಯೊಂದಿಗೇ ಮಲ್ಲಾರೆಡ್ಡಿಯವರಿಂದ ಸಂಗೀತಪಾಠವಾಗಿತ್ತು. ಆದರೆ ಅದರಲ್ಲಿ ಮತ್ತಷ್ಟು ಪರಿಣತಿಯನ್ನು ಗಳಿಸಬೇಕೆಂಬ ಮಹತ್ವಾಕಾಂಕ್ಷೆಯೇ ಮುಂದೆ ಅವರು ಶಾಸ್ತ್ರೀಯವಾಗಿ ಸಂಗೀತವನ್ನು ಕಲಿಯುವಂತೆ ಮಾಡಿತು. ನಾಟಕದ ಮಧ್ಯದ ಬಿಡುವಿನಲ್ಲಿ ಅವರ ಸಂಗೀತದ ತಾಲೀಮು ಷುರುವಾಯಿತು.

ಆಗ ಚಿತ್ರದುರ್ಗದಲ್ಲಿ ಸಂಗೀತ ವಿದ್ವಾನ್ ಎಂದು ಹೆಸರಾಗಿದ್ದ ರಂಗಶೆಟ್ಟಿ ಅವರಿಂದ ವ್ಯವಸ್ಥಿತವಾಗಿ ಸಂಗೀತದ ಕಲಿಕೆ ಪ್ರಾರಂಭವಾಯಿತು. ಈ ಭಾಗದಲ್ಲಿ ಆಗ ಪ್ರಚುರದಲ್ಲಿ ಇದ್ದುದು ಕರ್ನಾಟಕ ಸಂಗೀತ, ಉತ್ತರಾದಿ ಏನಿದ್ದರೂ ದಾವಣಗೆರೆ-ಬಳ್ಳಾರಿಗಳ ಆಚಿನ ಪ್ರದೇಶದಲ್ಲಿ ಚಾಲ್ತಿಯಲ್ಲಿತ್ತು. ಗುರುಸಿದ್ದಪ್ಪನವರೊಂದಿಗೆ ಹರ್ತಿಕೋಟೆಯ ಹುಟ್ಟು ಕುರುಡರಾದ ಕೆ.ಹೊನ್ನಪ್ಪನವರೂ ಸೇರಿಕೊಂಡರು. ಇಬ್ಬರ ಸಂಗೀತ ಸಾಧನೆ ಹಗಲು ರಾತ್ರಿ ಎನ್ನದೆ ಸಾಗಿತು. ಸಂಗೀತವನ್ನು ಬರೀ ಆಸಕ್ತಿಯಿಂದ ಕಲಿತರೆ ಸಾಲದು, ಅದನ್ನು ಸಂಗೀತ ಪರೀಕ್ಷೆ ಕಟ್ಟುವ ಮೂಲಕ

ಸಾರ್ಥಕಗೊಳಿಸಿಕೊಳ್ಳಬೇಕೆಂದು ಸಂಗೀತದಲ್ಲಿ 'ಜೂನಿಯರ್ ಮತ್ತು ಸೀನಿಯರ್' ಪರೀಕ್ಷೆಗಳನ್ನು ಕಟ್ಟಿ ಪಾಸು ಮಾಡಿಕೊಂಡರು. ಮುಂದಿನ ಹಂತದ 'ವಿದ್ವತ್ ಪರೀಕ್ಷೆ'ಗೆ ಸಿದ್ಧತೆಯನ್ನು ಮಾಡಿಕೊಂಡು ಪರೀಕ್ಷೆಯನ್ನು ಕಟ್ಟಿದರು. ಆದರೆ ಕಾರಣಾಂತರಗಳಿಂದ ಪರೀಕ್ಷೆಗೆ ಹಾಜರಾಗಲಿಲ್ಲ. ಮತ್ತೆ ಮುಂದೆ ವಿದ್ವತ್ ಪರೀಕ್ಷೆ ಕಟ್ಟಲು ಸಾಧ್ಯವಾಗದಷ್ಟು ನಾಟಕದ ಚಟುವಟಿಕೆಗಳಲ್ಲಿ ಮುಳುಗಿಹೋದರು.

ಬೆಂಗಳೂರಿನ ಮೃದಂಗ ವಿದ್ವಾನ್ ರಾಮಚಂದ್ರ ಅಯ್ಯರ್ ಅವರಿಂದ ಪಾಠ ಹೇಳಿಸಿಕೊಂಡು ಮೃದಂಗ ನುಡಿಸುವುದನ್ನೂ ಕಲಿತರು. ಇವರ ಮಾರ್ಗದರ್ಶನದಲ್ಲೇ ಅಲ್ಪಸ್ವಲ್ಪ ತಬಲ ಬಾರಿಸುವುದನ್ನೂ ಕಲಿತರು, ನಂತರದ ದಿನಗಳಲ್ಲಿ ಸ್ವಯಂ ಸಾಧನೆಯಿಂದ ಅದನ್ನು ಮತ್ತಷ್ಟು ಉತ್ತಮ ಪಡಿಸಿಕೊಂಡು ಪರಿಣತಿ ಪಡೆದರು. ಹಾಗೆಯೇ ಪಿಟೀಲು ವಾದ್ಯವನ್ನು ಸ್ವಲ್ಪ ದಿನ ಭೀಮಾಚಾರ್ ಅವರಲ್ಲಿ ಅಭ್ಯಾಸ ಮಾಡಿದರೂ ಮತ್ತೆ ಸ್ವಪ್ರಯತ್ನದ ಕಲಿಕೆಯೇ ಅವರನ್ನು ಆ ಕ್ಷೇತ್ರದಲ್ಲಿ ಗುರುತಿಸುವಂತೆ ಮಾಡಿತು. ಹೀಗೆ ಏಕಲವ್ಯ ಪ್ರತಿಭೆಯಾದ ಗುರುಸಿದ್ದಪ್ಪನವರ ಸಾಧನೆಯನ್ನು ಕುರಿತು ಬೆಳಗೆರೆ ಕೃಷ್ಣಶಾಸ್ತ್ರಿಗಳು ಒಂದು ಸಾರ್ವಜನಿಕ ಸಭೆಯಲ್ಲಿ ಹೀಗೆ ಹೇಳಿದರು– "ಒಂದು ಹಳ್ಳಿಯ ರೈತ ಕುಟುಂಬದಲ್ಲಿ ಜನಿಸಿದ ಇವರ ಸಿದ್ಧಿ–ಸಾಧನೆಗಳು ಅಪೂರ್ವವಾದವುಗಳು. ಆಧ್ಯಾತ್ಮದಲ್ಲಿ ಪರೋಕ್ಷಜ್ಞಾನ–ಅಪರೋಕ್ಷಜ್ಞಾನ ಎಂದು ಎರಡು ವಿಧ. ಪರೋಕ್ಷಜ್ಞಾನವೆಂದರೆ ಬೇರೆಯವರಿಂದ ಗುರು ಮುಖೇನ ತಿಳಿದದ್ದು. ಅಪರೋಕ್ಷ ಜ್ಞಾನವೆಂದರೆ ಸ್ವಾನುಭವದಿಂದ ಗಳಿಸಿದ್ದು. ಗುರುಸಿದ್ದಪ್ಪನವರು ಇದರಲ್ಲಿ ಎರಡನೆಯ ವರ್ಗಕ್ಕೆ ಸೇರುತ್ತಾರೆ" ಎಂದು ಪ್ರಶಂಸಿರುವುದರಲ್ಲಿ ಅತಿಶಯೋಕ್ತಿ ಇಲ್ಲ.

## ಜೈತ್ರಯಾತ್ರೆ

ರಾಜ್ಯ ವಿಸ್ತರಣಾಕಾಂಕ್ಷಿಗಳಾದ ರಾಜರು ಆಗಾಗ್ಗೆ ತಮ್ಮ ಪ್ರತಿಷ್ಠೆ–ಪರಾಕ್ರಮಗಳನ್ನು ಪ್ರಕಟಿಸಲು ದಂಡಯಾತ್ರೆ ಕೈಗೊಳ್ಳುತ್ತಾರೆ. ಹಾಗೆಯೇ ತಮ್ಮ ನಟನೆ, ಸಂಗೀತ, ದಿಗ್ದರ್ಶನಗಳ ಮೂಲಕ ಗುರುಸಿದ್ದಪ್ಪನವರು ಕೈಗೊಂಡ ಸಂಚಾರ, ಮಾಡಿದ ಸಾಧನೆ, ಪಡೆದ ಗೌರವ–ಸನ್ಮಾನಗಳು ಅಪಾರ. ಅದರ ಅವಲೋಕನವನ್ನು ಮಾಡೋಣ.

ಬೇರೆಯವರು ಬರೆದ ನಾಟಕಗಳನ್ನು ಆಡಿಸುವ ಬದಲು ತಾನೇ ಏಕೆ ನಾಟಕಗಳನ್ನು ಬರೆಯಬಾರದು ಎಂದು ಚಿಂತಿಸಿದ ಫಲವೇ ಜೈಮಿನಿ ಭಾರತದಿಂದ ಪ್ರೇರಣೆ ಪಡೆದ 'ಭಕ್ತ ಸುಧನ್ವ' ಎಂಬ ನಾಟಕ ರಚನೆಗೆ ಕಾರಣವಾಯಿತು. ಅದು

ಅನೇಕ ಕಡೆ ಪ್ರಯೋಗವಾಯಿತು. ಇದರಿಂದ ಸ್ಫೂರ್ತಿ ಪಡೆದ ಗುರುಸಿದ್ದಪ್ಪನವರು ತಮ್ಮನ್ನು ಬರೀ ಪೌರಾಣಿಕ ನಾಟಕಗಳಿಗೆ ಸೀಮಿತಗೊಳಿಸಿಕೊಳ್ಳದೆ ಐತಿಹಾಸಿಕ, ಸಾಮಾಜಿಕ ನಾಟಕಗಳನ್ನೂ ಬರೆದರು. ಪಿರಿಯಾಪಟ್ಟಣದ ರಾಜ ಶಿವಪ್ಪನಾಯಕನ ಕಥನವನ್ನು 'ಅಪೂರ್ವ ಮಿತ್ರರು' ಎಂಬ ಐತಿಹಾಸಿಕ ನಾಟಕವಾಗಿ ಬರೆದರು. ಇದನ್ನು ತಾವೇ ಕಟ್ಟಿದ 'ಗುರು ಕಲಾಸಂಘ'ದ ವತಿಯಿಂದ ಕಾಲುವೇಹಳ್ಳಿಯಲ್ಲಿ ಈ ನಾಟಕವನ್ನು ಆಡಿದರು. ಈ ನಾಟಕದ ಅಧ್ಯಕ್ಷತೆಯನ್ನು ಆಗ ಗುಬ್ಬಿ ಕಂಪನಿಯಲ್ಲಿ ಪ್ರಸಿದ್ಧ ನಟರಾಗಿದ್ದ ಮಾದನಾಯಕನಹಳ್ಳಿ ವೀರಭದ್ರಯ್ಯನವರು ವಹಿಸಿದ್ದು, ಅವರಿಂದ ಮೆಚ್ಚಿಗೆ ಪಡೆದರು. ನಂತರ ಸಾಮಾಜಿಕ ನಾಟಕವನ್ನೂ ಬರೆಯಬೇಕೆಂಬ ಹಂಬಲದಿಂದ 'ತ್ಯಾಗ' ಎಂಬ ನಾಟಕ ರಚಿಸಿ ಅದನ್ನು ಗುಬ್ಬಿ ವೀರಣ್ಣನವರ ಅಧ್ಯಕ್ಷತೆಯಲ್ಲಿ ಆಡಿಸಿ ಅವರಿಂದ ಶಭಾಸ್‌ಗಿರಿ ಪಡೆದರು. ಇದರ ಜೊತೆಗೆ ಮಿಡಗೇಶಿಯ ಮಾರುತಿ ಕಲಾಸಂಘದವರಿಗಾಗಿ 'ಶಿವಜಲಂಧರ' ಎಂಬ ನಾಟಕದಲ್ಲಿ ಅಭಿನಯಿಸಿ ಹೊಗಳಿಕೆಗೆ ಪಾತ್ರರಾದರು.

ತಾವೇ ಕಟ್ಟಿದ 'ಗುರು ಕಲಾಸಂಘ'ದ ವತಿಯಿಂದ 'ಭಕ್ತ ಸುಧನ್ವ'ದೊಂದಿಗೆ, ಸುಮಂಗಲಿ, ಮಹಾರಥಿ ಕರ್ಣ, ಸ್ತ್ರೀನಾಟಕ, ದೇವದಾಸಿ ಇತ್ಯಾದಿ ನಾಟಕಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಅನೇಕ ಊರುಗಳಲ್ಲಿ, ಜಾತ್ರೆಗಳಲ್ಲಿ ಪ್ರದರ್ಶಿಸಿದರು. ಕರ್ನಾಟಕದ ಗಡಿಯ ತುತ್ತತುದಿಗೆ ಹೊಂದಿಕೊಂಡೇ ಇದ್ದ ಆಂಧ್ರದಲ್ಲಿನ ಕನ್ನಡ ಸೀಮೆಯಾದ ರತ್ನಗಿರಿ, ಗುಡಿಬಂಡೆ, ಮಡಕಶಿರಾ ಮುಂತಾದ ಗಡಿನಾಡಿನಲ್ಲಿ ಕನ್ನಡ ನಾಟಕಗಳನ್ನು ಆಡಿಸಿ ಜನಮೆಚ್ಚಿಗೆ ಗಳಿಸಿದರು, ಆದರೆ ಆರ್ಥಿಕವಾಗಿ ಲಾಭ ತರದೆ ಕೈಸುಟ್ಟುಕೊಂಡ ಮೇಲೆ ಕೇವಲ ನಾಟಕ ದಿಗ್ದರ್ಶನದೊಂದಿಗೆ ಸಂಗೀತ ನೀಡುವ, ಅನಿರೀಕ್ಷಿತ ಸಂದರ್ಭಗಳಲ್ಲಿ ನಟರೂ ಆಗಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ಕಲಿಸತೊಡಗಿದರು.

### ಕಲಿಕೆಯಲ್ಲಿ ಶಿಸ್ತು

ಗುರುಸಿದ್ದಪ್ಪನವರ ಪ್ರಾಕ್ಟೀಸ್ ಮನೆಯಲ್ಲಿ ಬೀಡಿ, ಸಿಗರೇಟ್ ಸೇದುವಂತಿರಲಿಲ್ಲ. ಇನ್ನು ಕುಡಿದು ಬಂದವರಿಗೆ ಪ್ರವೇಶವೇ ಇರಲಿಲ್ಲ. ಏಕೆಂದರೆ ಗುರುಸಿದ್ದಪ್ಪನವರಿಗೆ ಈ ಯಾವ ದುರಭ್ಯಾಸಗಳು ಇರಲಿಲ್ಲ. ಅವರು ಶೀಲ–ಶೌಚಕ್ಕೆ ಹೆಸರಾಗಿದ್ದರು. ಅಡಿಕೆ–ಎಲೆ ಹಾಕುವ ಅಭ್ಯಾಸವೂ ಕಡಿಮೆಯೇ. ಆದರೆ ಸಾಮಾನ್ಯವಾಗಿ ನಾಟಕ ಕಲಿಸುವ ಮೇಸ್ಟ್ರುಗಳು ಸಕಲ ವಿದ್ಯಾಪಾರಂಗತರಾಗಿರುತ್ತಿದ್ದರು ಹಾಗೂ ನಿಗದಿಪಡಿಸಿದ ಸರಿಯಾದ ವೇಳೆಗೆ ಪ್ರಾಕ್ಟೀಸ್‌ಗೆ ಹಾಜರಾಗಬೇಕಿತ್ತು. ನಾಟಕದ

ಮಾತುಗಳನ್ನು ಸರಿಯಾಗಿ ಕಲಿತು ಒಪ್ಪಿಸದಿದ್ದರೆ, ಇಡೀ ಪ್ರಾಕ್ಟೀಸಿನುದ್ದಕ್ಕೂ ನಿಂತೇ ಇರುವ ಶಿಕ್ಷೆ ವಿಧಿಸುತ್ತಿದ್ದರು. ಹೀಗಾಗಿ ಪಾತ್ರಧಾರಿಗಳು ಗುರುಸಿದ್ದಪ್ಪನವರ ಬಳಿ ಬಾಲ ಬಿಚ್ಚಲು ಅವಕಾಶವೇ ಇರಲಿಲ್ಲ. ನಾಟಕ ಪ್ರದರ್ಶನದ ದಿನ ರಂಗಪ್ರವೇಶಕ್ಕೆ ಮುನ್ನವೇ ಗ್ರೀನ್‌ರೂಮಿನಲ್ಲಿ ಪ್ರತಿಯೊಬ್ಬರೂ ಅವರ ಕಾಲಿಗೆ ಬಿದ್ದು ಆಶೀರ್ವಾದ ಪಡೆಯುತ್ತಿದ್ದರು. ಅಪರೂಪಕ್ಕೆ ಇವರ ಹಾರ್ಮೋನಿಯಂ ಗುರುಗಳಾದ ಮಲ್ಲಾರೆಡ್ಡಿ ಮತ್ತು ಪಿಟೀಲು ಕಲಿಸಿದ ಭೀಮಾಚಾರ್ ಕುಡಿಯುತ್ತಿರಲಿಲ್ಲ.

ಎಪ್ಪತ್ತರ ದಶಕದ ನಂತರ ನಾಟಕದಲ್ಲಿ ಅಭಿನಯಿಸಲು ಆ ಕಾಲದಲ್ಲಿ ಆ ಪ್ರಾಂತದಲ್ಲಿ ಹೆಸರಾದ ರಂಗನಟಿಯರನ್ನು ಕರೆಸುತ್ತಿದ್ದರು. ಇದು ನಾಟಕಕ್ಕೆ ಒಂದು ರೀತಿಯ ಸಂಚಲನವನ್ನು ಮೂಡಿಸುತ್ತಿತ್ತು. ಹಿರಿಯೂರಿನ ಜಯಮ್ಮ (ಗಂಗಾರಾಂ ಹೆಂಡತಿ), ಆಕೆಯ ಮಗಳು ಮಂಜುಳಾ, ಬಂಗಾರಕ್ಕನಹಳ್ಳಿ ಕಮಲ, ಚಳ್ಳಕೆರೆ ಸಾವಿತ್ರಿ, ಚಿತ್ರದುರ್ಗದ ಸರೋಜಮ್ಮ (ನಾಟಕಕಾರ ಧುತ್ತರಗಿ ಹೆಂಡತಿ), ಹಿರಿಯೂರಿನ ನಗೀನಾ ಮುಂತಾದವರನ್ನು ಕರೆಸುತ್ತಿದ್ದರು. 'ಅಭಿಮನ್ಯು' ನಾಟಕದ ಉತ್ತರೆ ಪಾತ್ರಕ್ಕೆ ಬಳ್ಳಾರಿಯ ಪಾರ್ವತಿಯನ್ನು ಕರೆಸಿದ್ದು ಒಂದು ವಿಶೇಷವಾಗಿತ್ತು. ನಗೀನಳನ್ನು ಕರೆಸಿದರೆ ಅದೇ ನಾಟಕದ ಪಕ್ಕವಾದ್ಯಕ್ಕೆ ಅವರ ತಂದೆ (ಹೆಸರು ಮರೆತಿದೆ) ನುಡಿಸುವ ಸ್ಯಾಕ್ಸೋಫೋನ್ ವಾದ್ಯವನ್ನೂ ಬಳಸಿಕೊಳ್ಳಲೇಬೇಕಿತ್ತು. ಇಲ್ಲದಿದ್ದರೆ ಅತ್ಯಂತ ಸುಂದರವಾಗಿದ್ದ ಆಕೆ ದೊರೆಯುತ್ತಿರಲಿಲ್ಲ. ಆದರೆ ಆ ವಿದೇಶಿ ವಾದ್ಯ ಆ ಕಾಲಕ್ಕೆ ರಂಗಭೂಮಿಯಲ್ಲಿ ಒಂದು ಬಗೆಯ ರೋಮಾಂಚನಕ್ಕೆ ಕಾರಣವಾಗಿತ್ತು. ಅದರ ವಿಶಿಷ್ಟ ಧ್ವನಿ ಇಂಗ್ಲಿಷ್ ಶೈಲಿ ಹಾಡಿಗೆ ಒಂದು ಹೊಸ ಮೆರುಗನ್ನು ನೀಡುತ್ತಿತ್ತು.

ಇಂಥ ವಾತಾವರಣದಲ್ಲಿ ನಾಟಕ ಕಲಿಸುವ, ಆಡಿಸುವ, ಸ್ವತಃ ತಾವೇ ಪಾತ್ರ ಮಾಡುತ್ತಾ, ಆಗಾಗ್ಗೆ ಊರಿನ ಕೃಷಿ ಚಟುವಟಿಕೆಗಳಲ್ಲಿ ಭಾಗಿಯಾಗಿತ್ತಾ ಜೀವನ ನಡೆಸತೊಡಗಿದರು. ಕೆಲವು ಬಾರಿ ಸ್ವಯಂ ತಾವೇ ಕೃಷಿ ಕಾರ್ಮಿಕನಂತೆ ಗದ್ದೆಗಿಳಿದು ಬಿಡುತ್ತಿದ್ದರು. ಮೇಸ್ತ್ರ ಈ ಪಡಿಪಾಟಲನ್ನು ಕಂಡ ಅವರಲ್ಲಿ ನಾಟಕ ಕಲಿತ ಶಿಷ್ಯರೆಲ್ಲ ಸೇರಿ ಅವರ ಕೃಷಿಯ ಕೆಲಸಗಳಿಗೆ ಹೆಗಲುಕೊಡುತ್ತಿದ್ದರು. ಕೆಲವು ಬಾರಿ ಎರಡು ಮೂರು ವರ್ಷ ಮಳೆಯಾಗದೆ ಬರ ಬಂದಾಗ ಈ ವ್ಯವಸಾಯದ ಸಹವಾಸ ಸಾಕು ಎನಿಸುತ್ತಿತ್ತು. ಇದರಿಂದ ತಮಗೆ ಬಿಡುಗಡೆ ಯಾವಾಗ ಎಂದು ಹಂಬಲಿಸುತ್ತಿದ್ದರು. ನಾಟಕಗಳಿಗೆ ಕರೆ ಬಂದಾಗ ಎಲ್ಲವನ್ನೂ ಅಣ್ಣನ ಮೇಲೆ ಹಾಕಿ ಹೋಗಿ ಬಿಡುತ್ತಿದ್ದರು.

## ಹಾರ್ಮೋನಿಯಂ ಉಡುಗೊರೆ

ಆಂಧ್ರದ ಗುಡಿಬಂಡೆಯಿಂದ 'ಕಾಲೇಜ್ ಗರ್ಲ್' ನಾಟಕ ಕಲಿಸೋಕೆ ಕರೆ ಬಂತು. ಅಲ್ಲಿಗೆ ಹೋದಾಗ ತಿಳಿಯಿತು ನಾಟಕದ ಪಾತ್ರಧಾರಿಗಳೆಲ್ಲಾ ತಮಗೆ ಬಂಧುಗಳೇ ಎಂದು. ಅಲ್ಲಿ ಒಂದು ತಿಂಗಳು ಇದ್ದು ನಾಟಕ ಕಲಿಸಿದರು. ಬಂಧುಗಳ ಬಳಿ ಸಂಭಾವನೆ ಹೇಗೆ ಕೇಳುವುದು ಎಂಬ ಸಂಕೋಚ. ಬರಿಗೈಯಲ್ಲಿ ಹೊರಟು ನಿಂತಾಗ, ನಾಟಕಕ್ಕೋಸ್ಕರವೇ ಹೊಸದಾಗಿ ತರಿಸಿದ್ದ ತ್ರಿಬ್ಬಲ್ ರೀಡ್ಸ್‌ನ ಲೆಗ್ ಹಾರ್ಮೋನಿಯಂ ಪೆಟ್ಟಿಗೆಯನ್ನೇ ಕಾಣಿಕೆಯಾಗಿ ನೀಡಿದರು. ಮತ್ತೊಮ್ಮೆ ಅದೇ ಊರಿಗೆ ಹೋಗಿ ತಮ್ಮದೇ 'ಸುಮಂಗಲಿ' ನಾಟಕ ಆಡಿಸಿ ಬಂದರು.

ತಮ್ಮ ಊರಿನ ಸುತ್ತಿನ ಹಳ್ಳಿಗಳಾದ ಯಾದಲಗಟ್ಟೆ, ಕ್ಯಾತಗೊಂಡನಹಳ್ಳಿ, ಕಾಮಸಮುದ್ರ ಮುಂತಾದ ಊರುಗಳಿಂದ ನಿರಂತರವಾಗಿ ನಾಟಕ ಆಡಿಸುವ ಅವಕಾಶಗಳು ಸಿಗುತ್ತಲೇ ಇದ್ದವು.

## ಮರೆಯಲಾಗದ ಅನುಭವ

ಹೆಗ್ಗೆರೆಯಲ್ಲಿ ಜಗಜ್ಯೋತಿ ಬಸವೇಶ್ವರ ನಾಟಕ. ಗುರುಸಿದ್ದಪ್ಪನವರದೇ ಬಸವಣ್ಣನ ಪಾತ್ರ, ಆಗಿನ ಕಾಲದ ಸುಪ್ರಸಿದ್ಧ ರಂಗನಟ, ಸಿನಿಮಾ ನಟ ಲಕ್ಷ್ಮಣಪ್ಪನದು ಬಿಜ್ಜಳನ ಪಾತ್ರ, (ಇವರು ಮೂಲತಃ ಪ್ರೈಮರಿ ಶಾಲೆ ಅಧ್ಯಾಪಕರು. ನಾಟಕ ಕಲೆಯ ಹುಚ್ಚಿನಿಂದ ಆಗಾಗ್ಗೆ ಹಲವು ತಿಂಗಳುಗಳ ಕಾಲ ಉದ್ಯೋಗ ತಪ್ಪಿಸಿಕೊಂಡು ನಾಟಕ ಕಂಪನಿಗೆ ಹಾರಿಬಿಡುತ್ತಿದ್ದರು. ಅವರು ದುರ್ಯೋಧನ, ಸಂಗೊಳ್ಳಿರಾಯಣ್ಣ ಮುಂತಾದ ಪಾತ್ರಗಳಿಂದ ಹೆಸರಾಗಿ 'ನಟಭಯಂಕರ', 'ಅಭಿನಯಸಿಂಹ' ಎಂಬ ಬಿರುದಿಗೆ ಪಾತ್ರರಾಗಿದ್ದರು.) ಎ.ಸರೋಜಳದು (ಧುತ್ತರಗಿ ಹೆಂಡತಿ) ಗಂಗಾಂಬಿಕೆ ಪಾತ್ರ.

ನಾಟಕದ ಹಿಂದಿನ ದಿನ ತಿಂಡಿಗೆ ಬೆಣ್ಣೆ ಹಾಕಿದ್ದರಿಂದ ಗುರುಸಿದ್ದಪ್ಪನವರ ಗಂಟಲು ಕಟ್ಟಿಕೊಂಡಿತು. ಬಾಯಿಂದ ಮಾತೇ ಹೊರಡುತ್ತಿಲ್ಲ. ತಿಳಿದ ಚಿಕಿತ್ಸೆಯನ್ನೆಲ್ಲಾ ಮಾಡಿದರೂ ಗಂಟಲು ಸರಿಹೋಗಲಿಲ್ಲ. ನಾಟಕದ ದಿನವೂ ಬಂದೇ ಬಿಟ್ಟಿತು. ಆದರೂ ಸರಿಹೋಗಲಿಲ್ಲ. ಬಂದವರೆಲ್ಲಾ ತಲೆಗೊಂದು ಚಿಕಿತ್ಸೆ ಹೇಳಿದರು. ಕೊನೆಗೆ ಇದಕ್ಕೆ ರಾಮಬಾಣ ಅಂದರೆ ಬ್ರಾಂದಿ ಎಂದರು. ಆದರೆ ಗುರುಸಿದ್ದಪ್ಪನವರಿಗೆ ಬೀಡಿ, ಸಿಗರೇಟ್, ಸಾರಾಯಿ ಹೀಗೆ ಯಾವ ಅಭ್ಯಾಸಗಳೂ ಇರಲಿಲ್ಲ. ರಾತ್ರಿಗೆ ಸ್ಟೇಜ್ ಹತ್ತಬೇಕು, ಸಂಜೆಯಾದರೂ ಗಂಟಲ ಕೀರಲು ಹೋಗಲಿಲ್ಲ. ಬಣ್ಣ ಹಾಕಿಕೊಳ್ಳುವ ಸಮಯ ಬಂದರೂ ಸರಿ ಹೋಗಲಿಲ್ಲ. ಇನ್ನು ದಿಕ್ಕು ತೋಚದೆ

ಹಲವರ ಒತ್ತಾಯದ ಮೇರೆಗೆ ಬ್ರಾಂದಿ ಕುಡಿದರು. ಎಂದೂ ಕುಡಿಯದ ಅವರಿಗೆ ತಲೆಸುತ್ತ ತೊಡಗಿತು. ಲೈಟುಗಳು ಎರಡೆರಡಾಗಿ ಕಾಣಿಸುತ್ತಿವೆ. ಶಿವನೇ ಏನು ಮಾಡಲಿ ಎನ್ನುವಂತಾಯಿತು. ಮತ್ಯಾರೋ ಬಂದು 'ಇದು ಬ್ರಾಂದಿಗೆ ಬಗ್ಗೋಲ್ಲ. ಇದಕ್ಕೆ ಸರಾಯೇ ಮದ್ದು' ಎಂದು ತಂದು ಕುಡಿಸಿದರು. ಇದರಿಂದ ಊದುವುದು ಬಿಟ್ಟು ವದರುವುದು ತೆಗೆದುಕೊಂಡಂತಾಯಿತು. ಏನನ್ನು ಕುಡಿಯಬಾರದೆಂದು ಹೇಳುತ್ತಿದ್ದರೋ ಅದನ್ನೇ ತಾವು ಕುಡಿಯುವಂತಾಯಿತಲ್ಲಾ ಎಂದು ಪರಿತಪಿಸಿದರು. ಕೊನೆಗೆ ಎಳನೀರು ಕುಡಿದರೆ ಹೇಗೆ ಎಂಬ ಆಲೋಚನೆ. (ಆಗ ಯಾರಿಗೂ ಎಳನೀರು ಕುಡಿಯುವ ಅಭ್ಯಾಸವಿರಲಿಲ್ಲ. ಆಗ ಅದು 'ರಾಜಪಾನೀಯ'ವಾಗಿತ್ತೇ ವಿನಾ ಈಗಿನಂತೆ 'ಆರೋಗ್ಯಪಾನೀಯ' ಎಂಬ ಗೌರವ ಅದಕ್ಕೆ ಇರಲಿಲ್ಲ.) ತಕ್ಷಣವೇ ಎಳನೀರು ತರಿಸಿ ಕುಡಿದು, ಸ್ವಲ್ಪ ವಿಶ್ರಾಂತಿ ಪಡೆಯುತ್ತಿದ್ದಂತೆ ಸುಧಾರಣೆ ಕಂಡು ಬಂತು. ಇದೇನು ಆಶ್ಚರ್ಯ ಎಂಬಂತೆ ಕಟ್ಟಿದ ಗಂಟಲು ತೆರೆಯಿತು. ನಾಟಕ ಸರಾಗವಾಗಿ ಸಾಗಿತು. ಪಾತ್ರ ಶ್ರೋತೃಗಳ ಕಣ್ಣಲ್ಲಿ ನೀರು ಹರಿಸುವಷ್ಟು ಪರಿಣಾಮಕಾರಿಯಾಗಿತ್ತು. ಬಸವೇಶ್ವರರ ಸೇವೆಗೆ ನಿಯಮಿಸಿದ ಸ್ತ್ರೀಪಾತ್ರ ಮಾಡಿದ ಚಿಕ್ಕ ಹುಡುಗ ಭಾವಪರವಶನಾದ, ನಾಟಕ ನಿಂತರೂ ಅವನ ಕಣ್ಣೀರು ನಿಲ್ಲಲಿಲ್ಲ.

### ಹರಿಕತೆಗೆ ಪಕ್ಕವಾದ್ಯ

ನಾಟಕ ಅಭಿನಯ, ನಾಟಕ ಕಲಿಸುವ ಕೆಲಸ ಇಲ್ಲದಾಗ ಹರಿಕಥಾ ಸಂಕೀರ್ತನೆಗಳಿಗೆ ಪಕ್ಕವಾದ್ಯಕಾರನಾಗಿ ಹಾರ್ಮೋನಿಯಂ, ಪಿಟೀಲು, ತಬಲಾ ಮುಂತಾದ ವಾದ್ಯಗಳನ್ನು ನುಡಿಸಲು ಕರೆ ಬರುತ್ತಿತ್ತು. ಸುಮ್ಮನೇ ಕುಳಿತಿರುವುದೇಕೆಂದು ಹೋಗತೊಡಗಿದರು. ಬಸವಲಿಂಗಶಾಸ್ತ್ರಿಗಳು, ಎಸ್.ಎಸ್.ರಾಮಸ್ವಾಮಿ ಮುಂತಾದವರ ಹರಿಕತಾ ಪ್ರಸಂಗಗಳಿಗೆ ಪಕ್ಕವಾದ್ಯಕಾರರಾಗಿ ಹೋಗುತ್ತಿದ್ದರು. ಅವರ ಪ್ರಸಂಗ ಮತ್ತು ಹಾಡುಗಾರಿಕೆಯನ್ನು ಗಮನಿಸಿದಾಗ ಅವರಿಗೆ ಅಷ್ಟಾಗಿ ಸಂಗೀತ ಜ್ಞಾನ ಇಲ್ಲದಿರುವುದು ಅನುಭವಕ್ಕೆ ಬಂತು. ಬೇರೆಯವರ ಕತೆಗೆ ಸಂಗೀತ ಸಾಥಿ ಕೊಡುವ ಬದಲು ನೀನೇ ಏಕೆ ಹರಿಕತೆ ಮಾಡಬಾರದು?' ಎಂದು ನನ್ನೊಳಗಿನ ಸಾಮರ್ಥ್ಯವನ್ನು ಕೆಲವರು ಕೆಣಕಿದರು. ಸರಿ, ಏಕೆ ಒಂದು ಕೈ ನೋಡಿಯೇ ಬಿಡಬಾರದು ಎಂದು ಅವರೇ ಕೊಟ್ಟ 'ಗಣೇಶ ವಿಜಯ', 'ಭಕ್ತ ಧ್ರುವ', 'ಭಕ್ತ ಸಿರಿಯಾಳ' – ಕತೆಗಳ ಪುಸ್ತಕಗಳನ್ನು ತೆಗೆದುಕೊಂಡು ಚೆನ್ನಾಗಿ ಅಭ್ಯಾಸ ಮಾಡಿ 'ಕತೆ' ಮಾಡಿದರು. ಒಳ್ಳೆಯ ಹೆಸರು ಬಂತು. ಮೊದಲೆಲ್ಲ ಹಳ್ಳಿಗಳಲ್ಲಿ ಹಬ್ಬ ಹರಿದಿನಗಳಲ್ಲಿ ಕರೆಸಿ ಸಂಬಂಧಿಸಿದ ಕತೆ ಮಾಡಿಸುತ್ತಿದ್ದರು. ಇದು ನಂತರ ವಿಸ್ತರಿಸುತ್ತಾ ಗಣೇಶನ ಹಬ್ಬದಲ್ಲಿ ಹತ್ತಾರು ದಿನ ನಡೆಯುವ

ಸಮಾರಾಧನೆಗಳಲ್ಲಿ ಅವಕಾಶಗಳನ್ನು ಪಡೆದುಕೊಳ್ಳತೊಡಗಿತು. 'ಆದರೆ ಗಣೇಶನ ಉತ್ಸವಗಳಲ್ಲಿ ಆರ್ಕೆಸ್ಟ್ರಾಗಳ ಭರಾಟೆ ಪ್ರಾರಂಭವಾದ ನಂತರ ಹರಿಕತೆಗಳನ್ನು ಕೇಳುವ ಜನಸಂದಣಿ ಕಡಿಮೆಯಾಗತೊಡಗಿತು. ಇದೊಂದು ಸಾಂಸ್ಕೃತಿಕ ದುರಂತ. ಈಗಲೂ ಉತ್ಸವದ ಸುದೀರ್ಘ ದಿನಗಳನ್ನು ತುಂಬಲು ಹರಿಕತೆಗಳು ಇದ್ದೇ ಇರುತ್ತವೆ. ಆದರೆ ಕೇಳುಗರಿಲ್ಲದ ಆ ಕಚೇರಿಗಳು ಇದ್ದೂ ಇಲ್ಲವಾಗಿವೆ. ಹರಿಕತೆಯ ನೆಪದಲ್ಲಿ ಅನೇಕ ಉಪಕತೆಗಳು ರಂಜನೀಯತೆಯೊಂದಿಗೆ ನೀತಿಗಳನ್ನೂ ಹೇಳುತ್ತಾ ಸಮಾಜವನ್ನು ಸುಸ್ಥಿತಿಯಲ್ಲಿ ಇಡುತ್ತಿದ್ದವು. ಆಗ ಸಮಾಜಕ್ಕೆ ಸಂದೇಶಗಳನ್ನು ಕೊಡಲು ಇದು ಪರಿಣಾಮಕಾರಿ ಮಾಧ್ಯಮವಾಗಿತ್ತು' ಎಂಬುದು ಗುರುಸಿದ್ದಪ್ಪನವರ ವಿಷಾದಪೂರ್ಣ ಅನಿಸಿಕೆ. ಆದರೆ ಆಗ ರೇಡಿಯೋ ಬಿಟ್ಟರೆ ಬೇರೆ ಮಾಧ್ಯಮಗಳು ಇರಲಿಲ್ಲ. ಇದನ್ನು ಕುಟುಂಬ ಯೋಜನೆ ಮುಂತಾದ ಸರ್ಕಾರಿ ಕಾರ್ಯಕ್ರಮಗಳನ್ನು ಪ್ರಚಾರ ಮಾಡಲು ಬಳಸಿಕೊಂಡರು (ಅದರ ವಿವರಗಳನ್ನು ಮುಂದೆ ನೋಡೋಣ).

**ಹೊಸಕತೆ**

ಎಷ್ಟೋ ಬಾರಿ ಗುರುಸಿದ್ದಪ್ಪನವರು ಹೊಸಕತೆಗಳನ್ನು ಹೆಣೆದು ಜನರನ್ನು ರಂಜಿಸುತ್ತಿದ್ದರು. ತಮಗೆ ಬೆಳಗೆರೆ ಕೃಷ್ಣಶಾಸ್ತ್ರಿಗಳ ಒಡನಾಟ ಆದ ನಂತರ ಶಾಸ್ತ್ರಿಗಳ ತಂದೆಯವರ ವ್ಯಕ್ತಿತ್ವ ಇವರನ್ನು ಆಕರ್ಷಿಸಿತು. ಅವರೊಬ್ಬ ಆಶುಕವಿ. ಯಾವ ವಿಷಯದ ಮೇಲಾದರೂ ತಕ್ಷಣವೇ ಪದಕಟ್ಟಿ ಹಾಡುತ್ತಿದ್ದರು. ಸದಾ ಜೇಬಿನಲ್ಲಿ ಕಡ್ಲೆಕಾಯಿ ಇಟ್ಟುಕೊಂಡು ತಿನ್ನುತ್ತಿದ್ದುದರಿಂದ ಅವರಿಗೆ 'ಕಡ್ಲೆಕಾಯಿ ಶಾಸ್ತ್ರಿ' ಎಂಬ ಅಡ್ಡ ಹೆಸರು ಬಂದಿತ್ತು. ಅವರು ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ ಎಂಬಂತೆ ಯಾವೊತ್ತೂ ಸಂಸಾರ ಹಚ್ಚಿಕೊಂಡವರಲ್ಲ. ಜೊತೆಗೆ ಇಂಪಾದ ಕಂಠವುಳ್ಳ ಹಾಡುಗಾರ. ಶಾಸ್ತ್ರಿಗಳು ಚಿಕ್ಕೇನಹಳ್ಳಿಯ ವಕ್ಕಲಿಗರ ರಂಗಪ್ಪನ ಬಳಿ ಸಂಗೀತ ಕಲಿಯಲು ಹೋಗುತ್ತಿದ್ದರು. ರಂಗಪ್ಪ ಹರ್ತಿಕೋಟೆಯ ಅಂಧ ಸಂಗೀತಗಾರ ಸುಬ್ಬಣ್ಣನಿಂದ ಸಂಗೀತ ಕಲಿತವರು. ರಂಗಪ್ಪನವರ ಸಂಗೀತವೆಂದರೆ ಅವರು ಹಾಡುತ್ತಿದ್ದರೆ ಹರಿಯುವ ಹಾವು ನಿಲ್ಲುತ್ತಿತ್ತಂತೆ! ರಂಗಪ್ಪನವರಿಗೆ ಕೂತು ಸಂಗೀತ ಹೇಳಿಕೊಡುವಷ್ಟು ಬಿಡುವು ಇರುತ್ತಿರಲಿಲ್ಲ. ಸದಾ ಒಂದಿಲ್ಲೊಂದು ವ್ಯವಸಾಯದ ಕೆಲಸಗಳಲ್ಲಿ ನಿರತರಾಗಿರುತ್ತಿದ್ದರು. ಆದರೆ ಶಾಸ್ತ್ರಿಗಳು ಬೆನ್ನು ಹತ್ತಿದ ಬೇತಾಳನಂತೆ ಬಿಡುತ್ತಿರಲಿಲ್ಲ. ಕೊನೆಗೆ ರಂಗಪ್ಪನವರು ಬೇಸಾಯ ಮಾಡುತ್ತಲೇ ಹೇಳಿಕೊಡುತ್ತಿದ್ದರು. ಶಾಸ್ತ್ರಿಗಳೂ ಅವರ ಹಿಂದೆ ಹಿಂದೆಯೇ ಹೋಗುತ್ತಾ ಕಲಿಯುತ್ತಿದ್ದರು. ಅವರ ಬಾಯಿಂದ ನೂರಾರು ಜನಪದ ಗೀತೆಗಳು ಬರುತ್ತಿದ್ದವು. ಅವರು ತಮ್ಮನ್ನೇ 'ಬ್ರಾಹ್ಮಣನ ಬೇಸಾಯ' ಎಂದು ವಿಡಂಬಿಸಿಕೊಂಡು ಹಾಡುತ್ತಿದ್ದರು. ಸಂಗೀತ

ಹಾಡಿಕೊಂಡು ಕಡಿಯುವ ಬಳ್ಳಾರಿ ಸೊಳ್ಳೆಗಳ ಹಾಡೂ ಜನಪ್ರಿಯವಾಗಿತ್ತು. ಒಂದು ರೀತಿ ಶೂದ್ರ ಬ್ರಾಹ್ಮಣನಂತೆ ಬದುಕಿದ ಅವರ ಕತೆಯನ್ನು ಗುರುಸಿದ್ದಪ್ಪನವರು ಸೊಗಸಾದ ಕತೆ ಮಾಡಿ ಹೇಳುತ್ತಿದ್ದರು. ಪುರಾಣ ಕತೆಗಳಷ್ಟೇ ಆಕರ್ಷಣೆ ಈ ಜೀವನ ಕಥನಕ್ಕೂ ಇತ್ತು. ಅದನ್ನು ಗುರುಸಿದ್ದಪ್ಪನವರು ಕಳೆಗಟ್ಟಿಸಿ ಹಾಡುತ್ತಿದ್ದರು. ಇದು ಗುರುಸಿದ್ದಪ್ಪನವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿತು.

ಕತೆ ಮಾಡುತ್ತಾ, ನಾಟಕ ಆಡುತ್ತಾ, ಪಕ್ಕ ವಾದ್ಯಕಾರನಾಗಿ ಸಾಥ್ ಕೊಡುತ್ತಾ ಅವರ ಜೀವನ ಕಳೆಯತೊಡಗಿತು.

## ಮೊದಲ ನಾಟಕ ರಚನೆ

೧೯೫೫ರಲ್ಲಿ ಬೆಳಗೆರೆ ಕೃಷ್ಣಶಾಸ್ತ್ರಿಯವರ ಸಂಪರ್ಕಕ್ಕೆ ಬಂದ ನಂತರ ಆಗಾಗ್ಗೆ ಅವರೊಂದಿಗೆ ನಡೆಸಿದ ಸಾಹಿತ್ಯ ಚರ್ಚೆ ಮನಸ್ಸಿನಲ್ಲಿ ಚಿಂತನೆಯ ಅಲೆಗಳನ್ನು ಎಬ್ಬಿಸುತ್ತಿತ್ತು. ಯಾರ್‍ಯಾರೋ ಬರೆದ ನಾಟಕಗಳನ್ನು ಆಡಿಸುವ ಬದಲು ಕೃಷ್ಣಶಾಸ್ತ್ರಿಯವರಂತೆ ತಾನೂ ಏಕೆ ನಾಟಕಗಳನ್ನು ಬರೆಯಬಾರದು ಎಂಬ ಯೋಚನೆ ತಲೆಹಾಕಿ ಕಾಡತೊಡಗಿತು. ಮನಸ್ಸಿನಲ್ಲಿ ಸೃಜನಶೀಲತೆಯ ಒತ್ತಡ ಪ್ರಾರಂಭವಾಯಿತು. ತುಂಬಾ ಗಾಢವಾಗಿ ಪ್ರಭಾವ ಬೀರಿದ ಜೈಮಿನಿ ಭಾರತದಿಂದಲೇ ಯಾವುದಾದರೂ ಒಂದು ಪ್ರಸಂಗವನ್ನು ಆರಿಸಿಕೊಂಡು ನಾಟಕ ಏಕೆ ರಚಿಸಬಾರದು ಎಂದು ಹೊಳೆದಿದ್ದೇ ತಡ ಮೊದಲಿಗೆ ನೆನಪಾದದ್ದು 'ಭಕ್ತಸುಧನ್ವ' ಪ್ರಸಂಗ. ತಲೆಯೊಳಗೆ ದೃಶ್ಯಗಳು ರೂಪುಗೊಳ್ಳತೊಡಗಿದವು. ರಂಗಭೂಮಿಯಲ್ಲಿ ನಾಟಕ ಆಡಿಸಿದ ಅನುಭವ ಈಗ ಸಹಾಯಕ್ಕೆ ಬಂತು. ಪಾತ್ರದ ಸಂಭಾಷಣೆಗಳು ನಾಲಗೆಯ ತುದಿಯವರೆಗೂ ನುಗ್ಗಿಕೊಂಡು ಬಂದವು. ಕೈಯಲ್ಲಿ ಲೇಖನಿ ಹಿಡಿಯುತ್ತಲೇ ಭಕ್ತಿ-ರಸಗಳು ತುಂಬಿ ಬರತೊಡಗಿದವು. ಸ್ಫೂರ್ತಿಯ ಪ್ರವಾಹಕ್ಕೆ ತಡೆಯೇ ಇಲ್ಲದೆ ನಾಟಕ ಹೊರಬಂತು. ಸರಿ ನಾಟಕವೇನೋ ಮೈದಳೆಯಿತು, ಅದನ್ನು ರಂಗಭೂಮಿ ಮೇಲೆ ಪ್ರಯೋಗಿಸಬೇಕು ಎಂದು ಚಿಂತಿಸುತ್ತಿರುವಾಗಲೇ ಅಲ್ಲಿಯವರೆಗೂ ಅವರಿಂದ ನಾಟಕ ಕಲಿತಿದ್ದ ಹುಡುಗರೆಲ್ಲಾ ಸೇರಿ ನಾಟಕ ಆಡುವ ಉತ್ಸಾಹ ತೋರಿದರು. ನಾಟಕ ರಂಗಭೂಮಿಯ ಮೇಲೆ ಯಶಸ್ವಿಯಾಯಿತು. ಈ ನಾಟಕ ಅದೆಷ್ಟು ಜನಪ್ರಿಯವಾಯಿತೆಂದರೆ ನೂರಾರು ಪ್ರಯೋಗಗಳು ಸುತ್ತಿನ ಹಳ್ಳಿಗಳಲ್ಲಿ ನಡೆದವು. ನಾಟಕ ರಚನೆಯ ಈ ಪ್ರಯತ್ನ ಮುಂದೆ ಅವರು ಅನೇಕ ನಾಟಕಗಳನ್ನು ಬರೆಯಲು ಪ್ರೇರಣೆ ಒದಗಿಸಿತು. ಅಂದಿನ ಜನಪ್ರಿಯ ಕಂಪನಿ 'ಡ್ರಾಮಾ'ಗಳ ಮಾದರಿಯನ್ನು ಕೈಬಿಟ್ಟು ಸಹಜತೆಗೆ ಹತ್ತಿರ ಅನಿಸುವ ನಾಟಕಗಳನ್ನು ಬರೆಯುವ ಕನಸುಗಳು ಅವರಲ್ಲಿ ಗರಿಗೆದರತೊಡಗಿದವು.

## ಪ್ರಕಾಶನ ಸಂಸ್ಥೆಯ ಹುಟ್ಟು

ನಾಟಕ ಅಭಿನಯಿಸಲು ಅಪಾರ ಬೇಡಿಕೆ ಬರತೊಡಗಿತು. ಅದರ ಪ್ಲಾಟ್‌ಗಾಗಿ ಅನೇಕ ಜನ ಮುಗೆ ಬಿದ್ದರು. ಆ ಕಾಲಕ್ಕೆ ಜೆರಾಕ್ಸ್ ಇರಲಿಲ್ಲ. ಇನ್ನು ಮುದ್ರಣ ಮಾಡಿಸುವುದು ದುಬಾರಿ ಅನಿಸಿತು. ಆದರೆ ಅದನ್ನು ಅಚ್ಚುಹಾಕಿಸಲು ಅನೇಕ ಜನ ಒತ್ತಾಯ ಮಾಡತೊಡಗಿದರು. ಗುರುಸಿದ್ಧಪ್ಪನವರು ಕೊನೆಗೂ ಧೈರ್ಯ ಮಾಡಿ ತಾವೇ ಪ್ರಕಾಶನವನ್ನು ಪ್ರಾರಂಭಿಸಿ, ಅದರ ಅಡಿಯಲ್ಲಿ ಅಚ್ಚು ಹಾಕಿಸಬೇಕೆಂದು ನಿರ್ಧರಿಸಿದರು. ಪ್ರಕಾಶನದ ಹೆಸರು ಏನು ಇಡಬೇಕು ಎಂಬುದರ ಬಗ್ಗೆ ಅವರು ಹೆಚ್ಚು ಯೋಚಿಸಬೇಕಾದ ಪ್ರಮೇಯವೇ ಬರಲಿಲ್ಲ. ತಮ್ಮ ಊರಿನ ಮುಂದೆ ಹರಿಯುವ ನದಿಯ ಹೆಸರನ್ನೇ ಬಳಸಿಕೊಂಡು 'ವೇದಾವತಿ ಪ್ರಕಾಶನ' ಎಂದು ನಾಮಕರಣ ಮಾಡಿದರು. ಅವರ ಮೊತ್ತ ಮೊದಲ ನಾಟಕ 'ವೇದಾವತಿ ಪ್ರಕಾಶನ'ದ ಮೂಲಕವೇ ಹೊರಬಂತು. ನಾಟಕದ ಪ್ರತಿಗಳಿಗೆ ಎಂಥಾ ಬೇಡಿಕೆ ಇತ್ತೆಂದರೆ 'ಭಕ್ತ ಸುಧನ್ವ' ಮೊಟ್ಟ ಮೊದಲು ಪ್ರಕಟವಾದದ್ದು ೧೯೬೦ರಲ್ಲಿ. ನಂತರ ಅದು ೧೯೭೮ರಲ್ಲಿ ಮತ್ತು ೧೯೮೯ರಲ್ಲಿ ಮರುಮುದ್ರಣಗೊಂಡಿರುವುದೇ ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ನಂತರ ಇದೇ ಸಂಸ್ಥೆಯಿಂದ ತಮ್ಮ ಉಳಿದ ಎಲ್ಲಾ ನಾಟಕಗಳನ್ನು ಪ್ರಕಟಿಸಿದರು. ಎರಡು ನಾಟಕಗಳನ್ನು ಮಾತ್ರ ಬೆಂಗಳೂರಿನ ಪ್ರಕಾಶನದವರು ಪ್ರಕಟಿಸಿದರು.

## ಕೆಟ್ಟು ಪಟ್ಟಣ ಸೇರು

ನಾಟಕ ಆಡಿಸಿಕೊಂಡು ಊರೂರು ತಿರುಗುತ್ತಿದ್ದ ಗುರುಸಿದ್ಧಪ್ಪನವರಿಗೆ ತಂದೆಯ ಆರೋಗ್ಯ ಕೆಟ್ಟಿದ್ದರಿಂದ ವ್ಯವಸಾಯದ ಕೆಲಸ ಹೆಗಲಿಗೆ ಬಿತ್ತು. ಅವರ ಸಂಚಾರಕ್ಕೆ ತಡೆ ಉಂಟಾಯಿತು. ಕಷ್ಟ ಆದಾಗ ನಾಟಕದ ಹುಡುಗರು ಬಂದು ಬೇಸಾಯ ಮಾಡಿಕೊಡುತ್ತಿದ್ದರು. ಒಂದು ಸಾರಿ ವೇದಾವತಿ ನದಿಯಲ್ಲಿ ಒಂದು ಹನಿ ನೀರೂ ಇಲ್ಲದಂತೆ ಒಣಗಿ ಹೋಯಿತು. ನದಿ ನೀರನ್ನೇ ನೆಚ್ಚಿಕೊಂಡು ಐದು ಎಕರೆ ಭತ್ತದ ಗದ್ದೆ ಹೊಡೆದಿದ್ದರು. ನೀರಿಲ್ಲದೆ ಫಸಲಿಗೆ ಬಂದ ಗದ್ದೆ ಒಣಗಿ ನಿಂತಿತು. ಇದರಿಂದ ವಿಪರೀತ ಸಂಕಟವಾಯಿತು. ಇನ್ನು ಈ ವ್ಯವಸಾಯದ ಉಸಾಬರಿಯೇ ಬೇಡವೆಂದು ಎತ್ತು, ಎಮ್ಮೆಗಳನ್ನು ಹೋದಷ್ಟಕ್ಕೆ ಮಾರಿದರು. ಜಮೀನನ್ನೂ ಅಣ್ಣನಿಗೆ ಕೇಳಿದಷ್ಟಕ್ಕೆ ಕೊಟ್ಟು ಕೈತೊಳೆದುಕೊಂಡು, ಏನಾದರೂ ಜೀವನೋಪಾಯ ಹುಡುಕಿಕೊಳ್ಳಬೇಕೆಂದು ಕೆಟ್ಟು ಪಟ್ಟಣ ಸೇರು ಎಂಬಂತೆ ಹೆಂಡತಿ ಮಕ್ಕಳೊಂದಿಗೆ ಚಳ್ಳಕೆರೆ ಪಟ್ಟಣ ಸೇರಿದರು. ಪಟ್ಟಣ ಸೇರಿದರೆ ಹರಿಕತೆ, ನಾಟಕ ಕಲಿಕೆ, ಪಕ್ಕವಾದ್ಯಗಳಿಂದ ಹೇಗೋ ಜೀವನ

ಮಾಡಬಹುದು, ಸಾಧ್ಯವಾದರೆ ಮುಂದೊಂದು ದಿನ 'ಸಂಗೀತ ಶಾಲೆ'ಯೊಂದನ್ನು ತೆರೆಯಬೇಕೆಂಬ ಬಯಕೆ ಅವರ ಮನಸ್ಸಿನಲ್ಲಿ ಇತ್ತು.

## ಹೊಸ ನಾಟಕಕ್ಕೆ ನಾಂದಿ

ದೇಹ ಪಟ್ಟಣ ಸೇರಿದರೂ ಮನಸ್ಸು ಮಾತ್ರ ಹಳ್ಳಿಯಲ್ಲೇ ಸುತ್ತಾಡುತ್ತಿತ್ತು. ಹಳ್ಳಿಯಿಂದ ದೂರ ಬಂದ ನಂತರ ಹಳ್ಳಿಯ ಸೆಳೆತ ಪ್ರಾರಂಭವಾಯಿತು. ಅರವತ್ತರ ದಶಕದಲ್ಲಿ ಗ್ರಾಮಸ್ವರಾಜ್ಯದ ಗಾಂಧೀಜಿಯ ಕನಸುಗಳು ಹಳ್ಳಿಗಳಲ್ಲಿ ಬೆಳವಣಿಗೆಯ ಭರವಸೆಯನ್ನು ಮೂಡಿಸುತ್ತಿದ್ದವು. ಸರ್ಕಾರ ಅನೇಕ ಸವಲತ್ತುಗಳನ್ನು ಕೊಡುತ್ತಿದ್ದರೂ ಅವು ಜನಗಳಿಗೆ ತಲುಪದಂತೆ ಸ್ವಾರ್ಥಿಗಳು ಕೈವಾಡ ನಡೆಸುತ್ತಿರುವುದನ್ನು ಕಂಡು ಮನಸ್ಸು ನೊಂದಿತು. ಈಗಾಗಲೇ ಹಳ್ಳಿಯ ಸ್ವಾರ್ಥ ರಾಜಕಾರಣ ಹಳ್ಳಿಯನ್ನೇ ಹೇಗೆ ಒಡೆದು ಬಿಡುತ್ತದೆ ಎಂಬುದನ್ನು ಬೆಳಗೆರೆ ಕೃಷ್ಣಶಾಸ್ತ್ರಿಗಳು ಈಗಾಗಲೇ 'ಹಳ್ಳಿಚಿತ್ರ ಅರ್ಥಾತ್ ಹುಣಿಸೆಮರದ ವ್ಯಾಜ್ಯ' ಎಂಬ ನಾಟಕದಲ್ಲಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದರು. ಅರವತ್ತರ ದಶಕದಲ್ಲೇ ಅದೊಂದು ವಾಸ್ತವವಾದಿ ನಾಟಕವಾಗಿತ್ತು. ಅದರಲ್ಲಿ ಹೊಲದ ಬದುವಿನಲ್ಲಿರುವ ಒಂದು ಹುಣಿಸೆಮರ ತಮಗೆ ಸೇರಿದ್ದೆಂದು ಅಣ್ಣ–ತಮ್ಮಂದಿರು ಕಿತ್ತಾಡುವುದು, ಅದನ್ನೇ ಬಳಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವ ಪುಡಾರಿಗಳ ಕರಾಮತ್ತು ಒಳಗೊಂಡ ನಾಟಕದಲ್ಲಿ ಸ್ವಯಂ ಗುರುಸಿದ್ದಪ್ಪನವರೇ ಅಭಿನಯಿಸಿದ್ದರು. ಇದರ ಪ್ರಭಾವಕ್ಕೆ ಒಳಗಾಗಿದ್ದ ಅವರಿಗೆ 'ಗ್ರಾಮಸುಧಾರಣೆ'ಯನ್ನೇ ಕೇಂದ್ರವಾಗಿಟ್ಟುಕೊಂಡು ಅದೇ ಹೆಸರಿನ ನಾಟಕ ಏಕೆ ಬರೆಯಬಾರದು ಎಂದು ಚಿಂತಿಸತೊಡಗಿದರು. ಕೆಲವೇ ದಿನಗಳಲ್ಲಿ ನಾಟಕ ರಚನೆ ಮುಗಿದು ಹೋಯಿತು. ಇದೇ ನಾಟಕವನ್ನು ತಮ್ಮ ಊರಿನ ಕಲಾವಿದರಿಗೇ ತರಬೇತಿ ಕೊಟ್ಟು ತಯಾರು ಮಾಡಿದರು. ಅದೇ ಸಂದರ್ಭಕ್ಕೆ ಸರಿಯಾಗಿ ರಾಜ್ಯಮಟ್ಟದ ನಾಟಕ ಸ್ಪರ್ಧೆ ನಡೆಯುವುದಿತ್ತು. ಈ ನಾಟಕವನ್ನು ಸ್ಪರ್ಧೆಗೆ ಏಕೆ ತೆಗೆದುಕೊಂಡು ಹೋಗಬಾರದು ಎಂಬ ಯೋಚನೆ ಬಂದಿದ್ದೇ ತಡ ನಾಟಕದ ಕಲಾವಿದರಲ್ಲಿ ಇನ್ನಷ್ಟು ಉತ್ಸಾಹ ತುಂಬಿ ಸ್ಪರ್ಧೆಯಲ್ಲಿ ಭಾಗವಹಿಸಿಯೇ ಬಿಟ್ಟರು. ನಾಟಕಕ್ಕೆ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಎರಡನೇ ಬಹುಮಾನ ಬಂತು. ಇದರಲ್ಲಿ ಗುರುಸಿದ್ದಪ್ಪನವರು ಸಾಹುಕಾರ ಸುಬ್ಬಯ್ಯನ ಹಾಸ್ಯಪಾತ್ರ ಮಾಡಿದ್ದರು. ತಮ್ಮ ಪ್ರಯತ್ನ ಯಶಸ್ವಿಯಾಗಿದ್ದಕ್ಕೆ ಎಲ್ಲರೂ ಸಂತೋಷಪಟ್ಟರು.

## ಮತ್ತೆರಡು ನಾಟಕಗಳ ಸೃಷ್ಟಿ

ಇದೇ ಹುಮ್ಮಸ್ಸಿನಲ್ಲಿ ಸಂಸಾರಿಕ ಏಳುಬೀಳುಗಳನ್ನು ಚಿತ್ರಿಸುವ 'ಸುಮಂಗಲ' ಎಂಬ ನಾಟಕ ಬರೆದರು. ತಾವೇ ಕಟ್ಟಿದ್ದ 'ಗುರು ಕಲಾ ಸಂಘ'ದವರೇ ಈ ನಾಟಕವನ್ನೂ ಅಭಿನಯಿಸಿದರು.

ಮನಸ್ಸಿನಲ್ಲಿ ಮತ್ತೊಂದು ಮಹತ್ತರ ನಾಟಕ ರೂಪುಗೊಳ್ಳತೊಡಗಿತ್ತು. ಆದಾಗತಾನೇ ಬಂದ ಗುರುದತ್‌ನ 'ಪ್ಯಾಸಾ' ಚಲನಚಿತ್ರ ಇಡೀ ದೇಶವನ್ನು ಮೋಡಿ ಮಾಡಿದ ಸಮಯ. ತನ್ನ ಸಾಹಿತ್ಯಕ ಹುಚ್ಚಿನಿಂದ ಸಂಸಾರದಲ್ಲಿ ಸುಖ ಕಾಣದೆ ಸರ್ವಸ್ವವನ್ನು 'ತ್ಯಾಗ' ಮಾಡುವ ಸಾಹಿತಿಯ ಪಾತ್ರದ ಹಿನ್ನೆಲೆಯಲ್ಲಿ ನಾಟಕ ರಚಿತವಾಯಿತು. ಬಹುಶಃ ಗುರುಸಿದ್ದಪ್ಪನವರು ಗುರುದತ್ತರ ಪ್ರಭಾವಕ್ಕೆ ಒಳಗಾದರೋ ತಿಳಿಯದು, ಅಂತೂ ಒಂದು ಅದ್ಭುತ ನಾಟಕ ಸೃಷ್ಟಿಯಾಯಿತು. ಇದರ ಅನೇಕ ಪ್ರಯೋಗಗಳು ಇವರಿಗೆ ಒಳ್ಳೆಯ ಹೆಸರನ್ನು ತಂದವು.

೧೯೬೫ರಲ್ಲಿ ತುಮಕೂರು ಜಿಲ್ಲೆಯ ಮಿಡಿಗೇಶಿಯ ಮಾರುತಿ ಕಲಾಸಂಘದವರು ಗುರುಸಿದ್ದಪ್ಪನವರನ್ನು ಕರೆಸಿಕೊಂಡು 'ಶಿವಜಲಂಧರ' ಪೌರಾಣಿಕ ನಾಟಕವನ್ನು ಅಭಿನಯಿಸಿದರು. ಸಾಮಾಜಿಕ ನಾಟಕವೊಂದನ್ನು ಆಡಬೇಕು ಎಂಬ ಅವರ ಅಭಿಲಾಷೆಯಂತೆ ಗುರುಸಿದ್ದಪ್ಪನವರ 'ತ್ಯಾಗ' ನಾಟಕವನ್ನು ಕಟ್ಟಿದರು. ನಾಟಕ ಪ್ರದರ್ಶನ ಕರ್ನಾಟಕ ನಾಟಕ ಪಿತಾಮಹರೆನಿಸಿಕೊಂಡ ಗುಬ್ಬಿ ವೀರಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅವರು ಗುರುಸಿದ್ದಪ್ಪನವರ ಚತುರ ನಿರ್ದೇಶನ ಮತ್ತು ನಾಟಕ ರಚನೆಗೆ ತುಂಬು ಹೃದಯದ ಪ್ರಶಂಸೆಗಳನ್ನು ಅರ್ಪಿಸಿದರು. ಗುರುಸಿದ್ದಪ್ಪನವರಿಗೆ ತನ್ನ ಬದುಕು ಧನ್ಯ ಅನ್ನಿಸಿತು.

೧೯೬೮ರಲ್ಲಿ ಶಿರಾದ ಸ್ಥಳೀಯ ಕಲಾವಿದರು ಅಭಿನಯಿಸಿದ 'ತ್ಯಾಗ' ನಾಟಕಕ್ಕೆ ಚಲನಚಿತ್ರ ನಟರಾದ ಕೆ.ಎಸ್.ಅಶ್ವತ್ಥ್, ಪಂಡರೀಬಾಯಿ, ಹಾಸ್ಯನಟ ರತ್ನಾಕರ್ ಅವರು ಆಗಮಿಸಿದ್ದು ನಾಟಕವನ್ನು ನೋಡಿ ಮನಸಾರೆ ಮೆಚ್ಚಿಕೊಂಡು 'ಅತ್ಯುತ್ತಮ ನಾಟಕ, ಅತ್ಯುತ್ತಮ ದಿಗ್ದರ್ಶಕ' ಎಂದು ಹೊಗಳಿದರು. ಶಿರಾದ ವಿದ್ಯಾಗಣಪತಿ ಸಂಘದವರು 'ನಾಟ್ಯ ಕವಿ ಚತುರ' ಎಂಬ ಬಿರುದು ಕೊಟ್ಟು ಸನ್ಮಾನಿಸಿದರು.

## ಪ್ರಾಣ ತುಂಬಿದ ಹರಿಕತೆಗಳು

ಗಣೇಶನ ಹಬ್ಬವೆಂದರೆ ಹರಿಕತೆಗಳಿಗೆ ಸುಗ್ಗಿಯಾಗಿದ್ದ ಕಾಲ ಅದು. ಆಗಿನ್ನೂ 'ಸಂಗೀತ ಗೋಷ್ಠಿ'(ಆರ್ಕೆಸ್ಟ್ರಾ)ಗಳ ಹಾವಳಿ ಇರಲಿಲ್ಲ. ಭಕ್ತಿಯಿಂದ ಹರಿಕಥಾ

ಕಾಲಕ್ಷೇಪಕ್ಕೆ ನೂರಾರು ಜನ ಸೇರುತ್ತಿದ್ದರು. ಸಾಹಿತ್ಯ, ಸಂಗೀತ, ಅಭಿನಯಗಳ ಒಂದು ಅದ್ಭುತವಾದ ಸಂಗಮ – 'ಕಥಾಕೀರ್ತನ' ಕಾಲಕ್ಷೇಪ. ಇದರಲ್ಲಿ ಶಿವಕತೆ, ಹರಿಕತೆ, ಶಿವಶರಣರ ಕತೆಗಳೂ, ಮಹಾಭಾರತ, ರಾಮಾಯಣಗಳಿಂದಲೂ ಆರಿಸಿದ ಕತೆಗಳು ಇರುತ್ತಿದ್ದವು. ಒಟ್ಟಾರೆ ಭಕ್ತಿಗೆ ಸಂಬಂಧಿಸಿದ ಕತೆಗಳು. ಮುಖ್ಯ ಕತೆಯ ಮಧ್ಯೆ ಬರುವ ಉಪಕತೆಗಳು, ಹಾಸ್ಯ ಪ್ರಸಂಗಗಳು ಜನರಿಗೆ ಅದ್ಭುತವಾದ ಮನರಂಜನೆಯನ್ನು ನೀಡುತ್ತಿದ್ದವು. ಹೀಗಾಗಿ ಭೂಕೈಲಾಸ, ವಿನಾಯಕ ವಿಜಯ, ಗಜಗೌರೀ ವ್ರತ, ಕೃಷ್ಣ ಗಾರುಡಿ, ವಿರಾಟಪರ್ವ, ಕಿರಾತಾರ್ಜುನೀಯ (ಪಾಶುಪತಾಸ್ತ್ರ), ಭಕ್ತ ಸುಧನ್ವ, ಸತೀ ಅನಸೂಯ, ಬಸವೇಶ್ವರ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ, ತಿಪ್ಪೇರುದ್ರಸ್ವಾಮಿ ಇತ್ಯಾದಿ ಕಥಾ ಕೀರ್ತನೆಗಳನ್ನು ಮಾಡಿಕೊಂಡು ಜೀವನ ಸಾಗಿತು.

## ತ.ರಾ.ಸು. ರೌದ್ರಾವತಾರ

ತ.ರಾ.ಸು. ಅವರ ಕಾದಂಬರಿ ಆಧರಿಸಿ ಚಳ್ಳಕೆರೆಯ ಜನಪ್ರಿಯ ರಾಜಕಾರಣಿ, ಬಲಿಜ ಸಮಾಜದ ನಾರಾಯಣಮೂರ್ತಿಯವರು 'ದಳವಾಯಿ ಮುದ್ದಣ್ಣ' ಎಂಬ ನಾಟಕ ರಚಿಸಿದರು. ಇದಾದ ನಂತರವೋ ಅಥವಾ ಮುಂಚೆಯೋ ತಿಳಿಯದು. ತ.ರಾ.ಸು. ಅವರ 'ರಾಜ್ಯದಾಹ' ಎಂಬ ಕಾದಂಬರಿ ಬರೆದರು. (ನಂತರ ಅದು ನಾಟಕವಾಗಿಯೂ ಪರಿವರ್ತನೆಯಾಯಿತು) ಬಹುಶಃ ಈ ನಾಟಕ ೧೯೬೩ರ ಆಸುಪಾಸಿನಲ್ಲಿ ನಡೆದಿರಬಹುದು. ಕ್ಷೌರಿಕರ ರಾಜಶೇಖರಪ್ಪ ದಳವಾಯಿ ಮುದ್ದಣ್ಣನ ಪಾತ್ರ ಮಾಡಿದ್ದರು. ಈ ನಾಟಕ ಮಾಡುತ್ತಿರುವ ಸುದ್ದಿ ತ.ರಾ.ಸು. ಅವರ ಕಿವಿಗೆ ಬಿತ್ತು. ನಾಟಕ ಪ್ರದರ್ಶನದ ದಿನವೇ ಚಳ್ಳಕೆರೆಗೆ ಬಂದರು. ನಾಟಕಪ್ರಿಯ ಮೇಸ್ಟರಾಗಿದ್ದ ಎಚ್.ಆರ್.ನಾರಾಯಣರಾವ್ ಅವರ ಮನೆಯಲ್ಲಿ ಇಳಿದುಕೊಂಡರು. ಆ ಮೇಸ್ಟರು 'ಎಚ್‌ಆರ್‌ಎನ್' ಎಂದೇ ಖ್ಯಾತರಾಗಿದ್ದರು. ಅವರ ನಾಟಕ ಪ್ರೀತಿಯ ಬಗ್ಗೆ ಒಂದು ದಂತಕತೆಯಾಗಿದ್ದರು. ಅವರನ್ನು ಕಂಡರೆ ಎಲ್ಲರೂ ಹೆದರುತ್ತಿದ್ದರು. ಸದಾ ಅವರ ಹೆಗಲ ಮೇಲೆ ಗದೆಯಂತೆ ಛತ್ರಿ ವಿರಾಜಮಾನವಾಗಿರುತ್ತಿತ್ತು. ಹೀಗಾಗಿ ಅವರಿಗೆ 'ಛತ್ರಪತಿ' ಎಂಬ ಅಡ್ಡ ಹೆಸರೂ ಇತ್ತು. ಅವರು ಹುಬ್ಬು ಹಾರಿಸುತ್ತಾ 'ಯಾವನವನು ಬೆಪ್ಪನನ್ಮಗ' ಎಂದು ಅಬ್ಬರಿಸಿದರೆ ಎಲ್ಲರೂ ನಡುಗುತ್ತಿದ್ದರು.

ನಾಟಕದ ಹ್ಯಾಂಡ್‌ಬಿಲ್ (ಕರಪತ್ರ) ನೋಡಿ 'ಇದನ್ನು ಬರೋದೋನ್ಯಾರು, ಆಡಿಸೋನ್ಯಾರು?' ಎಂದು ಬೆಳಿಗ್ಗೆ ನಾಟಕದ ಸ್ಟೇಜ್ ಬಳಿ ಬಂದು ಘರ್ಜಿಸಿದರು.

ನಾಟಕದವರು ಬಂದು ಕ್ಷಮೆ ಕೋರಿ, ರಾತ್ರಿ ನಾಟಕಕೆ ಬರಬೇಕೆಂಬ ಆಹ್ವಾನಿಸಿದರು. ಆದರೆ ಅವರು ಆ ರಾತ್ರಿ ನಾಟಕಕ್ಕೆ ಬರಲಿಲ್ಲ, ಕುಡಿದು ಮಲಗಿದ್ದಾರೆಂಬ ಸುದ್ದಿ ಬಂತು.

## ದ್ವೇಷ ಅಳಿಸಿದ ಶಿಷ್ಯ

ಚಳ್ಳಕೆರೆ ತಾಲ್ಲೂಕಿನ ಕಾಲುವೇಹಳ್ಳಿಯಲ್ಲಿ ಆಗಾಗ್ಗೆ ನಾಟಕಗಳು ನಡೆಯುತ್ತಿದ್ದವು. ಅಲ್ಲಿನ ಬಹುಪಾಲು ಜನ ಮ್ಯಾಸನಾಯಕರ ಬುಡಕಟ್ಟಿಗೆ ಸೇರಿದವರು. ಆದರೂ ಅವರಿಗೆ ನಾಟಕ ಕಲೆಯ ಬಗ್ಗೆ ಅಪಾರವಾದ ಪ್ರೀತಿ. ಅಲ್ಲಿ ಹಿಂದೆ ಮಹಾರಥಿ ಕರ್ಣ ನಾಟಕ ಆಡಿದ್ದರು. ಭಕ್ತ ಸುಧನ್ವ ನಾಟಕ ಆಡಬೇಕೆಂಬ ಏರ್ಪಾಟು ನಡೆಯತೊಡಗಿತು. ಆಗ ಊರಿನಲ್ಲಿ ಪಾರ್ಟಿ (ವ್ಯಾಜ್ಯ), ಗುಂಪುಗಾರಿಕೆ. ಒಬ್ಬರ ಮುಖ ಕಂಡರೆ ಒಬ್ಬರಿಗೆ ಆಗುತ್ತಿರಲಿಲ್ಲ. ಆದರೆ ಮುನಿಸಿಕೊಂಡು ಮುಖ ತಿರುಗಿಸಿಕೊಂಡ ಯಜಮಾನರನ್ನು ಒಂದುಗೂಡಿಸಿ ನಾಟಕ ಆಡುವುದು ಹೇಗೆ ಎಂಬ ಪ್ರಶ್ನೆಯನ್ನು ಅದೇ ಊರಿನ ಗಾದಿರಪ್ಪ ಎಂಬ ಕಲಾಪ್ರೇಮಿ ಗುರುಸಿದ್ದಪ್ಪನವರ ಮುಂದೆ ಇಟ್ಟು ಇದನ್ನು ಹೇಗಾದರೂ ಮಾಡಿ ಬಗೆಹರಿಸಿ ಎಂದು ದುಂಬಾಲು ಬಿದ್ದ. ಗಾದಿರಪ್ಪನಿಗೆ ಹಾರ್ಮೋನಿಯಂ ಕಲಿಯಬೇಕೆಂಬ ಹುಚ್ಚು. ಬಾಲೇನಹಳ್ಳಿ ಮಲ್ಲಾರೆಡ್ಡಿಗಳಿಗೆ ಸಂಗೀತ ಕಲಿಸಿ ಎಂದು ಬೆನ್ನುಬಿದ್ದ. ಅವರು ತಪ್ಪಗೊಂಡನಹಳ್ಳಿಯ ನಾಟಕಕ್ಕೆ ಬಂದಾಗ 'ನಿಮ್ಮ ಊರಿನ ಪಕ್ಕದ ನಾಗ್ಗೊಂಡನಹಳ್ಳಿಯ ಗುರುಸಿದ್ದಪ್ಪನವರಿಂದಲೇ ಕಲಿಯಿರಿ' ಎಂದು ಪರೋಕ್ಷವಾಗಿ ಶಿಷ್ಯ ದೀಕ್ಷೆ ಕೊಟ್ಟಿದ್ದರು. ಅಲ್ಲಿಂದ ಗುರುಸಿದ್ದಪ್ಪನವರೊಂದಿಗೆ ಗಾದಿರಪ್ಪನವರ ಒಡನಾಟ ಹೆಚ್ಚಾಯಿತು. (ನಂತರದ ದಿನಗಳಲ್ಲಿ ಗಾದಿರಪ್ಪನವರು ಹಾರ್ಮೋನಿಯಂ ಕಲಿತು ನಾಟಕದ ಮೇಸ್ಟರಾಗಿ ಸುತ್ತಿನ ಹಳ್ಳಿಗಳಲ್ಲಿ ನೂರಾರು ನಾಟಕಗಳನ್ನು ಆಡಿಸಿ ಹೆಸರು ಮಾಡಿದರು. ಇತ್ತೀಚಿನ ೧೫ ವರ್ಷಗಳಲ್ಲಿ ಅವರು ತಮ್ಮ ಮ್ಯಾಸಮಂಡಲದ ಸಾಂಸ್ಕೃತಿಕವೀರರಾದ ಗಾದಿರಿ ಪಾಲನಾಯಕ, ಜಗಲೂರು ಪಾಪನಾಯಕ ನಾಟಕಗಳನ್ನು ಬರೆದಿದ್ದು, ಅವುಗಳ ಪ್ರದರ್ಶನ ಮ್ಯಾಸನಾಯಕರು ಇರುವ ಭಾಗಗಳಲ್ಲೆಲ್ಲಾ ನಡೆಯಿತು. ಇತ್ತೀಚೆಗೆ ಆ ಎರಡೂ ನಾಟಕಗಳನ್ನು ಬೆಂಗಳೂರಿನ ಸಿವಿಜಿ ಪಬ್ಲಿಕೇಷನ್ಸ್ ಮತ್ತು ಪಟೇಲ್ ಪಬ್ಲಿಕೇಷನ್ಸ್‌ನವರು ಪ್ರಕಟಿಸಿದ್ದಾರೆ. ವಿಷಾದದ ವಿಚಾರವೆಂದರೆ ಈ ಕೃತಿಗಳು ಬೆಳಕು ಕಾಣುವ ಮುನ್ನವೇ ಕೌಟುಂಬಿಕ ಕಲಹದಿಂದ ಬೇಸತ್ತು ವಿಷಪ್ರಾಶನ ಮಾಡಿ ದಿವಂಗತರಾಗಿದ್ದಾರೆ.)

ಕೊನೆಗೆ ಒಂದು ದಿನ ಗುರುಸಿದ್ದಪ್ಪನವರು ಕಾಲುವೇಹಳ್ಳಿಗೆ ಹೋಗಿ ಎರಡೂ ಗುಂಪಿನವರನ್ನು ಸೇರಿಸಿ ತಮ್ಮದೇ 'ಭಕ್ತ ಸುಧನ್ವ' ನಾಟಕದ ಪಾತ್ರಗಳನ್ನು ಎರಡೂ

ಪಕ್ಷದವರಿಗೆ ಹಂಚಿ ಅಣ್ಣ-ತಮ್ಮಂದಿರಾಗಿ ಬಾಳಿ ಎಂದು ನಾಟಕ ಪ್ರಾಕ್ಟೀಸ್ ಪ್ರಾರಂಭಿಸಿದರು. ನಾಟಕ ಪ್ರದರ್ಶನದ ದಿನ ಎರಡೂ ಕಡೆಯ ಯಜಮಾನರು ಮುಂದೆ ನಿಂತು ಭರ್ಜರಿಯಾಗಿ ನಾಟಕ ಆಡಿಸಿದರು. ಅಂತೂ ಈ ನಾಟಕ ಒಡೆದ ಹೃದಯಗಳನ್ನು ಒಂದುಗೂಡಿಸಿತು.

## ಜಾತ್ರೆಗಳಲ್ಲಿ ನಾಟಕ

ಚಳ್ಳಕೆರೆ ತಾಲ್ಲೂಕಿನಲ್ಲಿ ನಡೆಯುವ ಜಾತ್ರೆಗಳಲ್ಲೆಲ್ಲಾ ಗುರುಸಿದ್ದಪ್ಪನವರ ನಾಟಕಗಳು ಇದ್ದೇ ಇರುತ್ತಿದ್ದವು. ಅರವಿಗೊಂಡನಹಳ್ಳಿಯ ಚಲಿಮೆಸ್ವಾಮಿ ಜಾತ್ರೆ, ದೊಡ್ಡ ಉಳ್ಳಾರ್ತಿಯಲ್ಲಿ ನಡೆಯುವ ಗೌರಮ್ಮನ ಜಾತ್ರೆಯಲ್ಲಿ ತಮ್ಮದೇ 'ಸುಮಂಗಲ' ನಾಟಕ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಜಾತ್ರೆಯಲ್ಲಿ ಸದ್ಯೋಜಾತಮೂರ್ತಿಗಳ 'ತಿಪ್ಪೇಶ ಮಹಿಮೆ' ನಾಟಕಗಳು ನಡೆಯುತ್ತಿದ್ದವು. ನಾಯಕನಹಟ್ಟಿಯಲ್ಲಿ 'ತಿಪ್ಪೇಸ್ವಾಮಿ' ನಾಟಕ ಆಡುವಾಗ ಸ್ಟೇಜ್ ಮೇಲೆ ಕಟ್ಟಿದ ಕಚ್ಚೆ ಪಂಚೆ ಉದುರಿಹೋಯಿತು. ಈ ನಾಟಕದಲ್ಲಿ ಹಾಸ್ಯ ಪಾತ್ರದಿಂದ ಹಿಡಿದು ನಾಯಕನವರೆಗೂ ಎಲ್ಲ ಪಾತ್ರಗಳನ್ನು ಅಭಿನಯಿಸಿದ ಅನುಭವ ಗುರುಸಿದ್ದಪ್ಪನವರದು.

ಪಕ್ಕದ ಆಂಧ್ರದಲ್ಲಿರುವ ಯಾಪಲಪರ್ತಿಯಲ್ಲಿ ಭಾರೀ ದನಗಳ ಜಾತ್ರೆ ನಡೆಯುತ್ತಿತ್ತು. ಅಲ್ಲಿ ನಾಟಕ ಆಡಬೇಕೆಂದು ಗುರುಸಿದ್ದಪ್ಪನವರು ತಮ್ಮ ತಂಡದೊಂದಿಗೆ ಆ ಊರಿಗೆ ಹೋದಾಗ ಜಾತ್ರೆ ಚದುರತೊಡಗಿತ್ತು. ಇವರು ಊರು ಪ್ರವೇಶಿಸುತ್ತಿದ್ದರೆ ಎದುರಿಗೆ ದನಗಳು ಹೊರಹೋಗುತ್ತಿದ್ದವು. ಹೋದ ಮೇಲೆ ಹೇಗಾದರೂ ಸರಿ ನಾಟಕ ಆಡಲೇಬೇಕು ಎಂದು ತೀರ್ಮಾನಿಸಿದರು. ಇವರ ಅದೃಷ್ಟಕ್ಕೆ ಈ ಹಿಂದೆ ನಾಟಕ ಆಡಿದ ತಂಡದವರು ಸ್ಟೇಜ್ ಹಾಗೇ ಬಿಟ್ಟುಹೋಗಿದ್ದರು. ಅದು ತೆಲುಗು ಪ್ರದೇಶ, ಅಲ್ಲೇನಿದ್ದರೂ ತೆಲುಗು ನಾಟಕಗಳನ್ನೇ ಅಭಿನಯಿಸುತ್ತಿದ್ದರು. ಆದರೆ ತಮ್ಮದು ಕನ್ನಡ ನಾಟಕ, ಯಾರು ನೋಡುತ್ತಾರೆ ಎಂಬ ಅಳುಕು. ಆದರೆ ತೆಲುಗು ಜನ ತುಂಬು ಹೃದಯದಿಂದ ಬಂದು ಕನ್ನಡ ನಾಟಕ ನೋಡಿ ಮೆಚ್ಚಿದರು. ಭಾಷಾ ಸೌಹಾರ್ದಕ್ಕೆ ಇದೊಂದು ಮಾದರಿಯಾಗಿತ್ತು.

## ಮರೆಯಲಾಗದ ಅನುಭವಗಳು

ಚಿತ್ರದುರ್ಗ ಜಿಲ್ಲೆಯ ಪ್ರಸಿದ್ಧ ನಾಟಕಕಾರ ಮರಡಿಹಳ್ಳಿ ಸೀತಾರಾಮರೆಡ್ಡಿ ಅವರ 'ದುರ್ದೈವ' ನಾಟಕ ಚಿತ್ರದುರ್ಗ ತಾಲ್ಲೂಕಿನ ತೋಪರು ಮಾಳಿಗೆಯಲ್ಲಿ (ಇದು ಸೀತಾರಾಮರೆಡ್ಡಿಯವರು ಮದುವೆಯಾಗಿದ್ದ ಊರು) ಏರ್ಪಾಟಾಗಿತ್ತು.

ಊರಲ್ಲಿ ಕಟ್‌ಪಾರ್ಟಿ, ನಾಟಕ ಪ್ರಾರಂಭವಾದ ಅರ್ಧ ಗಂಟೆಯ ನಂತರ ಸ್ಟೇಜ್ ಮೇಲೆ ಕಲ್ಲುಗಳು ಬೀಳಲು ಪ್ರಾರಂಭವಾದವು. ಕೊನೆಗೆ ನಾಟಕ ನಿಲ್ಲುವವರೆಗೂ ಕಲ್ಲುಗಳು ಬೀಳುತ್ತಲೇ ಇದ್ದವು.

* * *

ಹಿರಿಯೂರು ತಾಲ್ಲೂಕಿನ ಬ್ಯಾಡರಹಳ್ಳಿಯಲ್ಲಿ 'ಕೂಡಿ ಬಾಳೋಣ' ಎಂಬ ಸಾಮಾಜಿಕ ನಾಟಕ. ಅದನ್ನು ಕಲಿಸಲು ಅಲ್ಲಿಗೆ ಹೋದಾಗ ತಿಳಿಯಿತು, ಆ ನಾಟಕದ ಪಾತ್ರಧಾರಿಗಳೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರು ಎಂದು. ಅವರು ನಾಟಕವನ್ನು ಅನ್ವರ್ಥಕಗೊಳಿಸಿದ್ದರು.

* * *

ಹಿರಿಯೂರು ತಾಲ್ಲೂಕಿನ ಬೀರೇನಹಳ್ಳಿಗೆ ಗುರುಸಿದ್ದಪ್ಪನವರ ಶಿಷ್ಯ ಗಾದಿರಪ್ಪನವರು ನಾಟಕ ಕಲಿಸಲು ಹೋಗಿದ್ದರು. ಪಿಟೀಲು ವಾದಕರಾಗಿ ಗುರುಸಿದ್ದಪ್ಪನವರೂ ಹೋಗಿದ್ದರು. ಅವರಿಗೆ ಕುಡಿತವೆಂದರೆ ಒಂದು ಗಾಳಿ ಆಗುತ್ತಿರಲಿಲ್ಲ. ಅಂಥದರಲ್ಲಿ ಆ ನಾಟಕದ ಪ್ರದರ್ಶನದ ದಿನ ನಾಟಕದ ಮ್ಯಾನೇಜರ್ ಸೇರಿದಂತೆ ಎಲ್ಲ ನಟರೂ ಕಂಠಪೂರ್ತಿ ಕುಡಿದಿದ್ದರು. ಮಾತುಗಳು ಬರುತ್ತಿಲ್ಲ, ನಾಲಗೆ ತೊದಲುತ್ತಿದೆ. ಕೊನೆಗೆ ಎಲ್ಲರೂ ರಂಗಭೂಮಿಯ ಮೇಲೇ ಎಚ್ಚರತಪ್ಪಿ ಬಿದ್ದರು.

* * *

ಬಾಲೇನಹಳ್ಳಿ ಮಲ್ಲಾರೆಡ್ಡಿಯವರು ಆಡಿಸುತ್ತಿದ್ದ 'ಕಬೀರ' ನಾಟಕದಲ್ಲಿ ಅವರು ತಮ್ಮನೂ ಪಾತ್ರ ಮಾಡಿದ್ದ. ಆತ ಒಮ್ಮೆ ಪರದೆಯನ್ನೇ ಗೋಡೆ ಎಂದು ಭಾವಿಸಿಕೊಂಡು ಅದಕ್ಕೇ ಏಣಿ ಹಾಕಿದ. ಏಣಿ ಜಾರಿ ಕೆಳಗೆ ಬಿದ್ದಾಗಲೇ ತಪ್ಪಿನ ಅರಿವಾದದ್ದು.

* * *

ಎಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅವರ ಮಂತ್ರಿಮಂಡಲದಲ್ಲಿ ಆಗಿನ ಚಳ್ಳಕೆರೆಯ ಶಾಸಕ ತಿಪ್ಪೇಸ್ವಾಮಿಯವರು ಮಂತ್ರಿಯಾಗಿದ್ದರು. ಅವರು ರಾಜಕೀಯಕ್ಕೆ ಬರುವ ಮುಂಚೆ ಕಂಟ್ರಾಕ್ಟರ್ ಆಗಿದ್ದವರು. ಅವರಿಗೂ ನಾಟಕದ ಖಯಾಲಿ. ಅವರು ಸುಧನ್ವನ ಪಾತ್ರವನ್ನು ಮಾಡಿದ್ದರು.

* * *

ಈಗ ನಾಟಕ ಅಕಾಡೆಮಿಯ ಸದಸ್ಯರಾಗಿರುವ ಚಳ್ಳಕೆರೆಯ ಪಿ.ತಿಪ್ಪೇಸ್ವಾಮಿಯವರು ಗುರುಸಿದ್ದಪ್ಪನವರಿಂದ ಸಂಗೀತ ಕಲಿತ ಶಿಷ್ಯ. ಅವರು ವೃತ್ತಿಯಿಂದ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದರೂ ನಾಟಕದ ಭಾರೀ ಹುಚ್ಚು. ಅವರೂ ನೂರಾರು ನಾಟಕಗಳನ್ನು ಕಲಿಸಿದ ಹಾರ್ಮೋನಿಯಂ ಮಾಸ್ಟರ್. ಆಗ ಗುರುಸಿದ್ದಪ್ಪನವರು ಒಮ್ಮೆ ನಾರದನ ಪಾತ್ರ ವಹಿಸಿದ್ದರು.

* * *

ಎಲ್ಲ ಪಾತ್ರಧಾರಿಗಳು ಮೇಕಪ್ ಆದ ನಂತರ, ನಾಟಕ ಕಲಿಸಿದ ಮೇಸ್ಟರ ಕಾಲಿಗೆ ಬಿದ್ದು ಆಶೀರ್ವಾದ ಪಡೆದ ನಂತರ, ನಾಟಕದ ಮೇಸ್ಟರು ಹೋಗಿ ನಾಂದಿ ಪದ್ಯ ನುಡಿಸುತ್ತಾ ಪ್ರಾರ್ಥನೆ ಮಾಡುವುದು ಸಂಪ್ರದಾಯವಾಗಿತ್ತು. ಒಮ್ಮೆ ಈ ಎಲ್ಲಾ ಪ್ರಕ್ರಿಯೆಗಳು ಮುಗಿದು ನಾಂದಿ ಪದ್ಯ ನುಡಿಸಬೇಕು ಎನ್ನುವಷ್ಟರಲ್ಲಿ ತಬಲ ಬಾರಿಸುವ ಮುರಿಗಪ್ಪನೇ ಪತ್ತೆ ಇಲ್ಲ. ಸ್ಟೇಜು ಹಿಂಭಾಗದ ಕುಂಬಾರರ ಮನೆಯಲ್ಲಿ ಕಂಠಮಟ್ಟ ಕುಡಿದು ಮಲಗಿಬಿಟ್ಟಿದ್ದ. ಹೋಗಿ ಎಬ್ಬಿಸಿ, ಮುಖ ತೊಳಿಸಿ, ಬಿಸಿ ಬಿಸಿ ಕಾಫಿ ಕೊಟ್ಟು ರಂಗಮಂಚಕ್ಕೆ ಕರೆತರಬೇಕಾಯಿತು.

* * *

ಒಮ್ಮೆ ಅರವಿಗೊಂಡನಹಳ್ಳಿಯಲ್ಲಿ ಪ್ರಾಕ್ಟೀಸ್ ಮುಗಿಸಿಕೊಂಡು ಊರಿಗೆ ನಡೆದುಕೊಂಡು ಹೊರಟಿದ್ದರು. ಜೊತೆಗೆ ಯಾರೂ ಇರಲಿಲ್ಲ. ನೂರಾರು ಸಾರಿ ಓಡಿಯಾಡಿದ ದಾರಿ ಎಂಬ ತಾತ್ಸಾರ. ಊರ ಹೊರಗೆ ಮರಳು ದಿಬ್ಬದ ಬಳಿ ಸ್ಮಶಾನ ಇತ್ತು. ಅಲ್ಲಿ ದೆವ್ವಗಳ ಸಂಚಾರ ಇದೆ ಎಂದು ಕೇಳಿದ್ದರು. ಅಷ್ಟು ದಿನ ಓಡಾಡಿದರೂ ದೆವ್ವ ಯಾವತ್ತೂ ಕಣ್ಣಿಗೆ ಬಿದ್ದಿರಲಿಲ್ಲ. ಆದರೆ ಇಂದೇಕೋ ಅಲ್ಲಿಗೆ ಬರುತ್ತಲೇ ಸರಸರ ಸದ್ದು ಕೇಳುತ್ತಿದೆ. ಸ್ವಲ್ಪ ಭಯವಾಯಿತು. ಧೈರ್ಯ ತಂದುಕೊಂಡು ಚಲಿಮೆಸ್ವಾಮಿ ಗದ್ದಿಗೆಯ ಸರಹದ್ದಿಗೆ ಬಂದರು. ಶಬ್ದ ನಿಂತಿತು. ಶರಣಸ್ಥಾನ, ಆದ್ದರಿಂದ ದೆವ್ವ ಬಾಲ ಬಿಚ್ಚುತ್ತಿಲ್ಲ ಅಂದುಕೊಂಡರು. ಆ ಗಡಿ ದಾಟುತಿದ್ದಂತೆಯೇ ಮತ್ತೆ ಶಬ್ದ. ತಾನು ಮುಂದೆ ಮುಂದೆ ನಡೆದರೆ ಹಿಂದೆ ಹಿಂದೆ ಯಾರೋ ಹಿಂಬಾಲಿಸಿಕೊಂಡು ಬರುತ್ತಿದ್ದಾರೆ ಅನಿಸುತ್ತಿತ್ತು. ಧೈರ್ಯ ಮಾಡಿ ಒಮ್ಮೆ ತಿರುಗಿ ನೋಡಿದರೆ ಯಾರೂ ಇಲ್ಲ. ಒಮ್ಮೆ ತಮ್ಮನ್ನೇ ಆಮೂಲಾಗ್ರವಾಗಿ ಅವಲೋಕಿಸಿದಾಗ ದೆವ್ವ ಹೊರಬಿತ್ತು. ಗುರುಸಿದ್ದಪ್ಪನವರಿಗೆ ಆಫ್‌ಕೋಟ್ (ವ್ಯಾಸ್ಕೋಟ್) ಹಾಕುವುದು ಅಭ್ಯಾಸ. ಆ ಕೋಟಿನ ಜೇಬಿನಲ್ಲಿ ಇಟ್ಟುಕೊಂಡಿದ್ದ ವೃತ್ತ ಪತ್ರಿಕೆಗೆ ಕೈ ತಗುಲಿ ಗಾಳಿಗೆ ಸರಸರ ಸದ್ದು ಮಾಡುತ್ತಿತ್ತು. ಅಷ್ಟೆ. ಅಂತೂ ಪೇಪರ್ ಭೂತ ತಣ್ಣಗಾಯಿತು.

* * *

ಪುರ್ಲೆಹಳ್ಳಿ ಬಳಿಯ ವಸತಿ ದಿಬ್ಬದಲ್ಲಿ ಕಾಡುಗೊಲ್ಲರ ಕ್ಯಾತಪ್ಪನ ಪರಿಷೆ ನಡೆಯುತ್ತದೆ. ಈ ಜಾತ್ರೆಯ ಮುಖ್ಯ ಆಕರ್ಷಣೆ ಕ್ಯಾತೇದೇವರನ್ನು ೧೫–೨೦ ಅಡಿ ಎತ್ತರದ ಕಳ್ಳೆರಾಶಿ ಹಾಕಿ ಅದರ ಕೆಳಗಡೆ ಕಳ್ಳೆಗುಡಿ ರಚಿಸಿ ದೇವರು ಕೂರಿಸುತ್ತಾರೆ. ಕಳ್ಳೇರಾಶಿಯ ತುದಿಯಲ್ಲಿ ಕಂಚಿನ ಕಲಶ ಸಿಕ್ಕಿಸಿರುತ್ತಿದ್ದರು. ಸುತ್ತ ನೆರೆದ, ಹರಕೆ ಮಾಡಿಕೊಂಡ ಭಕ್ತರು ಬರಿಗಾಲಲ್ಲಿ ಆ ಕಳ್ಳೇರಾಶಿಯನ್ನು ಹತ್ತಿ ಕಳಶ ಕೀಳುವ ರೋಚಕ ಆಚರಣೆಯೊಂದಿಗೆ ೨೦–೨೫ ದಿನಗಳ ಜಾತ್ರೆಗೆ ತೆರೆ ಬೀಳುತ್ತದೆ. ಈ ಕ್ಯಾತೇದೇವರು ಚಳ್ಳಕೆರೆ ತಾಲ್ಲೂಕಿನ ಚನ್ನಮ್ಮನಾಗತಿಹಳ್ಳಿಯ ಗೊಲ್ಲರಹಟ್ಟಿಯಲ್ಲಿ ನೆಲಸಿದೆ. ಜಾತ್ರೆಯ ಸಂದರ್ಭದಲ್ಲಿ ಮಾತ್ರ ದೇವರು ವಸತಿ ದಿಬ್ಬಕ್ಕೆ ಬರುತ್ತದೆ. ಈ ಜಾತ್ರೆಯ ಅಂಗವಾಗಿ ನೆಂಟರಿಷ್ಟರು ಸೇರುತ್ತಾರೆ. ಪ್ರತಿ ಮನೆ ನೆಂಟರಿಂದ ಗಿಜಗುಟ್ಟುತ್ತದೆ. ಸೇರಿದ ಜನಗಳ ರಂಜನೆಗಾಗಿ ನಾಟಕ ಆಡುತ್ತಿದ್ದರು. ಎಲ್ಲ ಗೊಲ್ಲರ ಹುಡುಗರೇ ಪಾತ್ರಧಾರಿಗಳು. ಅವರು ಬೇರೆ ಜಾತಿಯ ಜನಗಳನ್ನು ಸೇರಿಸುತ್ತಿರಲಿಲ್ಲ. 'ಮಹಾರಥಿ ಕರ್ಣ' ನಾಟಕಕ್ಕೆ ಗುರುಸಿದ್ದಪ್ಪನವರ ಸಂಗೀತ ಮತ್ತು ದಿಗ್ದರ್ಶನ ಇತ್ತು. ಇದು ಟಿಕೆಟ್ ನಾಟಕ ಆದ್ದರಿಂದ ಪ್ರೇಕ್ಷಕರು ಕುಳಿತುಕೊಳ್ಳುವ ಭಾಗದ ಸುತ್ತ ಪರದೆ ಕಟ್ಟಿದ್ದರು. ನಾಟಕ ಪ್ರಾರಂಭವಾಗಿ ಅರ್ಧ ಗಂಟೆಯ ನಂತರ ಗದ್ದಲ ಪ್ರಾರಂಭವಾಯಿತು. ಚೆನ್ನಮ್ಮನಾಗತಿಹಳ್ಳಿಯವರಿಗೂ ಗೊಲ್ಲರಹಟ್ಟಿಯವರಿಗೂ ಸಂಬಂಧಗಳು ಸರಿಯಾಗಿ ಇರಲಿಲ್ಲ. ಇದನ್ನೇ ನೆಪ ಮಾಡಿಕೊಂಡು ಊರಿನವರು ಗೌಡನ ನೇತೃತ್ವದಲ್ಲಿ ಗಲಾಟೆ ಮಾಡಿದರು. 'ನಿಮಗೆ ನಾಟಕ ಆಡೋಕೆ ಹೇಳಿದೋರು ಯಾರು? ಊರಿನವರ ಒಪ್ಪಿಗೆ ಪಡೆದಿದ್ದೀರಾ?' ಎಂದು ತರಾಟೆಗೆ ತೆಗೆದುಕೊಂಡರು. ನಾಟಕದವರು ಲೈಸೆನ್ಸ್ ಬೇರೆ ತೆಗೆದುಕೊಂಡಿರಲಿಲ್ಲ. ಒಂದು ಗಂಟೆ ವಾಗ್ವಾದ ನಡೆದ ನಂತರ ರಾಜಿಯಾಗಿ ನಾಟಕ ಪ್ರಾರಂಭವಾಯಿತು. ಅಷ್ಟರಲ್ಲಿ ಟಿಕೆಟ್ ಇಲ್ಲದ ಜನ ಸುತ್ತ ಕಟ್ಟಿದ್ದ ಪರದೆ ಹರಿದುಕೊಂಡು ಒಳನುಗ್ಗಿದರು. ಕಲೆಕ್ಷನ್ ಆಗಲಿಲ್ಲ. ನಾಟಕದ ಖರ್ಚೆಲ್ಲಾ ತಲೆಯ ಮೇಲೆ ಬಂತು. ನಂತರ ಊರಿಗೂ ಹಟ್ಟಿಗೂ ಬಹಳ ದಿನಗಳ ತನಕ ವೈಷಮ್ಯದ ವಾತಾವರಣ ಇತ್ತು.

* * *

ಅರಳಿಗೊಂಡನಹಳ್ಳಿಯಲ್ಲಿ ಒಮ್ಮೆ 'ಮಂಡೋದರಿ' ನಾಟಕದಲ್ಲಿ ಗುರುಸಿದ್ದಪ್ಪನವರು ರಾವಣನ ಪಾತ್ರ ಮಾಡಿದ್ದರು. ಗದೆ ಎತ್ತಿ ಹೆಗಲಿಗೆ ಇಟ್ಟುಕೊಳ್ಳುವ ಸಂದರ್ಭದಲ್ಲಿ ಆಕಸ್ಮಿಕವಾಗಿ ಗದೆ ಕೈಜಾರಿ ಹೋಗಿ ಪ್ರೇಕ್ಷಕರ ಮೇಲೆ ಬಿತ್ತು. ಅದು ಹೆಚ್ಚು ಭಾರವಿರುವ ಹಿತ್ತಾಳೆ ಗದೆ ಬೇರೆ. ಆದರೆ ಅದೃಷ್ಟವಶಾತ್ ಯಾರಿಗೂ ಏನೂ ಆಗಲಿಲ್ಲ.

* * *

ಹಿರಿಯೂರು ತಾಲ್ಲೂಕಿನ ಕಂದಿಕೆರೆಯಲ್ಲಿ 'ದ್ರೌಪದಿ ವಸ್ತ್ರಾಪಹರಣ' ನಾಟಕ ಏರ್ಪಾಟಾಗಿತ್ತು. ಪಕ್ಕದ ಹಳ್ಳಿ ರಂಗೇನಹಳ್ಳಿಯ ನಟ ನಾಟಕ ಪ್ರಾಕ್ಟೀಸ್ ಮಾಡಲು ಕೂಡ್ಲಿಗಿಯಿಂದ ಕರೆಸಿದ್ದ ಚಿಕ್ಕ ಚೌಡಮ್ಮ – ದೊಡ್ಡ ಚೌಡಮ್ಮ ಅವರೊಂದಿಗೆ ರಂಗದ ಮೇಲೆ ನಡೆಯುವಾಗ 'ದ್ರೌಪದಿ ಬಾ ಇಲ್ಲಿ' ಎಂದು ಬಲವಾಗಿ ಕೈಹಿಡಿದು ಎಳೆದದ್ದಕ್ಕೆ ಬಂದು ಮೈ ಮೇಲೆ ಬಿದ್ದಳು. ದೊಡ್ಡ ಗಲಾಟೆಯಾಯಿತು. ಈ ನಾಟಕಕ್ಕೆ ಪಿಟೀಲು ನುಡಿಸಲು ಗುರುಸಿದ್ದಪ್ಪ ಬಂದಿದ್ದರು. ೨–೩ ದಿನ ಮುಂಚೆಯೇ ಹೊರಗಿನ ನಟ–ನಟಿ, ಪಕ್ಕವಾದ್ಯದವರು ಬರುತ್ತಿದ್ದರು. ಯಾರೋ ಒಬ್ಬರ ಮನೆಯಲ್ಲಿ ಊಟದ ಏರ್ಪಾಟಾಯಿತು. ಮನೆಯಾಕೆಗೆ ಕೆಲಸದಾಳಿನ ಹಿಂಸೆ, ಕಿರುಕುಳ ತಡೆಯಲಾರದೆ ಆಕೆ ಹೋಗಿ ಬಾವಿಗೆ ಬಿದ್ದು ಸತ್ತಳು. ವಿಚಾರಣೆಗಾಗಿ ಪೋಲೀಸಿನವರು ನಾಟಕದವರ ಬಳಿ ಬಂದಾಗ ನಟ–ನಟಿಯರೊಂದಿಗೆ ಪಕ್ಕವಾದ್ಯದವರು ದಿಕ್ಕಾಪಾಲಾಗಿ ಹೋಗಿ ತಲೆ ಮರೆಸಿಕೊಂಡರು. ನಾಟಕ ನಿಂತುಹೋಯಿತು.

## ಹೊಸ ತಿರುವಿನಲ್ಲಿ ಜೀವನ

ಚಳ್ಳಕೆರೆಯಲ್ಲಿ ನೆಲೆನಿಂತು ಕಥಾಕೀರ್ತನ, ನಾಟಕ, ಅಭಿನಯ, ಸಂಗೀತ ನಿರ್ದೇಶನ, ಪಕ್ಕವಾದ್ಯಕಾರ – ಹೀಗೆ ದೊರೆತ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳುತ್ತಾ ಜೀವನಯಾತ್ರೆ ಸಾಗಿತ್ತು. ಹೀಗಿರುವಾಗ ೧೯೬೮ರಲ್ಲಿ ಪ್ರೈಮರಿ ಶಾಲೆಗಳಲ್ಲಿನ ಸಂಗೀತ ಶಿಕ್ಷಕ ಹುದ್ದೆಗೆ ಸರ್ಕಾರದವರು ಅರ್ಜಿಗಳನ್ನು ಕರೆದಿದ್ದರು. ಆಗಲೇ ಗುರುಸಿದ್ದಪ್ಪನವರಿಗೆ ೩೮ ವರ್ಷಗಳಾಗಿತ್ತು. ಸರ್ಕಾರಿ ಕೆಲಸಕ್ಕೆ ವಯೋನಿವೃತ್ತಿ ಮೀರಿ ಹೋಗಿತ್ತು. ಹೀಗಿರುವಾಗ ಸರ್ಕಾರ ಸಂಗೀತ ಶಿಕ್ಷಕರ ಅಲಭ್ಯತೆ ಕಾರಣವಾಗಿ ಸಂಗೀತ ಶಿಕ್ಷಕ ಹುದ್ದೆಯ ವಯೋಮಿತಿಯನ್ನು ಸಡಿಲಿಸಿ ೪೦ ವರ್ಷಕ್ಕೆ ನಿಗದಿಪಡಿಸಿದರು. ನಿರಾಶೆಯ ಅಂಚಿನಲ್ಲಿ ಮಿಂಚು ಹೊಳೆದಂತಾಯಿತು. ಗುರುಸಿದ್ದಪ್ಪನವರು ಹೇಗೂ ಸಂಗೀತದಲ್ಲಿ ಜೂನಿಯರ್, ಸೀನಿಯರ್ ಮುಗಿಸಿದ್ದರು. ಅದು ಈಗ ಸಹಾಯಕ್ಕೆ ಬಂತು. ಇರಲಿ ಎಂದು ಅರ್ಜಿ ಗುಜರಾಯಿಸಿದರು, ಸಂದರ್ಶನಕ್ಕೆ ಕರೆಯೂ ಬಂತು. ಆದರೆ ಹೆಚ್ಚು ಕಡಿಮೆ ಒಂದು ವರ್ಷದ ನಂತರ ೧೯೬೯ರಲ್ಲಿ ಗುರುಸಿದ್ದಪ್ಪನವರನ್ನು ಸಂಗೀತ ಶಿಕ್ಷಕರಾಗಿ ನೇಮಿಸಿದ ಆದೇಶ ಬಂತು. ಮೊಳಕಾಲ್ಮೂರುವಿನ ಬಾಲಕಿಯರ ಮಾಧ್ಯಮಿಕ ಶಾಲೆಗೆ ಹಾಕಿದ್ದರು. ಹೋಗಿ ಕರ್ತವ್ಯಕ್ಕೆ ಹಾಜರಾದರು. ಕನಸಿನಲ್ಲೂ ನೆನೆಸದ ಹುದ್ದೆ ದೊರೆಯಿತು. ಆಗ ಪ್ರಾರಂಭದಲ್ಲೇ ೧೩೦ ರೂಪಾಯಿ ಸಂಬಳ. ಆ ಕಾಲಕ್ಕೆ ಅದು ದೊಡ್ಡ ಮೊತ್ತ. ಅಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಕ್ಕಳಿಂದ ನೂರಾರು ಸಾಂಸ್ಕೃತಿಕ

ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಮಕ್ಕಳಲ್ಲಿ ದೇಶಪ್ರೇಮವನ್ನು ಬೆಳೆಸಬೇಕೆಂಬ ಉದ್ದೇಶದಿಂದ 'ರಾಷ್ಟ್ರಪ್ರೇಮ' ಮತ್ತು 'ಝಾನ್ಸಿರಾಣಿ' ಎಂಬ ಎರಡು ಕಿರುನಾಟಕಗಳನ್ನು ಬರೆದು, ಅವರಿಂದಲೇ ಅಭಿನಯಿಸುವಂತೆ ಮಾಡಿ ಸಹೋಪಾಧ್ಯಾಯರಿಂದ, ಸಾರ್ವಜನಿಕರಿಂದ ಒಳ್ಳೆಯ ಮೆಚ್ಚುಗೆ ಪಡೆದುಕೊಂಡರು. ಶಾಲೆಯನ್ನೇ ಒಂದು ಕಲಾ ಕೇಂದ್ರ ಮಾಡಿದ್ದರು. ಆದರೆ ಒಮ್ಮೆ ಒಂದು ವಿಚಿತ್ರ ಘಟನೆ ನಡೆಯಿತು. ಶಾಲೆಗೆ ಬಂದ ಹುಡುಗಿ ಮನೆಗೆ ಬಂದಿಲ್ಲ ಎಂಬ ದೂರು ಪೋಲಿಸರಿಗೆ ಹೋಗಿ, ಅದು ಕೋರ್ಟ್ ಮೆಟ್ಟಿಲು ಹತ್ತಿ, ಕೋರ್ಟಿಗೇ ಅಟೆಂಡೆನ್ಸ್ ತರಿಸಿದರು, ಹುಡುಗಿಗೆ ಹಾಜರಿ ಬಿದ್ದಿಲ್ಲ ಎಂದ ಮೇಲೆ ಆಕೆ ಶಾಲೆಗೆ ಬಂದಿಲ್ಲ ಎಂದು ಕೋರ್ಟ್ ಭಾವಿಸಿತು. ಆದರೆ ಹುಡುಗಿ ಯಾರೋ ಪ್ರೇಮಿಯ ಹಿಂದೆ ಪರಾರಿಯಾಗಿದ್ದಳು!

## ಗುರು ಸಂಗೀತ ಕಲಾಶಾಲೆ ಪ್ರಾರಂಭ

ಚಳ್ಳಕೆರೆಯಲ್ಲೇ ವಾಸ ಮಾಡಿಕೊಂಡು ಮೊಳಕಾಲ್ಮೂರು ಶಾಲೆಗೆ ಓಡಿಯಾಡುತ್ತಿದ್ದರು. ನಿತ್ಯ ಶಾಲೆಗೆ ಹೋಗಬೇಕಾಗಿದ್ದರಿಂದ ಹೊರಗಿನ ಕಾರ್ಯಕ್ರಮಗಳಿಗೆ ೨–೩ ದಿನ ಹೋಗಿ ಅಲ್ಲೇ ಇರುವ ಸಂಪ್ರದಾಯವನ್ನು ಕೈಬಿಟ್ಟರು. ಏನಿದ್ದರೂ ಶಾಲೆ ಮುಗಿದ ನಂತರ ಸಂಜೆ ಹೋಗಿ ಬೆಳಗಾಗುತ್ತಲೇ ಬಂದು ಬಿಡುತ್ತಿದ್ದರು. ಹೀಗಾಗಿ ಸಂಜೆ ರಾತ್ರಿಗಳಲ್ಲಿ ಚಳ್ಳಕೆರೆಯಲ್ಲೇ ನೆಲೆನಿಲ್ಲತೊಡಗಿದ್ದರಿಂದ ಚಳ್ಳಕೆರೆ ನಗರದ ಮತ್ತು ಸುತ್ತಿನ ಹಳ್ಳಿಗಳ ಸಂಗೀತ ಕಲಿಯಬೇಕೆಂಬ ಅಭಿಲಾಷೆ, ಆಸಕ್ತರ ಒತ್ತಡ ಹೆಚ್ಚಾಗಿದ್ದರಿಂದ ೧೯೭೦ರಲ್ಲಿ ಹಾರ್ಮೋನಿಯಂ, ತಬಲಾ, ಮೃದಂಗ, ಪಿಟೀಲು ಮುಂತಾದ ವಾದ್ಯಗಳೊಂದಿಗೆ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತಗಳನ್ನು ಕಲಿಸುವ ಶಾಲೆಯನ್ನು ಪ್ರಾರಂಭ ಮಾಡಿದರು. ಗುರುಸಿದ್ದಪ್ಪನವರ ಬಿಡುವಿನ ವೇಳೆಗೆ ಅನುಗುಣವಾಗಿ ತಂಡ ತಂಡವಾಗಿ ವಿದ್ಯಾರ್ಥಿಗಳು ಬಂದು ಸೇರಿದರು. ಗುರುಸಿದ್ದಪ್ಪ ಎಂಬ ತಮ್ಮ ಹೆಸರನ್ನೇ 'ಗುರು' ಎಂದು ಸಂಕ್ಷಿಪ್ತಗೊಳಿಸಿಕೊಂಡು 'ಗುರು ಸಂಗೀತ ಕಲಾಶಾಲೆ' ಎಂದು ನಾಮಕರಣ ಮಾಡಿದರು. ನೂರಾರು ಜನ ಆಸಕ್ತರು ಬಂದು ಸೇರಿ ಕಲಿಯತೊಡಗಿದರು. ಇವರ ಶಿಷ್ಯ ಸಮೂಹದಲ್ಲಿ ಮುಂದೆ ಬೆಳೆದು ಜೀವನದಲ್ಲಿ ದೊಡ್ಡ ಸ್ಥಾನಮಾನ ಸಂಪಾದಿಸಿದವರು ಅನೇಕರಿದ್ದಾರೆ. ನಂತರ ಅವರು ಉಪಾಧ್ಯಾಯರು, ಇಂಜಿನಿಯರ್‌ಗಳು, ಡಾಕ್ಟರುಗಳು, ವಿಧಾನಸಭಾ ಸಭಾ ಸದಸ್ಯರು, ಕ್ಯಾಬಿನೆಟ್ ಮಂತ್ರಿಗಳೂ ಆಗಿದ್ದುಂಟು!

## ವರ್ಗಾವಣೆ ತಂದೆ ಬದಲಾವಣೆ

ಹೀಗೆ ಮೊಳಕಾಲ್ಮೂರುಗೆ ಓಡಿಯಾಡುತ್ತಲೇ ತಮ್ಮ ಸಂಗೀತ ಶಾಲೆ, ಸರ್ಕಾರಿ ಶಾಲೆಯ ಕೆಲಸಗಳನ್ನು, ಖಾಸಗಿ ಕಾರ್ಯಕ್ರಮಗಳನ್ನು ಎರಡು ಮೂರು ವರ್ಷ ತುಂಬಾ ಶ್ರಮದಿಂದಲೇ ನಡೆಸಿಕೊಂಡು ಬರುತ್ತಿರುವಾಗ ವರವೆಂಬಂತೆ ತಾವು ನೆಲೆಸಿದ್ದ ಚಳ್ಳಕೆರೆಗೇ ವರ್ಗಾವಣೆಯಾಯಿತು, ಓಡಾಡುವ ಕಷ್ಟ ತಪ್ಪಿತು. ಚಳ್ಳಕೆರೆಯ ಹಳೇ ಪಟ್ಟಣದ ಶಾಲೆಗೆ ಬಂದು ಸೇರಿದ ನಂತರ ಅಲ್ಲಿ ಸಂಗೀತ ಕಲಿಯುವ ವಾತಾವರಣವಿಲ್ಲದುದನ್ನು ಗಮನಿಸಿದ ಸರ್ಕಾರ ಅವರನ್ನು ಮತ್ತೆ ಚಳ್ಳಕೆರೆಯ ಬಾಲಕಿಯರ ಮಾಧ್ಯಮಿಕ ಶಾಲೆಗೆ ವರ್ಗಾವಣೆ ಮಾಡಿತು. ಸಹಜವಾಗಿ ಸಂಗೀತಾಸಕ್ತರಾದ ಬಾಲಕಿಯರು ಇರುವ ವಾತಾವರಣ ಗುರುಸಿದ್ದಪ್ಪನವರ ಸಾಂಸ್ಕೃತಿಕ ಮುಖ ಅನಾವರಣಗೊಳ್ಳಲು ಭೂಮಿಕೆಯಾಯಿತು. ನಿತ್ಯದ ಪಾಠ-ಪ್ರವಚನಗಳೊಂದಿಗೆ ವಿದ್ಯಾರ್ಥಿಗಳಿಗೆ ನಾಟಕ, ನೃತ್ಯ, ಸಂಗೀತ ಕಲಿಸುವ ಮೂಲಕ ಸಾಂಸ್ಕೃತಿಕ ವಾತಾವರಣ ಉಂಟು ಮಾಡಿ ವಿದ್ಯಾರ್ಥಿಗಳ, ಸಹೋಪಾಧ್ಯಾಯರ, ಮುಖ್ಯೋಪಾಧ್ಯಾಯರ ಮನಸ್ಸನ್ನು ಗೆದ್ದರು. ಮಕ್ಕಳಿಗೆ ಈ ಹಿಂದೆ ಮೊಳಕಾಲ್ಮೂರು ಶಾಲೆಯಲ್ಲಿ ತಾವೇ ಪ್ರಯೋಗಿಸಿದ್ದ ಭಕ್ತ ಸುಧನ್ವ, ರಾಷ್ಟ್ರಪ್ರೇಮ, ಝಾನ್ಸಿರಾಣಿ ನಾಟಕಗಳನ್ನು ಆಡಿಸುವುದರಲ್ಲಿ ಮಕ್ಕಳಲ್ಲಿಯ ಕಲಾಸಕ್ತಿ ಅರಳತೊಡಗಿತು. ಸಹ ಶಿಕ್ಷಕ ಸದ್ಯೋಜಾತ ಮೂರ್ತಿಗಳು ರಚಿಸಿದ ಗುರು ತಿಪ್ಪೇರುದ್ರಸ್ವಾಮಿ ನಾಟಕವನ್ನೂ ಅಭಿನಯಿಸಿದರು. ಈ ರೀತಿಯ ಕಲಾಮಯ ವಾತಾವರಣದಿಂದ ಪೋಷಕರ, ಸಾರ್ವಜನಿಕರ ಅಭಿಮಾನವನ್ನು ಗಳಿಸಿದ್ದಲ್ಲದೆ ಶಿಕ್ಷಣ ಇಲಾಖೆಯ ಮೇಲಧಿಕಾರಿಗಳ ಮೆಚ್ಚುಗೆಗೂ ಗುರುಸಿದ್ದಪ್ಪನವರು ಪಾತ್ರರಾದರು.

ಮಕ್ಕಳಿಂದ ಅಭ್ಯಾಸ ಮಾಡಿಸಿದ ತಿಪ್ಪೇರುದ್ರಸ್ವಾಮಿ ನಾಟಕವನ್ನು ಚಳ್ಳಕೆರೆಗೆ ಹತ್ತಿರದ ನಾಯಕನಹಟ್ಟಿಯ ಅದೇ ತಿಪ್ಪೇರುದ್ರಸ್ವಾಮಿ ಜಾತ್ರೆಯಲ್ಲಿ ಟಿಕೆಟ್ ಡ್ರಾಮಾ ಮಾಡಿ ಬಂದ ಹಣವನ್ನು ಶಾಲೆಯ ಅಭಿವೃದ್ಧಿಗೆ ಬಳಸಿಕೊಂಡು ಶಾಲಾ ಆವರಣದಲ್ಲಿ ಒಂದು ಬಯಲು ರಂಗಮಂದಿರವನ್ನು ಕಟ್ಟಿದರು. ಇದರಿಂದ ಗುರುಸಿದ್ದಪ್ಪನವರ ಜನಪ್ರಿಯತೆ ಮುಗಿಲು ಮುಟ್ಟಿತು. ಎಲ್ಲರ ಅಚ್ಚುಮೆಚ್ಚಿನ ಗುರುಸಿದ್ದಪ್ಪನವರು ಕಾರಣಾಂತರದಿಂದ ಒಂದು ದಿನ ಶಾಲೆಗೆ ಹೋಗದಿದ್ದರೆ 'ಆ ದಿನ ನಮ್ಮ ಶಾಲೆಯಲ್ಲಿ ಕಳೆಯೇ ಇರುವುದಿಲ್ಲ' ಎಂದು ಎಲ್ಲರೂ ಮಾತನಾಡಿಕೊಳ್ಳುವಂತಾಯಿತು.

ಗುರುಸಿದ್ದಪ್ಪನವರು ಸದಾ ಚಟುವಟಿಕೆಯಿಂದ ಕೂಡಿರುತ್ತಿದ್ದರು. ಶಾಲೆಯ ಕೆಲಸಗಳ ಜೊತೆಗೆ ಬೆಳಿಗ್ಗೆ, ಸಂಜೆ ತಮ್ಮ ಸಂಗೀತ ಶಾಲೆಯ ಕಲಿಕೆಯೊಂದಿಗೆ ಪ್ರತಿವರ್ಷದ ಗಣಪತಿ ಹಬ್ಬದ ಕಾರ್ಯಕ್ರಮಗಳಲ್ಲಿ ಹರಿಕತೆ ಮುಂತಾಗಿ

ಕರ್ನಾಟಕಾದ್ಯಂತ ಕನಿಷ್ಠ ೧೫–೨೦ ಕಾರ್ಯಕ್ರಮಗಳನ್ನಾದರೂ ಕೊಡುತ್ತಿದ್ದರು. ಇದರೊಂದಿಗೆ ಶ್ರೀರಾಮನವಮಿ, ಬಸವಜಯಂತಿ, ಶಿವರಾತ್ರಿ, ನವರಾತ್ರಿಗಳಲ್ಲೂ ಇವರ ಕಥಾಕೀರ್ತನ ಕಾರ್ಯಕ್ರಮಗಳು ಇರುತ್ತಿದ್ದವು.

## ಕಲಿಕೆಯ ಹಂಬಲ

ಓದಬೇಕೆಂಬ ಹಂಬಲ ಇದ್ದರೂ ಓದಲಾಗಲಿಲ್ಲ. ಕಲಿಕೆ ಎಸ್.ಎಸ್.ಎಲ್.ಸಿ.ಗೇ ನಿಂತು ಹೋಗಿತ್ತು. ಕನ್ನಡ ಸಾಹಿತ್ಯ ಪರಿಷತ್ ಕಾವ, ಜಾಣ, ರತ್ನ ಪರೀಕ್ಷೆಗಳನ್ನು ನಡೆಸುವ ಮಾಹಿತಿ ದೊರೆಯಿತು. ಹೃದಯದೊಳಗೆ ತುಂಬಿಕೊಂಡಿದ್ದ ಸಾಹಿತ್ಯ ಪ್ರೀತಿಗೆ ಈ ಮೂಲಕ ಒಂದು ಬಿಡುಗಡೆ ದೊರೆಯಿತು. 'ಕನ್ನಡ ರತ್ನ' ಪರೀಕ್ಷೆಗೆ ನಿಗದಿ ಪಡಿಸಿದ ಪಠ್ಯಗಳನ್ನು ಓದುವ ಮೂಲಕ ತಮ್ಮ ಸಾಹಿತ್ಯದ ತಿಳಿವಳಿಕೆ ಹೆಚ್ಚಿಸಿಕೊಂಡರು. ೧೯೭೪ರಲ್ಲಿ ಕನ್ನಡ ರತ್ನ ಪರೀಕ್ಷೆ ಪಾಸು ಮಾಡುವ ಮೂಲಕ ಸಾಹಿತ್ಯದಲ್ಲಿ ಒಂದು ಬಗೆಯಲ್ಲಿ ಪದವಿಗೆ ಸಮಾನವಾದ ಅರ್ಹತೆ ಪಡೆದರು. ಆದರೆ ೪೪ರ ಈ ವಯಸ್ಸಿನಲ್ಲಿ ಪಡೆದ ಈ ಅರ್ಹತೆಯಿಂದ ಅವರಿಗೆ ತೃಪ್ತಿಯಾಗಲಿಲ್ಲ. ಆದರೆ ಮತ್ತಷ್ಟು ಕಲಿಯಬೇಕು, ಪದವಿ ಗಳಿಸಬೇಕು ಎಂಬ ಬಯಕೆ ಹೃದಯದೊಳಗೇ ಉಳಿಯಿತು. ವಯಸ್ಸು ಮೀರಿದ್ದರಿಂದ ಅವಕಾಶವಿರಲಿಲ್ಲ.

## ಬಹುಮಾನ ತಂದ ನಾಟಕ

ಈ ಮಧ್ಯೆ ೧೯೭೭ರಲ್ಲಿ ರಾಜ್ಯಮಟ್ಟದ ನಾಟಕ ಸ್ಪರ್ಧೆಯನ್ನು 'ಕಲ್ಪತರು ಕಲಾಸಂಘ' ಏರ್ಪಡಿಸಿತ್ತು. ಚಳ್ಳಕೆರೆಯ ಹುಡುಗರು ನಾಟಕ ಸ್ಪರ್ಧೆಯಲ್ಲಿ ಭಾಗವಹಿಸುವ ಹಂಬಲದಿಂದ ಕಾಟಮಲಿಂಗೇಶ್ವರ ಕಲಾಸಂಘ ಗುರುಸಿದ್ದಪ್ಪನವರಲ್ಲಿ ಬಂದು ಯಾವುದಾದರೊಂದು ಒಳ್ಳೆಯ ನಾಟಕ ಕಲಿಸುವಂತೆ ಕೋರಿದರು. ಕೊನೆಗೆ ಗುರುಸಿದ್ದಪ್ಪನವರಿಂದ ರಚಿತವಾಗಿ ನೂರಾರು ಯಶಸ್ವಿ ಪ್ರಯೋಗಗಳನ್ನು ಕಂಡ 'ಭಕ್ತ ಸುಧನ್ವ' ನಾಟಕವನ್ನು ಗುರುಸಿದ್ದಪ್ಪನವರ ನಿರ್ದೇಶನದಲ್ಲೇ ಅಭ್ಯಾಸ ಮಾಡಿ ಸ್ಪರ್ಧಿಸಿದರು. ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಇವರ ನಾಟಕಕ್ಕೆ ಎರಡನೇ ಬಹುಮಾನ ಬಂತು. ಚಲನಚಿತ್ರ ನಟ ರಾಜೇಶ್ ಕೈಯಿಂದ ಪ್ರಶಸ್ತಿ ಸ್ವೀಕರಿಸಿದ ಸಂತೋಷ ಚಳ್ಳಕೆರೆಯ ಹುಡುಗರದಾಯಿತು. ಇದಕ್ಕಾಗಿ ಗುರುಸಿದ್ದಪ್ಪನವರ ಮೇಲೆ ಶಿಷ್ಯರು, ಸಾರ್ವಜನಿಕರು ಪ್ರೀತಿ ಸನ್ಮಾನಗಳ ಮಳೆಯನ್ನೇ ಕರೆದರು.

## ಶಿಷ್ಯ ಬಳಗ

ಈಗಾಗಲೇ ಇದ್ದ ಅವರ ಶಿಷ್ಯರ ಜೊತೆಗೆ ಹೊಸ ಹೊಸ ಹುಡುಗರು ಅವರ ಶಿಷ್ಯತ್ವ ಸ್ವೀಕರಿಸಿ ಸಂಗೀತಾಭ್ಯಾಸ ಮಾಡಿ ಸ್ವತಂತ್ರವಾಗಿ ನಾಟಕದ ಮೇಸ್ತ್ರಗಳಾಗಿ ನೂರಾರು ಜನ ಕಲಾಪ್ರಿಯರ ಪ್ರೀತಿ-ಅಭಿಮಾನವನ್ನು ಸಂಪಾದಿಸಿದರು.

**ಪಿ.ತಿಪ್ಪೇಸ್ವಾಮಿ:** ಚಳ್ಳಕೆರೆಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಅವರಿಗೆ ಸಂಗೀತ ನಾಟಕಗಳ ಹುಚ್ಚು. ಅದನ್ನು ತಣಿಸಿಕೊಳ್ಳಲು ಚಳ್ಳಕೆರೆಯಂಥ ಸ್ಥಳದಲ್ಲಿ ಇದ್ದ ಅವಕಾಶವೆಂದರೆ ಗುರುಸಿದ್ದಪ್ಪನವರ 'ಗುರುಸಂಗೀತ ಶಾಲೆ'ಯೊಂದೇ. ಅವರಲ್ಲಿ ಹಾರ್ಮೋನಿಯಂ ಕಲಿತ ನಂತರ ಸ್ವಪರಿಶ್ರಮದಿಂದ ಕೀಬೋರ್ಡ್ ಕೂಡಾ ಕಲಿತುಕೊಂಡರು. ನಂತರ ಸುತ್ತಿನ ಹಳ್ಳಿಗಳಲ್ಲಿ ನೂರಾರು ನಾಟಕಗಳನ್ನು ಕಲಿಸಿ ಸಂಗೀತ ನಿರ್ದೇಶನ ನೀಡಿದರು. ಈ ಭಾಗದ ಅತ್ಯಂತ ಹಿಂದುಳಿದ ಮ್ಯಾಸಬೇಡ ಬುಡಕಟ್ಟಿಗೆ ಸೇರಿದ ಇವರು ಅನೇಕ ಯುವಕರಿಗೆ ಪ್ರೋತ್ಸಾಹ ನೀಡಿ ಈ ಕಲಾಪ್ರಕಾರಕ್ಕೆ ಅಪೂರ್ವ ಗೌರವ ತಂದರು. ಹಾಗೂ ಗ್ರಾಮೀಣ ರಂಗಭೂಮಿಗೆ ಸೇರಿದ ನಟ, ಸಂಗೀತಗಾರ, ಬಯಲಾಟದ ಭಾಗವತ ಮುಂತಾದ ರಂಗಭೂಮಿಗೆ ದುಡಿದವರನ್ನು ಸೇರಿಸಿ 'ಗ್ರಾಮೀಣ ರಂಗಭೂಮಿ ಕಲಾವಿದರ ಕ್ಷೇಮಾಭಿವೃದ್ಧಿ ಸಂಘ'ವನ್ನು ಕಟ್ಟಿ ಕಲಾವಿದರಿಗೆ ದೊರೆಯಬೇಕಾದ ಮಾಸಾಶನ, ಪ್ರಶಸ್ತಿ, ಗೌರವಗಳನ್ನು ಕೊಡಿಸುವಲ್ಲಿ ಇವರ ಪಾತ್ರ ಪ್ರಮುಖವಾದುದು. ಇವರ ಸೇವೆಯನ್ನು ಗುರುತಿಸಿ ಸಿ.ಜಿ.ಕೆ. ಕಾಲದಲ್ಲಿ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು. ಈಗ ಅವರು ನಾಟಕ ಅಕಾಡೆಮಿಯ ಸದಸ್ಯರಾಗಿ ಚಿತ್ರದುರ್ಗ ಸೀಮೆಯನ್ನು ಪ್ರತಿನಿಧಿಸುತ್ತಿದ್ದಾರೆ.

**ಬುಡ್ನಟ್ಟಿ ಅಜ್ಜಪ್ಪ:** ಊರಿನಲ್ಲಿ ದಾನಶೂರ ಕರ್ಣ ನಾಟಕ, ಗುರುಸಿದ್ದಪ್ಪನವರೇ ನಾಟಕ ಕಲಿಸುವ ಮಾಸ್ಟರ್. ಸ್ತ್ರೀಪಾತ್ರಕ್ಕೆ ಹೆಂಗಸರನ್ನು ಕರೆಸಲು ದುಡ್ಡಿಲ್ಲದ್ದರಿಂದ ದಾಸರ ಸಮುದಾಯಕ್ಕೆ ಸೇರಿದ ಅಜ್ಜಪ್ಪನಿಗೆ ಹೆಣ್ಣು ಪಾತ್ರ ನೀಡಿದರು. ಹೆಚ್ಚಿನ ಮಾತು ಇರಲಿಲ್ಲ, ಕೇವಲ ೧೫ ಮಾತು ಅಷ್ಟೆ. ಅಜ್ಜಪ್ಪನಿಗೆ ಸೊಗಸಾದ ಹಾಡು ಹಾಕಿದರು. ಗುರುಗಳು ವಹಿಸಿದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಅಜ್ಜಪ್ಪ ಗುರುಗಳ ಪ್ರೀತಿಗೆ ಪಾತ್ರನಾದ. ಅವನ ಕಲೆಯ ಗೀಳನ್ನು ಗಮನಿಸಿ ಶಿಷ್ಯನನ್ನಾಗಿ ಸ್ವೀಕರಿಸಿದರು. ಅಜ್ಜಪ್ಪ ನಂತರ ನಾಟಕ ಕ್ಷೇತ್ರದಲ್ಲಿ ಒಳ್ಳೆಯ ಹೆಸರು ಮಾಡಿದರು. ಸಂಗೀತ ವಾದ್ಯಗಳಾದ ತಬಲ, ಹಾರ್ಮೋನಿಯಂಗಳ ರಿಪೇರಿಯಲ್ಲಿ ತೊಡಗಿಸಿಕೊಂಡು ಸಂಗೀತ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದರು.

**ಚಂದ್ರಣ್ಣ ದುರ್ಗಾವರ:** ಯಾವ ಕಾರಣಕ್ಕೂ ತನ್ನ ಮಗ ಸಂಗೀತ ಕಲಿಯಕೂಡದು ಎಂಬುದು ಇವರ ತಂದೆ ತಿಪ್ಪಯ್ಯನವರ ಆಗ್ರಹ. ಸಂಗೀತ ಕಲಿತವರು ಕೆಟ್ಟು ಹೋಗುತ್ತಾರೆ ಎಂಬ ತಿಳಿವಳಿಕೆ ಅವರ ತಂದೆಯವರದು. 'ಬ್ಯಾಡರಿಗೇಕೆ ಸಂಗೀತ' ಎಂಬುದು ಅವರ ನಿಲುವು. ಚಂದ್ರಣ್ಣನಿಗೆ ಸಂಗೀತದ ಬಗ್ಗೆ ಇರುವ ಪ್ರೀತಿಯನ್ನು ಗಮನಿಸಿದ ಗುರುಸಿದ್ದಪ್ಪನವರು ಅವರ ತಂದೆಗೆ ಒಪ್ಪಿಸಿ ಹಾರ್ಮೋನಿಯಂ ಕಲಿಸಿದರು. ಈಗ ಚಂದ್ರಣ್ಣ ಒಳ್ಳೆಯ ಸಂಗೀತ ಮಾಸ್ಟರ್ ಎಂದು ಹೆಸರು ಮಾಡಿದ್ದಾರೆ.

**ಗುರುನಾಥ್:** ನಾಟಕ ಅಕಾಡೆಮಿಯ ಪದ್ದಣ್ಣ ಪ್ರಶಸ್ತಿ ವಿಜೇತರಾಗಿದ್ದ ಮ್ಯಾಸಬೇಡ ಬುಡಕಟ್ಟಿನ ಗುರುನಾಥ್ ಅವರು ಗ್ರಾಮೀಣ ರಂಗಭೂಮಿಯಲ್ಲಿ ಒಳ್ಳೆಯ ಹೆಸರು ಮಾಡಿದರು. ಅವರಿಗೆ ಸಂಗೀತ ಕಲಿಸಿದ ಗುರು ಗುರುಸಿದ್ದಪ್ಪನವರೇ. ಆದರೆ ಈ ಶಿಷ್ಯ ಮದ್ಯಪಾನದ ದಾಸನಾಗಿ ತಮ್ಮ ಕೊನೆಯ ದಿನಗಳನ್ನು ತುಂಬಾ ಚಿಂತಾಜನಕವಾಗಿ ಕಳೆದರು. ಇವರು ಕುಡಿತಕ್ಕೆ ಬಲಿಯಾಗಿದ್ದರಿಂದ ಗುರುಸಿದ್ದಪ್ಪನವರು ಈ ಶಿಷ್ಯನನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಈ ವಿಚಾರದಲ್ಲಿ ಗುರುಸಿದ್ದಪ್ಪನವರದು ತುಂಬಾ ಕಟ್ಟುನಿಟ್ಟಿನ ವ್ಯಕ್ತಿತ್ವ. ಹೀಗಾಗಿ ಗುರುನಾಥ ಅವರು ಚಳ್ಳಕೆರೆಯ ಆಸ್ಪತ್ರೆಯ ವೆರಾಂಡದಲ್ಲಿ ಅನಾಥ ಹೆಣವಾಗಿ ತಮ್ಮ ಅಂತ್ಯ ಕಂಡರು.

**ಪಿ. ಲಿಂಗರಾಜ:** ಗುರುಸಿದ್ದಪ್ಪನವರ ಶಿಷ್ಯ ವಾತ್ಸಲ್ಯಕ್ಕೆ ಪ್ರತೀಕ ಈ ಲಿಂಗರಾಜ. ಆಂಧ್ರದ ರಾಯದುರ್ಗದ ಕಡೆಯಿಂದ ಹತ್ತು ವರ್ಷದ ಬಾಲಕನಾಗಿದ್ದಾಗ ಇವರ ಆಶ್ರಯಕ್ಕೆ ಬಂದ. ಹುಟ್ಟಿನಿಂದಲೇ ಎರಡೂ ಕಣ್ಣುಗಳಿರಲಿಲ್ಲ. ಸಂಗೀತ ಕಲಿಯಬೇಕೆಂಬ ಹಂಬಲವೇ ರೂಪ ತಳೆದ ರೀತಿಯಲ್ಲಿದ್ದ ಲಿಂಗರಾಜನ ಬಯಕೆಗೆ ಗುರುಸಿದ್ದಪ್ಪನವರು ಸಂಗೀತದ ಕಣ್ಣು ನೀಡಿದರು. ಯಾರೂ ದಿಕ್ಕಿಲ್ಲದ ಲಿಂಗರಾಜನನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಸಂಗೀತದ ಧಾರೆ ಎರೆದರು. ಅಲ್ಲದೆ ಜಾತಿಯಿಂದ ತಮಗೆ ಯಾವ ರೀತಿಯಲ್ಲೂ ಸಂಬಂಧವಿಲ್ಲದ ಕುರುಬ ಸಮುದಾಯದ ಲಿಂಗರಾಜು ಮೇಲೆ ವಾತ್ಸಲ್ಯದ ಮಳೆಯನ್ನೇ ಕರೆದರು. ಅವನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡಿ ವಯಸ್ಸಿಗೆ ಬರುತ್ತಲೇ ಒಂದು ಹೆಣ್ಣು ಹುಡುಕಿ ಮದುವೆಯನ್ನೂ ಮಾಡಿದರು. ಮನೆಯಿಲ್ಲದ ಆತನಿಗೆ ಚಳ್ಳಕೆರೆಗೆ ಸಮೀಪದ ಗೊರಲಕಟ್ಟೆಯಲ್ಲಿ ಒಂದು ಮನೆಯನ್ನು ಕಟ್ಟಿಸಿಕೊಟ್ಟರು. ಲಿಂಗರಾಜ ಕಣ್ಣಿಲ್ಲದಿದ್ದರೂ ಪಾತ್ರಧಾರಿಗಳ ಸಂಭಾಷಣೆ ಕೇಳುತ್ತಲೇ ಅವರನ್ನು ತಿದ್ದುತ್ತಿದ್ದರು. ಇನ್ನು ಸಂಗೀತ, ತಬಲ ವಾದನದಲ್ಲಿ ಪ್ರಾವೀಣ್ಯತೆಯನ್ನು ಪಡೆದು ಸುತ್ತಿನ ಹಳ್ಳಿಗಳಲ್ಲಿ ನೂರಾರು ನಾಟಕಗಳನ್ನು ಆಡಿಸಿದರು. ಅವರ ಕೌಟುಂಬಿಕ ಜೀವನಕ್ಕೆ ಕಲೆಯೇ ಆಧಾರವಾಯಿತು.

(ಇವರಿಬ್ಬರ ಗುರು-ಶಿಷ್ಯ ಅನುಬಂಧವನ್ನು ಕುರಿತು ಮೀರಾಸಾಬಿಹಳ್ಳಿ ಶಿವಣ್ಣನವರು ೨೫ ವರ್ಷಗಳ ಕೆಳಗೇ ಕನ್ನಡಪ್ರಭದಲ್ಲಿ 'ಸಂಗೀತವೇ ಕಣ್ಣಾದ ಕಲಾವಿದ' ಎಂಬ ಲೇಖನ ಪ್ರಕಟಿಸಿದರು.)

ಈ ಮೇಲಿನ ಮುಖ್ಯ ಶಿಷ್ಯರಲ್ಲದೆ ಭತ್ತಯ್ಯನಹಟ್ಟಿ ಗುಂಡಪ್ಪ (ಗುಂಡಬೋರಯ್ಯ), ಚಟ್ಟೇಕಂಬದ ದೊಡ್ಡವೀರಣ್ಣ, ನಾಯ್ಕನಹಟ್ಟಿಯ ಬಿ.ಜಿ.ತಿಪ್ಪೇಸ್ವಾಮಿ, ಸಿದ್ದಪ್ಪ, ನಿಲುವಂಜಿ, ರಂಗವ್ವನಹಳ್ಳಿ (ಕಡದರಹಳ್ಳಿ)ಯ ಕುರುಬರ ಹನುಮಂತಪ್ಪ, ಸವಿತಾ ಸಮಾಜದ ಗೋವಿಂದಪ್ಪ, ಗೋವಿಂದರಾಜು, ರೆಡ್ಡಿಹಳ್ಳಿ ಪುಟ್ಟನಂಜಪ್ಪ, ಎಸ್.ಶಿವಕುಮಾರ್ ಯಾದಲಗಟ್ಟೆ, ಟಿ. ಶ್ರೀನಿವಾಸ, ಭಾಗಣ್ಣಶಾಸ್ತ್ರಿ, ಜಿ.ರಾಘವೇಂದ್ರ ಇವರೆಲ್ಲಾ ಹಾರ್ಮೋನಿಯಂ ಮತ್ತು ತಬಲ ವಾದ್ಯಗಳಲ್ಲಿ ತರಬೇತಿ ಪಡೆದರು. ಗೊರ್ಲಕಟ್ಟೆಯ ಅಜ್ಜಪ್ಪ ಒಬ್ಬ ಅತ್ಯುತ್ತಮ ರಂಗ ಕಲಾವಿದನಾಗಿ ರೂಪುಗೊಂಡ. ಇದರಲ್ಲಿ ಕೆಲವರು ಹಾಡುಗಾರಿಕೆಯಲ್ಲಿ ಪರಿಣತಿ ಪಡೆದರು. ಇವರ ಬಹುಪಾಲು ಶಿಷ್ಯರೆಲ್ಲಾ ಅತ್ಯಂತ ಹಿಂದುಳಿದ ಜಾತಿಗಳಿಂದ ಬಂದವರೆಂಬುದು ಗಮನಾರ್ಹ.

## ಮಹಿಳಾ ಶಿಷ್ಯರು:

ಇವರಲ್ಲಿ ಸಂಗೀತ ಕಲಿತ ಶಿವಕೀರ್ತಿ, ರುದ್ರಮ್ಮ, ಕಾವೇರಿ, ಸುಮಂಗಲ, ಗಿರಿಜಮ್ಮ, ಗೀತಾ, ರಾಜೇಶ್ವರಿ, ವಾಣಿ ಮುಂತಾದ ಅಸಂಖ್ಯ ಶಿಷ್ಯರು ಮುಂದೆ ಜೀವನದಲ್ಲಿ ಅಧ್ಯಾಪಕ ವೃತ್ತಿಯಲ್ಲಿ ನಿರತರಾದದ್ದು ಒಂದು ವಿಶೇಷ.

## ಉನ್ನತ ಶಿಕ್ಷಣದ ಭಾಗ್ಯ

ಗುರುಸಿದ್ದಪ್ಪನವರಿಗೆ ಮತ್ತಷ್ಟು ಕಲಿಯಬೇಕು, ಪದವಿ ಪಡೆಯಬೇಕು ಎಂಬ ಆಸೆ ಈಡೇರುವ ಕಾಲ ಬಂತು. ಕೇವಲ ಎಸ್.ಎಸ್.ಎಲ್.ಸಿ. ಓದಿದವರಿಗೆ ಪದವಿಯನ್ನೇ ಪಡೆಯದೆ ಧಿಡೀರ್ ಸ್ನಾತಕೋತ್ತರ ಪದವಿ ಪಡೆಯುವ ಅವಕಾಶ ಒದಗಿ ಬಂತು. ಕೇವಲ ವಯಸ್ಸಿನ ಆಧಾರದಲ್ಲಿ ನೇರವಾಗಿ ಎಂ.ಎ. ಪದವಿಗೇ ಕುಳಿತು ಪರೀಕ್ಷೆ ಬರೆಯಬಹುದಾದ ಅವಕಾಶ ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ತೆರಪಿನ ಶಿಕ್ಷಣ ನೀಡಿತು. ೩೦ ವರ್ಷ ದಾಟಿದ ಯಾರಾದರೂ ನೇರವಾಗಿ ಪದವಿ ಪರೀಕ್ಷೆಗೆ ಕುಳಿತುಕೊಳ್ಳಬಹುದಿತ್ತು. ೧೯೮೦ರಲ್ಲಿ ತಮ್ಮ ಗೆಳೆಯ ಬುಡೇನ್‌ಸಾಬ್‌ರೊಂದಿಗೆ ಕನ್ನಡ ಎಂ.ಎ. ಪರೀಕ್ಷೆಗೆ ಕುಳಿತು ಅಧ್ಯಯನ ಪ್ರಾರಂಭಿಸಿದರು. ಆಗ ಚಳ್ಳಕೆರೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ

ಅಧ್ಯಾಪಕರಾಗಿದ್ದ ಮೀರಾಸಾಬಿಹಳ್ಳಿ ಶಿವಣ್ಣನವರಿಂದ ಕಾವ್ಯ ಮೀಮಾಂಸೆಯ ಪಾಠ ಹೇಳಿಸಿಕೊಂಡರು. ರನ್ನನ ಗದಾಯುದ್ಧ ಮುಂತಾದ ಕಾವ್ಯಗಳ ಪಾಠವನ್ನು ಶಿವಣ್ಣನವರಿಂದಲೇ ಕೇಳಿದರು. ಉಳಿದ ಪಠ್ಯಗಳನ್ನು ತಾವೇ ಓದಿಕೊಂಡು ಪರೀಕ್ಷೆ ಬರೆದು ೧೯೮೨ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಸ್ನಾತಕೋತ್ತರ ಪದವಿ ಪಡೆದರು.

### ಕೀರ್ತನ ಕೇಸರಿಗಳ ಸಂಬಂಧ

ಕಥಾಕೀರ್ತನವಲ್ಲಿ ಪರಿಣತಿ ಪಡೆದಂತೆ ಬೆಂಗಳೂರಿನ ಕರ್ನಾಟಕ ಕೀರ್ತನ ಕಲಾ ಪರಿಷತ್‌ನ ಆಜೀವ ಸದಸ್ಯತ್ವ ಪಡೆದು ಭದ್ರಗಿರಿ ಅಚ್ಯುತದಾಸರು, ಭದ್ರಗಿರಿ ಕೇಶವದಾಸರು, ಹಂಡೆ ವೇದವ್ಯಾಸದಾಸರು, ಗುರುರಾಜುಲು ನಾಯ್ಡು, ತುಮಕೂರಿನ ಲಕ್ಷ್ಮಣದಾಸ್, ಕೋಲಾರದ ಜ್ಞಾನಮೂರ್ತಿ, ಶಿವಮೊಗ್ಗದ ಶಂಕರ್‌ದಾಸ್ – ಕೇಶವಮೂರ್ತಿ ಮುಂತಾದವರ ಸಂಪರ್ಕ ಪಡೆದರು. ಆಗಾಗ್ಗೆ ನಡೆಯುತ್ತಿದ್ದ ಕೀರ್ತನ ಸಮ್ಮೇಳನಗಳಲ್ಲಿ ಭಾಗವಹಿಸುತ್ತಾ, ವಿದ್ವಾಂಸರ ಒಡನಾಟದಿಂದ ತಮ್ಮ ಕಥಾಕೀರ್ತನ ಕಲೆಯನ್ನು ಮತ್ತಷ್ಟು ಉತ್ತಮಪಡಿಸಿಕೊಂಡರು. ೧೯೮೮ರಲ್ಲಿ ಬೆಂಗಳೂರಿನ ದಾಸಾಶ್ರಮ ಅಂತಾರಾಷ್ಟ್ರೀಯ ಕೇಂದ್ರದಿಂದ ಉತ್ತಮ ಕೀರ್ತನಕಾರರೆಂದು ಸನ್ಮಾನಿಸಲ್ಪಟ್ಟಿದ್ದು ಆ ಕ್ಷೇತ್ರದಲ್ಲಿನ ಅವರ ಸಾಧನೆಗೆ ಸಂದ ಗೌರವವಾಗಿದೆ.

### ಆಂಧ್ರದ ಗೌರವ

೧೯೮೫ ಆಂಧ್ರಪ್ರದೇಶದ ಅನಂತಪುರ ನಗರದ ಹಳೇಪೇಟೆಯಲ್ಲಿನ ಕಾಶಿ ವಿಶ್ವೇಶ್ವರ ಕೋದಂಡರಾಮಾಲಯದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಚೇರಿಯನ್ನು ನಡೆಸಿಕೊಟ್ಟುದಲ್ಲದೆ ತೆಲುಗಿನಲ್ಲಿ ಉಪನ್ಯಾಸವನ್ನೂ ನೀಡಿದರು. ಸಂಗೀತ ಕಚೇರಿಯಲ್ಲಿ ಇವರು ಹಾಡಿದ ತ್ಯಾಗರಾಜರ ಕೀರ್ತನೆ 'ನಗುಮೋಮು' ಹಾಡಿದಾಗ ರೂ. ೫೦/–ರ ಪಾರಿತೋಷಕ ನೀಡಿ ಮತ್ತೊಮ್ಮೆ ಹಾಡುವಂತೆ (ಒನ್ಸ್‌ಮೋರ್) ಬಿನ್ನವಿಸಿಕೊಂಡುದು ಅವರ ಪ್ರತಿಭೆಗೆ ದೊರೆತ ಹೆಗ್ಗಳಿಕೆಯಾಗಿದೆ.

### ಆಕಾಶವಾಣಿಯಲ್ಲಿ ಅವಕಾಶ

೮೦ರ ದಶಕದಲ್ಲಿ ಇನ್ನೂ ಟಿ.ವಿ. ಕಾಲಿಟ್ಟಿರಲಿಲ್ಲ. ಆಗ ಮನರಂಜನೆಯೆಂದರೆ

ರೇಡಿಯೋ ಒಂದೇ. ಆಗ ಮನೆ ಮನೆಗಳಲ್ಲಿ ದೊಡ್ಡ ದೊಡ್ಡ ಗಾತ್ರದ ರೇಡಿಯೋಗಳು ಇರುತ್ತಿದ್ದವು. ನಂತರದ ದಿನಗಳಲ್ಲಿ ಕಿವಿಯ ಹತ್ತಿರ ಹಿಡಿದು ಓಡಿಯಾಡುವ ಪುಟ್ಟಗಾತ್ರದ ಟ್ರಾನ್ಸಿಸ್ಟರ್‌ಗಳು ಬಂದವು. ಜನರಿಗೆ ಚಿತ್ರಗೀತೆಯಿಂದ ಹಿಡಿದು ಸುದ್ದಿ, ಕೃಷಿ ಮಾಹಿತಿ, ಕ್ರಿಕೆಟ್ ಕಾಮೆಂಟರಿಯಲ್ಲದೆ ಚಲನಚಿತ್ರವನ್ನೂ ಧ್ವನಿವಾಹಿನಿ ರೂಪದಲ್ಲಿ ಕೇಳಬಹುದಿತ್ತು. ಆಗಿನ್ನೂ ಟೇಪ್‌ರೆಕಾರ್ಡರ್ ಕೂಡ ಇಲ್ಲದ ಕಾಲ. ಏಕಮೇವಾದ್ವಿತೀಯವಾಗಿ ಎಲ್ಲೆಲ್ಲಿಯೂ ರೇಡಿಯೋದ ಕಾರಬಾರೇ ನಡೆದಿತ್ತು. ಆಗ ಆಕಾಶವಾಣಿಯನ್ನು 'ಬಾನುಲಿ' ಎಂದೇ ಕರೆಯುತ್ತಿದ್ದರು. ನಂತರದ ದಿನಗಳಲ್ಲಿ ಬಾನುಲಿ ಶಬ್ದ ಹಿಂದಕ್ಕೆ ಸರಿದು 'ಆಕಾಶವಾಣಿ' ಮುಂದಕ್ಕೆ ಬಂತು. ಆಗ ರೇಡಿಯೋ ನಮ್ಮ ಕಿವಿಯಷ್ಟನ್ನೇ ಕೇಳುತ್ತಿತ್ತು. ಈಗ ಟಿ.ವಿ. ಕಣ್ಣು–ಕಿವಿಗಳೆರಡನ್ನೂ ಕಿತ್ತುಕೊಂಡಿದೆ.

ಚಿತ್ರದುರ್ಗದ ಭಾಗದಲ್ಲಿ ಆಗ ಬೆಂಗಳೂರಿನ ಆಕಾಶವಾಣಿ ಕಾರ್ಯಕ್ರಮ ಸ್ಪಷ್ಟವಾಗಿ ಕೇಳಿರುತ್ತಿರಲಿಲ್ಲ. ಆದರೆ ಭದ್ರಾವತಿ, ಧಾರವಾಡದ ಕೇಂದ್ರಗಳ ಕಾರ್ಯಕ್ರಮಗಳು ಕೇಳುತ್ತಿದ್ದವು.

ಆಗ ಭದ್ರಾವತಿ ಕೇಂದ್ರದಲ್ಲಿ ಹರಿಕಥಾ ಕಾಲಕ್ಷೇಪ ಕಾರ್ಯಕ್ರಮ ನಡೆಯುತ್ತಿತ್ತು. ಕಾರ್ಯಕ್ರಮದ ಅವಧಿ ಅರ್ಧ ಗಂಟೆ, ಅಷ್ಟರೊಳಗೆ ಪುರಾಣ ಪುರುಷರ ಕತೆ ಮಾಡಬೇಕಿತ್ತು. ಒಮ್ಮೆ ಇಂಥ ಕಾರ್ಯಕ್ರಮದಲ್ಲಿ ನಾಯಕನಹಟ್ಟಿಯ ತಿಪ್ಪೇರುದ್ರಸ್ವಾಮಿ ಮಹಿಮೆ ಕುರಿತು ಕಾರ್ಯಕ್ರಮ ಮಾಡಲು ಹೊರಟಾಗ ಕಾರ್ಯಕ್ರಮ ನಿರ್ವಾಹಕಿ ಅದು ಬೇಡ ಎಂದು ತಕರಾರು ಮಾಡಿದಳು. ಆಕೆ ಮಂಗಳೂರಿನವಳಾದುದರಿಂದ ಆಕೆಗೆ ತಿಪ್ಪೇರುದ್ರಸ್ವಾಮಿ ಒಬ್ಬ ಶರಣ ಎಂಬ ತಿಳಿವಳಿಕೆ ಇರಲಿಲ್ಲ.

ತಿಂಗಳಿಗೊಮ್ಮೆ ಇವರ ಕಾರ್ಯಕ್ರಮ ಇರುತ್ತಿದ್ದುದರಿಂದ ಮತ್ತೆ ಹೋದಾಗ ಆಕೆ ತಪ್ಪಾಯಿತು ಎಂದು ನಮಸ್ಕರಿಸಿ ಅದೇ ತಿಪ್ಪೇರುದ್ರಸ್ವಾಮಿ ಕತೆ ಮಾಡಲು ಅನುವು ಮಾಡಿಕೊಟ್ಟು ಸಂತೋಷದಿಂದ ಸ್ಮರಣಿಕೆಯನ್ನು ನೀಡಿ ಅತ್ಯಂತ ಗೌರವದಿಂದ ಕಂಡ ಘಟನೆ ಮರೆಯಲಾಗದುದು.

### ಸರ್ಕಾರಿ ಕಾರ್ಯಕ್ರಮಗಳ ಪ್ರಚಾರಕ

೮೦ರ ದಶಕದಲ್ಲಿ ಸರ್ಕಾರ ತಮ್ಮ ಇಲಾಖೆಗಳ ಕಾರ್ಯಚಟುವಟಿಕೆಗಳ ಪ್ರಚಾರಕ್ಕೆ ಆಗ ಅತ್ಯಂತ ಪರಿಣಾಮಕಾರಿಯಾದ 'ಹರಿಕತೆ' ಮಾಧ್ಯಮವನ್ನು ಬಳಸಿಕೊಳ್ಳುತ್ತಿತ್ತು. ಇದಲ್ಲದೆ ಆಗಾಗ್ಗೆ ಹಳ್ಳಿಗಳಿಗೆ ಬಂದು ಸಾಕ್ಷ್ಯಚಿತ್ರ ಮಾದರಿಯ ಚಲನಚಿತ್ರಗಳನ್ನೂ ಪ್ರದರ್ಶಿಸುತ್ತಿತ್ತು. ಆಗ ಸಿನಿಮಾ ಕೂಡಾ ಒಂದು ಆಕರ್ಷಕ

ಮಾಧ್ಯಮವಾಗಿತ್ತು. ಅವರೇ ಸುರುಳಿಯಂತೆ ಮಡಚುವ ಪರದೆಯನ್ನು ತಂದು ಹಳ್ಳಿಗಳ ಸಾರ್ವಜನಿಕ ಸ್ಥಳಗಳಲ್ಲಿ ಪ್ರೊಜೆಕ್ಟರ್ ಮೂಲಕ ಚಲನಚಿತ್ರ ಪ್ರದರ್ಶಿಸುತ್ತಿದ್ದರು. ಜನ ಮುಗಿಬಿದ್ದು ನೋಡುತ್ತಿದ್ದರು. ಅಂದರೆ ಇದು ರಾತ್ರಿ ಕತ್ತಲಲ್ಲಿ ಮಾತ್ರ ನಡೆಸುವ ಕಾರ್ಯಕ್ರಮವಾಗಿತ್ತು. ಆದರೆ ಹರಿಕತೆಗೆ ಕತ್ತಲೆಯಾಗಲೇಬೇಕೆಂಬ ಅನಿವಾರ್ಯತೆ ಇಲ್ಲದಿದ್ದರೂ ಸಾಮಾನ್ಯವಾಗಿ ಹಳ್ಳಿಯ ರೈತಾಪಿ ಜನ ರಾತ್ರಿಯ ಹೊತ್ತೇ ಬಿಡುವಾಗಿ ಇರುತ್ತಿದ್ದುದರಿಂದ ಕಾರ್ಯಕ್ರಮಗಳು ಬಹುಪಾಲು ರಾತ್ರಿಯೇ ನಡೆಯುತ್ತಿದ್ದವು. ಇಂಥ ಕಾರ್ಯಕ್ರಮಗಳನ್ನು ಸಂಘಟಿಸುವ ಜವಬ್ದಾರಿ ಕೇಂದ್ರ ಸಂಗೀತ ನೃತ್ಯ ವಿಭಾಗಕ್ಕೆ ವಹಿಸಲಾಗಿತ್ತು. 'ವಾರ್ತಾ ಮತ್ತು ಪ್ರಚಾರ ಇಲಾಖೆ'ಯ ಸಹಯೋಗದಿಂದ ಈ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿತ್ತು. ಸರ್ಕಾರದ ಧ್ಯೇಯೋದ್ದೇಶಗಳ ಪ್ರಚಾರಕ್ಕಾಗಿ ಹರಿಕಥಾ ಕಲಾವಿದರಿಂದ ಅರ್ಜಿಗಳನ್ನು ಆಹ್ವಾನಿಸಿತ್ತು. ಗುರುಸಿದ್ದಪ್ಪನವರೂ ಅರ್ಜಿ ಹಾಕಿದರು, ಆಯ್ಕೆಯೂ ಆದರು.

ಒಂದೊಂದು ರಾತ್ರಿ ಒಂದೊಂದು ಹಳ್ಳಿಗೆ ಹೋಗಿ ಆ ಊರಿನ ಗೌಡ, ಪಟೇಲರ ನೆರವು ಪಡೆದು ಕಾರ್ಯಕ್ರಮ ಸಂಘಟಿಸಿ ರಾತ್ರಿಯೆಲ್ಲಾ ಜನಗಳನ್ನು ರಂಜಿಸುತ್ತಲೇ ಕುಟುಂಬ ಯೋಜನೆಯ ಮಹತ್ವ, ಸಾಕ್ಷರತೆಯ ಅಗತ್ಯ, ಆರೋಗ್ಯ ಜಾಗೃತಿ, ವರದಕ್ಷಿಣೆ ನಿಷೇಧ, ಮದ್ಯಪಾನದ ಅಪಾಯಗಳನ್ನು ಕುರಿತು ಸಂಗೀತ, ನೃತ್ಯ, ಉಪಕತೆಗಳ ಮೂಲಕ ಆಕರ್ಷಕವಾಗಿ ಸಾದರಪಡಿಸುತ್ತಿದ್ದರು. ಗುರುಸಿದ್ದಪ್ಪನವರು ಈ ರೀತಿ ೧೦ ವರ್ಷಗಳ ಕಾಲ ಕೆಲಸ ಮಾಡಿದರು.

## ನೃತ್ಯ ನಿಕೇತನದ ನಂಟು

ಚಳ್ಳಕೆರೆಯಂಥ ಬೆಂಗಾಡಿನ ಬಿಸಿಲು ಸೀಮೆಯಲ್ಲಿ ಸಾಹಿತ್ಯ–ಸಂಸ್ಕೃತಿ–ಸಂಗೀತಗಳ ಒಯಸಿಸ್ ಆಗಿತ್ತು ಗುರುಸಿದ್ದಪ್ಪನವರ 'ಗುರು ಸಂಗೀತ ಕಲಾ ಶಾಲೆ'. ಇದಕ್ಕೊಂದು ಅರ್ಥಪೂರ್ಣತೆಯನ್ನು, ಹೊಸ ತಿರುವನ್ನು ನೀಡಿದ್ದು ದಕ್ಷಿಣ ಕನ್ನಡದಿಂದ ಬಂದ ದಂಪತಿಗಳು. ಮೊದಲಿಗೆ ದಕ್ಷಿಣದ ಕನ್ನಡ ಉಳ್ಳೂರುನಿಂದ ಯು.ಎಸ್.ವಿಷ್ಣುಮೂರ್ತಿರಾವ್ ಅವರು ಹೋಟೆಲ್ ಉದ್ಯಮಿಯಾಗಿ ಚಳ್ಳಕೆರೆಗೆ ಆಗಮಿಸಿದರು. ಅವರಿಗೆ ಸಾಹಿತ್ಯ–ಸಂಸ್ಕೃತಿ ಕಾರ್ಯಕ್ರಮಗಳ ಬಗ್ಗೆ ತೀವ್ರವಾದ ಪ್ರೀತಿಯಿತ್ತು. ಅವರ ತಾಯಿ ಸೀತಮ್ಮನವರ ಹೆಸರಿನಲ್ಲಿ ಶಾಲಾ–ಕಾಲೇಜಿನ ಕಾರ್ಯಕ್ರಮಗಳಿಗೆ ಪಾರಿತೋಷಕ, ನಗದು ಬಹುಮಾನಗಳನ್ನು ನೀಡುತ್ತಾ ಚಳ್ಳಕೆರೆಯಲ್ಲಿ ಒಂದು ಸಾಂಸ್ಕೃತಿಕ ಪರಿಸರವನ್ನು ಸೃಷ್ಟಿಸುವಲ್ಲಿ ಅವರದೇ ಆದ ಕೊಡುಗೆ ನೀಡಿದ್ದರು. ಗಾಳಿಗೆ ಪರಿಮಳ ಜೊತೆಯಾದಂತೆ ಇವರ ವಿವಾಹ

ಕಾಸರಗೋಡಿನ ಹೊರನಾಡಿನ ಕನ್ನಡಿಗರಾದ ವಕೀಲವೃತ್ತಿಯ ಶ್ಯಾನುಭೋಗ್ ಅವರ ಮಗಳು ಸುಧಾ ಅವರೊಂದಿಗೆ ನಡೆಯಿತು. ಮೊದಲೇ ಸಾಹಿತ್ಯಪ್ರಿಯರಾಗಿದ್ದ ವಿಷ್ಣುಮೂರ್ತಿಗೆ ಸಂಗೀತಪ್ರಿಯೆಯಾದ ಸುಧಾ ಅವರ ಆಗಮನ ಹೊಸ ತಿರುವನ್ನು ನೀಡಿತು.

ಸುಧಾ ಅವರಿಗೆ ಕರ್ನಾಟಕ ಸಂಗೀತದ ಹಾಡುಗಾರಿಕೆಯ ಅಭ್ಯಾಸವಿತ್ತು. ತಾಳಮೇಳವೆಂಬಂತೆ ಆಕೆಗೆ ಭರತನಾಟ್ಯದಲ್ಲೂ ಪರಿಶ್ರಮವಿತ್ತು. ಆದರೆ ಸಂಗೀತವನ್ನು ಇನ್ನಷ್ಟು ಶಾಸ್ತ್ರೀಯವಾಗಿ ಕಲಿಯಬೇಕೆಂಬ ಇವರ ಬಯಕೆಗೆ ಗುರುಸಿದ್ದಪ್ಪನವರು ಸರಿಯಾದ ಗುರುವಾಗಿ ದೊರೆತರು. ಕೆಲವೇ ತಿಂಗಳ ಕಲಿಕೆಯಲ್ಲಿ ಶಾಸ್ತ್ರೀಯ ಹಾಡುಗಾರಿಕೆಯಲ್ಲಿ ಸುಧಾ ಪರಿಣತಿ ಪಡೆದುದಲ್ಲದೆ ಗುರುಸಿದ್ದಪ್ಪನವರ ಅಚ್ಚುಮೆಚ್ಚಿನ ಶಿಷ್ಯೆಯಾದರು. ಶಿಷ್ಯೆ ಗುರುವಿಗೆ ಸಂಗೀತದ ಸಾಥ್ ಕೊಡತೊಡಗಿದರು. ಗುರುಸಿದ್ದಪ್ಪನವರ ಶಿಷ್ಯರಲ್ಲೆಲ್ಲಾ ಅಗ್ರಗಣ್ಯರಾಗಿ ಗುರುವಿನ ಬಲಗೈಯಂತೆ ಸುಧಾ ಅವರು ಬೆಳೆಯತೊಡಗಿದರು.

ಇದೇ ಸಂದರ್ಭದಲ್ಲಿ ಗುರುಸಿದ್ದಪ್ಪನವರು ಸಂಗೀತ ಕಲಿಸಿದಂತೆ ತಾನೇಕೆ ಇಲ್ಲಿಯ ಮಕ್ಕಳಿಗೆ ಭರತನಾಟ್ಯ ಕಲಿಸಬಾರದು ಎಂಬ ಆಲೋಚನೆ ಸುಧಾ ಅವರಿಗೆ ಬಂದಿದ್ದೇ ತಡ ತಮ್ಮ ಆಲೋಚನೆಯನ್ನು ಪತಿ ವಿಷ್ಣುಮೂರ್ತಿರಾವ್ ಅವರೊಂದಿಗೆ ಹಂಚಿಕೊಂಡರು. ಗುರುಸಿದ್ದಪ್ಪನವರೊಂದಿಗೆ ಸಮಾಲೋಚಿಸಿ 'ನೃತ್ಯ ನಿಕೇತನ' ಎಂಬ ಸಂಸ್ಥೆಯನ್ನು ಕಟ್ಟಿದರು. ಇಲ್ಲಿಯವರೆಗೂ ಈ ಭಾಗದ ಸಂಗೀತಪ್ರಿಯರಿಗೆ ಆಶ್ರಯಧಾಮವಾಗಿದ್ದ ಗುರುಸಿದ್ದಪ್ಪನವರ ಸಂಗೀತ ಶಾಲೆಯಂತೆ ಭರತನಾಟ್ಯಪ್ರಿಯ ಹುಡುಗಿಯರಿಗೆ ಸುಧಾಮೂರ್ತಿ ಗುರುವಾದರು. ಈ ಬರದ ಸೀಮೆಯ ಸಾವಿರಾರು ಮಕ್ಕಳಿಗೆ ಸಂಗೀತ-ನೃತ್ಯಗಳ ಕಲೆಯನ್ನು ಧಾರೆ ಎರೆದರು. ಬರಡಾಗಿದ್ದ ಪರಿಸರಕ್ಕೆ ನೃತ್ಯಜಲದ ಧಾರೆ ಹರಿಸಿದರು. ಪ್ರತಿವರ್ಷ ನೂರಾರು ಜನರಿಗೆ ಭರತನಾಟ್ಯವನ್ನು ಕಲಿಸಿದರು. ನೃತ್ಯರೂಪಕಗಳನ್ನು ರಚಿಸಿಕೊಂಡು ತಮ್ಮ ಶಿಷ್ಯೆಯರ ಮೂಲಕ ಕಾರ್ಯಕ್ರಮಗಳನ್ನು ಚಳ್ಳಕೆರೆಯಿಂದ ಹೊರಗಿನ ಅನೇಕ ಸ್ಥಳಗಳಿಗೆ ಹೋಗಿ ನೀಡತೊಡಗಿದರು.

ಸುಧಾಮೂರ್ತಿ ಅವರ ಪತಿಗೆ ಯಾಕೋ ಹೋಟೆಲ್ ಉದ್ಯಮ ಒಲಿದು ಬರಲಿಲ್ಲ. ಅವರು ಅದನ್ನು ಬಿಟ್ಟುಕೊಟ್ಟು ಹೆಂಡತಿಯ ಪ್ರದರ್ಶನ ಚಟುವಟಿಕೆಗಳನ್ನು ನಿರ್ವಹಿಸತೊಡಗಿದರು. ಮೊದಲೇ ಕವಿಯಾಗಿದ್ದ ವಿಷ್ಣುಮೂರ್ತಿರಾವ್ ಅವರಿಗೆ ತಾನೇ ಏಕೆ ನೃತ್ಯರೂಪಕಗಳನ್ನು ಬರೆಯಬಾರದು ಅನಿಸಿದ್ದೇ ತಡ ಒಂದೊಂದೇ ರೂಪಕಗಳನ್ನು ಬರೆಯತೊಡಗಿದರು. ಅವು ಗುರುಸಿದ್ದಪ್ಪನವರ ಸಂಗೀತ ನಿರ್ದೇಶನದ ರಂಗದಲ್ಲಿ ಪ್ರದರ್ಶನವಾಗತೊಡಗಿದವು. (ಈ ಎಲ್ಲ ರೂಪಕಗಳನ್ನು

‘ಹೆಜ್ಜೆ–ಗೆಜ್ಜೆ’ ಎಂಬ ಹೆಸರಿನಲ್ಲಿ ಸಿವಿಜಿ ಪಬ್ಲಿಕೇಷನ್ಸ್‌ನವರು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ.)

ಸುಧಾ ಮತ್ತು ವಿಷ್ಣುಮೂರ್ತಿ ಅವರು ಚೆನ್ನಾಗಿ ನುರಿತ ಶಿಷ್ಯೆಯರ ಒಂದು ಕಲಾತಂಡವನ್ನು ಕಟ್ಟಿ ಅವರಿಗೆ ಚೆನ್ನಾಗಿ ತರಬೇತಿ ನೀಡಿ ಕರ್ನಾಟಕದುದ್ದಕ್ಕೂ ಅಲ್ಲದೆ ಹೊರರಾಜ್ಯಗಳಲ್ಲೂ ಪ್ರದರ್ಶನ ನೀಡಿದರು. ಈ ಎಲ್ಲ ಪ್ರದರ್ಶನಗಳಿಗೆ ಗುರುಸಿದ್ದಪ್ಪನವರದೇ ಪಕ್ಕವಾದ್ಯ. ಹೀಗಾಗಿ ಇವರ ಕೀರ್ತಿ ಪತಾಕೆ ಎಲ್ಲೆಲ್ಲೂ ಹಾರಾಡತೊಡಗಿತು. ಗುರುಸಿದ್ದಪ್ಪನವರ ಪಕ್ಕವಾದ್ಯ ಯಾತ್ರೆ ಚಳ್ಳಕೆರೆ ಗಡಿದಾಟಿ ಚಿತ್ರದುರ್ಗದ ಬೃಹನ್ಮಠ, ಸಿರಿಗೆರೆಯ ತರಳಬಾಳು ಮಠ, ತುಮಕೂರು, ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು, ಮಂಗಳೂರು, ಶೃಂಗೇರಿ, ಕೊಲ್ಲೂರು, ಉಡುಪಿ, ಹೊರನಾಡು, ಶಿವಮೊಗ್ಗ, ದಾವಣಗೆರೆ, ಧಾರವಾಡ, ಬಳ್ಳಾರಿ, ರಾಯಚೂರು, ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಕೇರಳದ ಕಾಸರಗೋಡು, ತಮಿಳುನಾಡಿನ ಮಹಾಬಲಿಪುರಂ ಮುಂತಾದ ನೂರಾರು ಸ್ಥಳಗಳಲ್ಲಿ ಸತತವಾಗಿ ೨೦ ವರ್ಷ ನೃತ್ಯ ನಿಕೇತನ ತಂಡಗಳೊಂದಿಗೆ ಸಹಕರಿಸಿದರು. ವಯಸ್ಸಾಗುತ್ತಾ, ಆರೋಗ್ಯ ಕ್ಷೀಣಿಸುತ್ತಾ ಬಂದಂತೆ ಚಳ್ಳಕೆರೆಯಿಂದ ಹೊರಗೆ ಹೋಗುವುದನ್ನು ನಿಲ್ಲಿಸಿದರು.

## ಟಿವಿಯಲ್ಲಿ ‘ಬೆಳಗು’

ಬೆಂಗಳೂರು ದೂರದರ್ಶನದವರು ಎಂದಿನ ತಮ್ಮ ‘ಬೆಳಗು’ ಕಾರ್ಯಕ್ರಮದ ಅತಿಥಿಯಾಗಿ ಆಹ್ವಾನಿಸಿ ಅವರ ಸಿದ್ಧಿ–ಸಾಧನೆಗಳ ಸಮೀಕ್ಷೆ ಮಾಡಿ ಜನಮನಗಳಿಗೆ ಇವರ ಬದುಕಿನ ಇತಿವೃತ್ತವನ್ನು ಮುಟ್ಟಿಸಿದರು. ಸಾಧಕನಿಗೆ ಸಾರ್ಥಕ ಭಾವ ತಂದುಕೊಡುವ ಇಂಥ ದಾಖಲೀಕರಣ ಒಂದು ಬಗೆಯ ತೃಪ್ತಿಯನ್ನು ತರುವುದುಂಟು.

## ನಿವೃತ್ತಿ

೧೯೬೯ರಲ್ಲಿ ತಮ್ಮ ೩೮ನೇ ವಯಸ್ಸಿನಲ್ಲಿ ಕೆಲಸಕ್ಕೆ ಸೇರಿ ಸತತವಾಗಿ ೨೦ ವರ್ಷಗಳ ತನಕ ಸೇವೆ ಸಲ್ಲಿಸಿ ೧೯೯೦ರಲ್ಲಿ ತಮ್ಮ ೫೮ನೇ ವಯಸ್ಸಿನಲ್ಲಿ ನಿವೃತ್ತಿಯಾದರು. ಅವರ ವೃತ್ತಿಗೆ ನಿವೃತ್ತಿಯಾಯಿತೇ ವಿನಃ ಅವರ ಜೀವದ ಜೀವವಾಗಿದ್ದ ಸಂಗೀತ ಪ್ರವೃತ್ತಿಗೆ ನಿವೃತ್ತಿಯೇ ಇರಲಿಲ್ಲ. ಬದುಕಿನ ಕೊನೆಯವರೆಗೂ

ಜೊತೆಯಾಗಿರುವ ಜೀವನ ಸಂಗಾತಿ ಸಂಗೀತ. ಕೇವಲ ೧೫೦/-ರೂ ಸಂಬಳದಿಂದ ವೃತ್ತಿಜೀವನ ಪ್ರಾರಂಭಿಸಿದ ಅವರಿಗೆ ನಿವೃತ್ತಿಯಾಗುವಾಗ ೫೦೦೦/- ರೂ ಸಂಬಳ ಬರುತ್ತಿತ್ತು. ಈಗ ಪಡೆಯುತ್ತಿರುವ ಪೆನ್‌ಷನ್ ರೂ. ೧೨,೦೦೦/-. ಇದು ಅವರ ಬದುಕಿನ ಆರ್ಥಿಕ ಏರಿಳಿತಗಳನ್ನು ಚಿತ್ರಿಸುತ್ತದೆ.

## ನೆಮ್ಮದಿಯ ಕುಟುಂಬ ಜೀವನ

ಇಬ್ಬರು ಹೆಣ್ಣು ಮಕ್ಕಳು, ಏಕೈಕ ಗಂಡು ಮಗ ಹಾಗೂ ಹೆಂಡತಿ ಮತ್ತು ಮೊಮ್ಮಕ್ಕಳ ತುಂಬು ಕುಟುಂಬದಲ್ಲಿ ಚೆಳ್ಳಕೆರೆಯ ತಮ್ಮ ಸ್ವಂತ ಮನೆಯಲ್ಲಿ ನೆಮ್ಮದಿಯ ಬದುಕು ಸಾಗಿದೆ. ಜೀವನದಲ್ಲಿ ಯಾವ ದುಶ್ಚಟಗಳಿಗೆ ಬಲಿಯಾಗದೆ, ದುರ್ಜನರೊಡನೆ ಸೇರದೆ, ದುರ್ವ್ಯವಹಾರಗಳಿಗೆ ಕೈಹಾಕದೆ, ಸಜ್ಜನರಾಗಿ, ದೈವಭಕ್ತರಾಗಿ, ಪರೋಪಕಾರ ಬುದ್ಧಿಯನ್ನು ರೂಢಿಸಿಕೊಂಡು, ಮೂಢ ನಂಬಿಕೆ, ಕಂದಾಚಾರಗಳನ್ನು ದೂರೀಕರಿಸಿ, ಶರಣತತ್ವಗಳನ್ನು ಅಳವಡಿಸಿಕೊಂಡು, ಉನ್ನತ ಮಾನವರಾಗಿ ಜೀವನ ನಡೆಸುತ್ತಿದ್ದಾರೆ.

'ಮಾನವನು ಮನುಷ್ಯನಾಗಿ ಬಾಳಬೇಕು, ಸಾಧ್ಯವಾದರೆ ದೇವನಾಗಬೇಕು. ಆದರೆ ದಾನವನು ಮಾತ್ರ ಆಗಬಾರದು' ಎಂದು ಆಗಾಗ ತಾವೇ ಬೋಧಿಸುವ ಈ ಮಾತನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ.

ಹೆಣ್ಣು ಮಕ್ಕಳಿಬ್ಬರೂ (ರಾಜೇಶ್ವರಿ-ಹೇಮಲತಾ) ಸಂಗೀತ ಕಲಿತು ತಂದೆಯ ಪರಂಪರೆಯನ್ನು ಮುಂದುವರೆಸುತ್ತಿದ್ದಾರೆ. ಏಕೈಕ ಪುತ್ರ ಜಿ.ಟಿ.ಸ್ವಾಮಿ ಮೃದಂಗ ವಿದ್ವಾನ್, ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿಯ ಲಲಿತ ಕಲಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ.

## ಉನ್ನತ ಪ್ರಶಸ್ತಿಯ ಗೌರವ

ಕರ್ನಾಟಕ ಸರ್ಕಾರದ ಸಂಗೀತ ನೃತ್ಯ ಅಕಾಡೆಮಿಯು ಅವರ ಕಥಾ ಕೀರ್ತನೆಗಳಿಗೋಸ್ಕರ ೧೯೯೦ರಲ್ಲಿ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ನೀಡಿ ಗೌರವಿಸಿತು. ಅವರ ೩೦ ವರ್ಷಗಳ ಕಲಾಸಾಧನೆಗೆ ದೊರೆತ ಗೌರವ ಇದಾಗಿದೆ.

## ಕೊನೆಯ ದಿನಗಳು

ಕರೂರು ತಿಮ್ಮಣ್ಣ, ಮುದಿಯಪ್ಪ, ಬಾಲೇನಹಳ್ಳಿ ಮಲ್ಲಾರೆಡ್ಡಿ, ಜಗಲೂರು ಕಾಡಪ್ಪನಂಥ ಸಂಗೀತ-ತಬಲ ಘಟಾನುಘಟಿಗಳು ಮತ್ತು ಮಲ್ಲಪ್ಪನಹಳ್ಳಿಯ

ಲಕ್ಷ್ಮಣಪ್ಪ, ಪಿ.ಎಲ್.ಸಿದ್ದಯ್ಯನವರಂಥ ಮೇರುನಟರೊಂದಿಗೆ ಕೆಲಸ ಮಾಡಿದ ತೃಪ್ತಿ ಗುರುಸಿದ್ದಪ್ಪನವರಿಗಿದೆ. ನಟನೆ, ಸಂಗೀತ, ನಾಟಕ ನಿರ್ದೇಶನ, ಹರಿಕಥಾ ಕಾಲಕ್ಷೇಪಗಳಂಥ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ನೀಡುತ್ತಾ ಕಲಾಜೀವನದಲ್ಲಿ ೫೩ ವರ್ಷ ಕಳೆದ ತೃಪ್ತಿ ಇದೆ.

ಯಾಕೋ ೭೦-೮೦ರ ದಶಕದ ನಂತರ ನಾಟಕದಲ್ಲಿ ಅಶ್ಲೀಲತೆ ಹೆಚ್ಚಾಗತೊಡಗಿದ್ದರಿಂದ ನಾಟಕಗಳಿಗೆ ನಿರ್ದೇಶನ ನೀಡುವುದನ್ನು ನಿಲ್ಲಿಸಿ, ಮಕ್ಕಳಿಗೆ ಸಂಗೀತ ಕಲಿಸುವುದರಲ್ಲಿ ಆನಂದವನ್ನು ಕಾಣುತ್ತಿದ್ದಾರೆ.

೮೫ರ ಇಳಿವಯಸ್ಸಿನಲ್ಲಿರುವ ಗುರುಸಿದ್ದಪ್ಪನವರು ಇತ್ತೀಚೆಗೆ ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ಅವರ ಬದುಕಿನ ಇತಿವೃತ್ತ ಬರೆದು ಮುಗಿಸುವುದರೊಳಗೆ ಹೋಗಿಬಿಡುತ್ತಾರೇನೋ ಎಂಬ ಆತಂಕದಲ್ಲೇ ನಾನು ಬರವಣಿಗೆ ಪ್ರಾರಂಭಿಸಿದ ನಂತರ ಈಗ ಚೇತರಿಸಿಕೊಂಡು ಓಡಿಯಾಡುವಂತೆ ಆದುದು ಒಂದು ಸಂತೋಷದ ಆಶ್ಚರ್ಯಕರ ಬೆಳವಣಿಗೆಯಾಗಿದೆ.

(೧೨-೧೦-೨೦೧೫)

## ಅನುಬಂಧ-೧

# ಬಿ. ಗುರುಸಿದ್ದಪ್ಪನವರ ನಾಟಕಗಳ ಪಕ್ಷಿನೋಟ

ಗುರುಸಿದ್ದಪ್ಪನವರು ಬರೆದ ಒಟ್ಟು ನಾಟಕಗಳ ಸಂಖ್ಯೆ ಎಂಟು. ಅದರಲ್ಲಿ ೧ ಪೌರಾಣಿಕ, ೨ ಐತಿಹಾಸಿಕ, ೫ ಸಾಮಾಜಿಕ ನಾಟಕಗಳಾಗಿವೆ. ರಂಗಗೀತೆ ಮತ್ತು ಪ್ರಚಾರಗೀತೆಗಳ ಸಂಗ್ರಹ ೧.

### ನಾಟಕಗಳ ಸ್ಥೂಲ ಪರಿಚಯ

**೧. ಭಕ್ತ ಸುಧನ್ವ (೧೯೬೦):** ಇದೊಂದು ಪೌರಾಣಿಕ ನಾಟಕವಾಗಿದ್ದು, ಜೈಮಿನಿ ಭಾರತದಿಂದ ಆರಿಸಿಕೊಂಡ ಕಥೆಯನ್ನು ಆಧರಿಸಿದೆ. ೨ ಅಂಕಗಳಿಂದ ಕೂಡಿದ ಈ ನಾಟಕದ ಮೊದಲ ಅಂಕ ೧೫ ದೃಶ್ಯಗಳಿಂದ ಕೂಡಿದ್ದರೆ, ಎರಡನೆ ಅಂಕ ೭ ದೃಶ್ಯಗಳಿಂದ ಕೂಡಿದೆ. ಅಶ್ವಮೇಧಯಾಗದ ಕುದುರೆಯನ್ನು ಕಟ್ಟಿಹಾಕಿದ ಸುಧನ್ವನೊಂದಿಗೆ ಕಾದಾಡಲು ಅರ್ಜುನ ಬರುತ್ತಾನೆ. ಇವರಿಬ್ಬರೂ ಕೃಷ್ಣನ ಬಗ್ಗೆ ಅಪಾರವಾದ ಭಕ್ತಿ-ಪ್ರೀತಿ ಉಳ್ಳವರೇ. ಮಹಾಭಾರತದ ಯುದ್ಧದಲ್ಲಿ ಘಟಾನುಘಟಿಗಳು ಮಿಂಚಿದ ನಂತರ ಆ ಅತಿರಥ-ಮಹಾರಥರನ್ನು ಮೀರಿಸುವ ಎರಡನೆ ಪೀಳಿಗೆಯ ಸಾಲು ಸಾಲು ವೀರರನ್ನು ದರ್ಶನ ಮಾಡಿಸುವ, ಪ್ರತಿಷ್ಠಿತರ ಅಹಂಕಾರವನ್ನು ಛಿದ್ರ ಮಾಡುವ ಜೈಮಿನಿ ಭಾರತ ಕಥನದ ಒಂದು ಅಣಿಮುತ್ತು ಭಕ್ತ ಸುಧನ್ವನ ಕಥನ. ಕೃಷ್ಣ ಮಹಿಮೆಯನ್ನು ಸಾರುವುದಕ್ಕೆ ಮೀಸಲಾದಂತಿರುವ ಈ ಕಥನ ಭಕ್ತಿರಸವನ್ನು ಉಕ್ಕಿಸುವುದರೊಂದಿಗೆ ವೀರರ ಪರಾಕ್ರಮಕ್ಕೆ ಆಡೊಂಬೊಲವೂ ಆಗುತ್ತದೆ.

ಹೆಂಡತಿ ತಡೆದದ್ದರಿಂದ ಯುದ್ಧಕ್ಕೆ ಹೊರಡುವುದರಲ್ಲಿ ನಿಗದಿತ ಗಡುವನ್ನು ಮೀರಿದನೆಂದು ಸುಧನ್ವನನ್ನು ಆತನ ತಂದೆಯೇ ಕುದಿಯುವ ಎಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿಸಿದರೂ ಅವನ ಕೃಷ್ಣಭಕ್ತಿಯಿಂದ ಬದುಕುಳಿಯುತ್ತಾನೆ. ಅರ್ಜುನನ ಬಾಣಗಳೆಲ್ಲವನ್ನೂ ಗುರಿಮುಟ್ಟುವ ಮೊದಲೇ ಛೇದಿಸುತ್ತೇನೆ ಎಂಬ ಪ್ರತಿಜ್ಞೆಯನ್ನು ಸುಧನ್ವ ನೆರವೇರಿಸಿದರೂ ಮೂರನೆಯ ಕೊನೆಯ ಬಾಣ ಛೇದನಗೊಂಡರೂ

ಅದರ ಮೊನಚು ತುದಿಯ ಇನ್ನರ್ಧ ಭಾಗ ಬಂದು ಸುಧನ್ವನ ತಲೆ ತೆಗೆಯುತ್ತದೆ. ಶ್ರೀಕೃಷ್ಣ ಪ್ರತ್ಯಕ್ಷನಾಗಿ ಸರ್ವರಿಗೂ ಮಂಗಳವನ್ನು ಕೋರುತ್ತಾನೆ. ಶ್ರೀಕೃಷ್ಣ ಭಕ್ತರಿಬ್ಬರ ಸತ್ವಪರೀಕ್ಷೆಯ ಈ ಕಥನ ನಾಟಕೀಯ ಘಟನೆಗಳಿಂದ ಭಕ್ತಿಮಯ ಭಾವನಾತ್ಮಕ ಸನ್ನಿವೇಶಗಳಿಂದ ಮನಸ್ಸಿಗೆ ಕಾಡುತ್ತದೆ.

ಈ ನಾಟಕ ೧೯೬೦, ೧೯೭೮, ೧೯೮೯ರಲ್ಲಿ ಒಟ್ಟು ಮೂರು ಮುದ್ರಣಗಳನ್ನು ಕಂಡಿರುವುದೇ ಅದರ ಜನಪ್ರಿಯತೆಯನ್ನು ಹೇಳುತ್ತದೆ.

**೨. ಗ್ರಾಮ ಸುಧಾರಣೆ (೧೯೬೫):** ಹೆಸರೇ ಹೇಳುವಂತೆ ಹಳ್ಳಿಗಳ ಉದ್ಧಾರದ ಕಥನ ಇದಾಗಿದೆ. ಕೇವಲ ೧೧ ದೃಶ್ಯಗಳಿಂದ ಕೂಡಿದ ಸಾಮಾಜಿಕ ಕಿರು ನಾಟಕ ಇದು.

ಹಳ್ಳಿಗಳ ಉದ್ಧಾರಕ್ಕಾಗಿ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಸ್ವಾರ್ಥಿಜನ ಹೇಗೆ ದುರುಪಯೋಗ ಪಡಿಸಿಕೊಳ್ಳುತ್ತಾರೆ ಹಾಗೂ ಅಮಾಯಕ ಜನರನ್ನು ಹೇಗೆ ಶೋಷಿಸುತ್ತಾರೆ ಎನ್ನುವ ವಿಚಾರಗಳನ್ನು ತಿಳಿಸುತ್ತಾ; ಇಂಥ ಸಂದರ್ಭದಲ್ಲಿ ಹಳ್ಳಿಯ ವಿದ್ಯಾವಂತ ಯುವಕರು ಮುಂದೆ ಬರಬೇಕೆಂಬ ಆಶಯವನ್ನು, ಗಾಂಧೀಜಿಯ ಆದರ್ಶ ಗ್ರಾಮ ಸ್ವರಾಜ್ಯದ ಕನಸನ್ನು ಈ ನಾಟಕ ಬಿತ್ತರಿಸುತ್ತದೆ.

ಬಹುಶಃ ಈ ನಾಟಕದ ಮೇಲೆ ಬೆಳಗೆರೆ ಕೃಷ್ಣಶಾಸ್ತ್ರಿಗಳ 'ಹಳ್ಳಿ ಚಿತ್ರ' ಮತ್ತು ತ.ರಾ.ಸು.ರವರ 'ಮಾರ್ಗದರ್ಶಿ' ಕಾದಂಬರಿಯ ಪ್ರಭಾವ ಆದಂತೆ ಕಾಣುತ್ತದೆ.

**೩. ಸುಮಂಗಲ (೧೯೬೬):** ಈ ಸಾಮಾಜಿಕ ನಾಟಕ ಎರಡು ಅಂಕಗಳಿಂದ ಕೂಡಿದ್ದು, ಮೊದಲನೆ ಅಂಕದಲ್ಲಿ ೨೨ ದೃಶ್ಯಗಳಿದ್ದರೆ, ಎರಡನೆ ಅಂಕದಲ್ಲಿ ೧೭ ದೃಶ್ಯಗಳಿವೆ. ಪ್ರಯೋಗದ ದೃಷ್ಟಿಯಿಂದ ಇದು ದೊಡ್ಡ ನಾಟಕ.

ಇದು ದುಷ್ಟ ಹೆಣ್ಣಿಗೂ, ಸಜ್ಜನಳಾದ ಹೆಣ್ಣಿಗೂ ನಡೆಯುವ ಸಂಘರ್ಷದ ಕಥನವನ್ನು ಒಳಗೊಂಡಿದೆ. ಸದಾಶಿವ ಎಂಬ ವಿದ್ಯಾವಂತ, ತನಗೆ ಸುಮಂಗಲಳಂಥ ಒಳ್ಳೆಯ ಹೆಂಡತಿ ಮತ್ತು ಇಬ್ಬರು ಮಕ್ಕಳಿದ್ದರೂ ರಾಧೆ ಎಂಬ ಹೆಣ್ಣಿನ ಮೋಹ ಪಾಶಕ್ಕೆ ಸಿಕ್ಕು ತನ್ನ ಕುಟುಂಬವನ್ನು ತೊರೆದು ಅವಳ ಹಿಂದೆ ಹೋಗುತ್ತಾನೆ. ಯಾವುದೋ ಊರಿನ ಮಿಲ್ಲೊಂದರಲ್ಲಿ ಕೆಲಸ ಮಾಡುತ್ತಿರುವಾಗ ಶ್ಯಾಮು ಎಂಬ ಹಳೆಯ ಸ್ನೇಹಿತ ಸಿಕ್ಕು ಗೆಳೆಯನ ಪ್ರೇಯಸಿಯನ್ನು ಹಾರಿಸಿಕೊಂಡು ಹೋಗುತ್ತಾನೆ. ಹಳೆಯ ಹೆಂಡತಿಯ ಪಾದವೇ ಗತಿ ಎಂದು ಊರಿಗೆ ವಾಪಸ್ ಬರುತ್ತಿರುವಾಗ, ಅನುಮಾನಾಸ್ಪದವಾಗಿ ಸತ್ತ ರಾಧಾಳ ತಾಯಿಯ ಸಾವಿಗೆ ಇವನೇ ಕಾರಣನೆಂದು ಬಂಧಿಸಿ ಜೈಲಿಗೆ ಹಾಕುತ್ತಾರೆ. ವಿಚಾರಣೆಯಲ್ಲಿ ಇವನಿಗೆ ಗಲ್ಲುಶಿಕ್ಷೆಯಾಗುತ್ತದೆ.

ಆದರೆ ಸುಮಂಗಲಳ ಪ್ರಯತ್ನದಿಂದ ಮರುವಿಚಾರಣೆ ನಡೆದು ನಿರಪರಾಧಿಯೆಂದು ಜೈಲಿನಿಂದ ಹೊರಬಂದು ಮಾಡಿದ ತಪ್ಪಿಗೆ ಪಶ್ಚಾತಾಪ ಪಡುತ್ತಾ ಹೆಂಡತಿ ಮಕ್ಕಳನ್ನು ಸೇರುತ್ತಾನೆ. ಇದು ಇಂದು ನಮ್ಮ ಬದುಕಿನಲ್ಲಿ ನಡೆಯುತ್ತಿರುವ ಕಟುವಾಸ್ತವವನ್ನು ಬಿಂಬಿಸುತ್ತದೆ.

**೪. ತ್ಯಾಗ (೧೯೬೭):** ಎರಡು ಅಂಕಗಳ ಈ ಸಾಮಾಜಿಕ ನಾಟಕದಲ್ಲಿ ಕ್ರಮವಾಗಿ ೧೪+೧೪ ದೃಶ್ಯಗಳಿವೆ. ಇದೊಂದು ನಾಟಕೀಯ ಘಟನೆಗಳಿಂದ ಕೂಡಿದ ನಾಟಕ.

ಇಬ್ಬರು ಅಣ್ಣ-ತಮ್ಮಂದಿರಲ್ಲಿ ಕಿರಿಯನಾದವನಿಗೆ ಸಾಹಿತ್ಯ-ಸಂಗೀತಗಳ ಹುಚ್ಚು. ಆದರೆ ಅವನ ಅಣ್ಣನಿಗೆ ತಮ್ಮನ ಈ ನಡವಳಿಕೆ ಇಷ್ಟವಾಗುವುದಿಲ್ಲ. ಯಾವ ಕಾರಣಕ್ಕೂ ತನ್ನ ತಮ್ಮ ಸಾಹಿತಿ ಆಗಬಾರದು ಎಂಬ ಆಗ್ರಹ. ಇದರಿಂದ ಬೇಸತ್ತ ತಮ್ಮ ಮನೆಬಿಟ್ಟು ಹೋಗಿ ಬೇರೊಂದು ಊರಲ್ಲಿ ಸಂಗೀತ ಕಲಿಸುತ್ತಿರುತ್ತಾನೆ. ಅಲ್ಲಿಗೆ ಸಂಗೀತ ಕಲಿಯಲು ಬಂದ ಪ್ರೇಮಾಂಬರ ಎಂಬಾಕೆಯನ್ನು ಪ್ರೀತಿಸುತ್ತಾನೆ. ಇದಕ್ಕೆ ಅವರಣ್ಣ ವಿರೋಧಿಸುತ್ತಾನೆ. ತಮ್ಮ ಮತ್ತೆ ಮನೆಬಿಟ್ಟು ಹೋಗುತ್ತಾನೆ. ಮೈದುನ ಮನೆಬಿಟ್ಟು ಹೋದ ಕೊರಗಿನಲ್ಲೇ ಅಣ್ಣನ ಹೆಂಡತಿ ಸಾಯುತ್ತಾಳೆ. ಹೆಂಡತಿಯ ಸಾವಿನಿಂದ ಬೇಸತ್ತ ಅಣ್ಣ ತನ್ನ ಸಮಸ್ತ ಆಸ್ತಿಯನ್ನು ಅನಾಥಾಶ್ರಮಕ್ಕೆ ಬರೆಯುತ್ತಾನೆ.

ಇತ್ತ ತಮ್ಮ ತಾನು ಪ್ರೀತಿಸಿದವಳನ್ನು ಮದುವೆಯಾಗಿ ಕಾಲ ಕಳೆಯುತ್ತಿರುವಾಗ ಮತ್ತೊಬ್ಬ ಹೆಣ್ಣು ವಿದ್ಯಾವತಿ ಇವನನ್ನು ಪ್ರೀತಿಸುವಂತೆ ಒತ್ತಾಯಿಸುತ್ತಾಳೆ. ಅಷ್ಟರಲ್ಲಿ ಆ ಊರಿನ ವಕೀಲ ಪ್ರೇಮಾಂಬರಳನ್ನು ಅಪಹರಿಸುತ್ತಾನೆ. ತನ್ನನ್ನು ಕಾಮಿಸಿದ ಹೆಣ್ಣಿಗೆ ಬುದ್ಧಿವಾದ ಹೇಳಿ ತಿದ್ದುತ್ತಾನೆ. ಇಬ್ಬರೂ ಸೇರಿ ಪ್ರೇಮಾಂಬರಳನ್ನು ಹುಡುಕುತ್ತಾರೆ. ಅಷ್ಟರಲ್ಲಿ ಅಪಹರಿಸಿದವನನ್ನು ಅವನ ವಿರೋಧಿ ಬಂದು ಗುಂಡಿಟ್ಟು ಸಾಯಿಸುವಾಗ ಅವನೊಂದಿಗೆ ವಿದ್ಯಾವತಿಯೂ ಗುಂಡು ತಗುಲಿ ಸಾಯುತ್ತಾಳೆ. ಮತ್ತೊಮ್ಮೆ ತಮ್ಮ ಪ್ರೇಮಾಂಬರಳನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾನೆ. ದ್ವಿತೀಯಾರ್ಧ ಸಿನಿಮೀಯ ತಿರುವುಗಳಿಂದ ಅಸಹಜ ಅನ್ನಿಸುತ್ತದೆ. ಪ್ರಥಮಾರ್ಧ ನಾಟಕದ ಹೆಸರು 'ತ್ಯಾಗ'ವನ್ನು ಸಾರ್ಥಕ ಪಡಿಸುವಂತಿದೆ. ಇದೂ ಕೂಡಾ 'ಸುಮಂಗಲ'ದಂತೆಯೇ ಕಾಲಾವಧಿಯ ದೃಷ್ಟಿಯಿಂದ ಪೂರ್ಣ ಪ್ರಮಾಣದ ದೊಡ್ಡ ನಾಟಕ.

೫. ರಾಷ್ಟ್ರಪ್ರೇಮ (೧೯೭೨): ಇದೊಂದು ಸಾಮಾಜಿಕ ಕಿರುನಾಟಕ. ಇದರಲ್ಲಿ ಕೇವಲ ೬ ದೃಶ್ಯಗಳಿವೆ. ೧೯೬೨ರಲ್ಲಿ ಭಾರತ-ಚೀನ ಯುದ್ಧದ ನಂತರ ಪಾಕಿಸ್ತಾನ

ಸಮರ ಸಾರಿದ್ದು ರಾಷ್ಟ್ರದ ಅಸ್ತಿತ್ವಕ್ಕೆ ಮತ್ತು ಸಮಗ್ರತೆಗೆ ಭಂಗ ತರುವ ಪ್ರಯತ್ನದಲ್ಲಿ ಭಾರತದ ಯೋಧರು ತೋರಿದ ರಾಷ್ಟ್ರಪ್ರೇಮವನ್ನು ಕುರಿತು ಈ ನಾಟಕ ರಚಿಸಲಾಗಿದೆ. ಪ್ರಧಾನವಾಗಿ ಶಾಲಾಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದ ಈ ನಾಟಕ ಮಕ್ಕಳಲ್ಲಿ ರಾಷ್ಟ್ರಪ್ರೇಮವನ್ನು ಉದ್ದೀಪಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುತ್ತದೆ. ಪ್ರಯೋಗದ ದೃಷ್ಟಿಯಿಂದಲೂ ಶಾಲಾಮಕ್ಕಳಿಗೆ ಅಭಿನಯಿಸಲು ಹೇಳಿ ಮಾಡಿಸಿದಂತಿದ್ದು ಒಂದು ಗಂಟೆಯ ಕಾಲಾವಧಿಗಿಂತ ಹೆಚ್ಚಿನ ವೇಳೆ ತೆಗೆದುಕೊಳ್ಳದಿರುವುದು ಅನುಕೂಲವೇ ಆಗಿದೆ.

೬. ಝಾನ್ಸಿರಾಣಿ (೧೯೭೭): ಇದು ಕೂಡಾ ಶಾಲಾಮಕ್ಕಳನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬರೆದ ಕಿರು ಐತಿಹಾಸಿಕ ನಾಟಕ, ೧೪ ದೃಶ್ಯಗಳನ್ನು ಹೊಂದಿದೆ. ಭಾರತವನ್ನು ವಶಪಡಿಸಿಕೊಳ್ಳಲು ಆಂಗ್ಲರು ಒಂದೊಂದೇ ಸಂಸ್ಥಾನವನ್ನು ಕಬಳಿಸುತ್ತಾ ಝಾನ್ಸಿಗೆ ಕೈಹಾಕುತ್ತಾರೆ. ವೀರರಾಣಿ ಲಕ್ಷ್ಮೀಬಾಯಿ ಇದನ್ನು ಪ್ರತಿಭಟಿಸಿ ಆಂಗ್ಲರ ವಿರುದ್ಧ ಯುದ್ಧ ಮಾಡುತ್ತಾಳೆ. ಇದನ್ನು ಸ್ವಾತಂತ್ರ್ಯ ಸಂಗ್ರಾಮದ ಪ್ರಥಮ ಹೋರಾಟವೆಂದು ಪರಿಗಣಿಸಲಾಗಿದೆ. ಆಂಗ್ಲರ ವಿರುದ್ಧ ಹೋರಾಡುತ್ತಲೇ ವೀರಸ್ವರ್ಗ ಪಡೆದ ಆದರ್ಶನಾರಿಯಾಗಿ ಜನಮನದಲ್ಲಿ ಉಳಿಯುತ್ತಾಳೆ. ಭಾರತೀಯರಲ್ಲಿ ವಿಶೇಷವಾಗಿ ಮಕ್ಕಳಲ್ಲಿ ಸ್ವಾತಂತ್ರ್ಯ ಪ್ರೇಮ ಉದ್ದೀಪಿಸುವ ಆಶಯವನ್ನು ಹೊಂದಿರುವ ಈ ನಾಟಕ ತನ್ನ ನಾಟಕೀಯ ಸನ್ನಿವೇಶಗಳಿಂದ ಗಮನ ಸೆಳೆಯುತ್ತದೆ.

೭. ಅಪೂರ್ವಮಿತ್ರರು (೧೯೮೯): ಇದೊಂದು ದುರಂತ ಐತಿಹಾಸಿಕ ನಾಟಕ. ಇದು ೨೩ ದೃಶ್ಯಗಳನ್ನೊಳಗೊಂಡ ದೊಡ್ಡ ನಾಟಕ.

ಮೈಸೂರು ಬಳಿಯ ರಾವಂದೂರಿನ ಪಾಳೆಯಗಾರ ಶಿವಪ್ಪನಾಯಕ ಮತ್ತು ಅವನ ಮಗ ರಾವುತಮಲ್ಲರ ಸುತ್ತ ಈ ಕಥನ ಬೆಳೆಯುತ್ತದೆ. ಇಬ್ಬರೂ ಶೂರರು, ಧೀರರು. ಇವರಿಗೆ ಪಾಪಣ್ಣನಾಯಕನೆಂಬ ನಿಷ್ಠಾವಂತ ಸೇನಾಧಿಪತಿ. ಶಿವಪ್ಪನಾಯಕನ ರಾಜ್ಯವನ್ನು ಹೇಗಾದರೂ ಮಾಡಿ ಕಬಳಿಸಬೇಕೆಂದು ಪಿರಿಯಾಪಟ್ಟಣದ ಸಿರಿಯಪ್ಪನಾಯಕ ಮತ್ತು ಕಂಪಲಾಪುರದ ಬಸಪ್ಪನಾಯಕ ಸಂಚು ಮಾಡುತ್ತಾರೆ. ಶಿವಪ್ಪನಾಯಕನ ಕಟ್ಟಾ ಬೆಂಬಲಿಗನಾಗಿದ್ದ ಸೇನಾಧಿಪತಿ ಪಾಪಣ್ಣನಾಯಕನನ್ನು ವೇಶ್ಯೆಯ ಮೋಹಪಾಶದಿಂದ ತಮ್ಮವನನ್ನಾಗಿ ಮಾಡಿಕೊಂಡು ಶಿವಪ್ಪನಾಯಕನ ವಿರುದ್ಧ ಯುದ್ಧ ಸಾರುತ್ತಾರೆ. ಆದರೆ ಅವರೊಳಗೇ ನಡೆದ ಅಂತಃಕಲಹಗಳು ಅವರನ್ನೇ ಸರ್ವನಾಶ ಮಾಡುತ್ತವೆ. ರಾವಂದೂರಿನ ಶಿವಪ್ಪನಾಯಕನ ಮಗ ರಾವುತಮಲ್ಲ ಮತ್ತು ಪಿರಿಯಾಪಟ್ಟಣದ ಸಿರಿಯಪ್ಪನಾಯಕನ ಮಗ ಸೋಮಪ್ಪನಾಯಕ ಆತ್ಮೀಯ ಸ್ನೇಹಿತರು. ಹೀಗಾಗಿ ಶಿವಪ್ಪನಾಯಕನ ಮೇಲೆ

ಕಾಲುಕೆದರಿ ಯುದ್ಧ ಹೂಡಿದ್ದ ತನ್ನ ತಂದೆ ಸಿರಿಯಪ್ಪನಾಯಕನ ವಿರುದ್ಧವೇ ಮಗ ಸೋಮಪ್ಪನಾಯಕ ಬಂಡೆದ್ದು ತನ್ನ ಗೆಳೆಯ ರಾವುತಮಲ್ಲನನ್ನು ಬೆಂಬಲಿಸಿ ಅವನ ಪರವಾಗಿ ಹೋರಾಡುತ್ತಾ, ದ್ರೋಹಿಗಳ ಮೋಸಕ್ಕೆ ಬಲಿಯಾಗಿ ಸಾಯುತ್ತಾನೆ. ತನ್ನ ಗೆಳೆಯನ ಸಾವಿನಿಂದ ಕಂಗೆಟ್ಟ ರಾವುತಮಲ್ಲನೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ನಾಟಕ ದುರಂತದಲ್ಲಿ ಮುಗಿಯುತ್ತದೆ, ಅಪೂರ್ವ ಮಿತ್ರರು ಎಂಬ ತನ್ನ ಹೆಸರನ್ನು ಸಾರ್ಥಕಪಡಿಸಿಕೊಳ್ಳುತ್ತದೆ.

೮. **ಕರ್ಮಫಲ:** ಹೆಸರೇ ಹೇಳುವಂತೆ ಅವರವರ ಕರ್ಮಕ್ಕೆ ಅನುಗುಣವಾಗಿ ಅವರಿಗೆ ಫಲಗಳು ದೊರೆಯುತ್ತವೆ ಎಂಬ ನೀತಿಯನ್ನು ಹೇಳುವ ಸಾಮಾಜಿಕ ನಾಟಕ ಇದಾಗಿದೆ.

ಝಾನ್ಸಿರಾಣಿ ಮತ್ತು ಅಪೂರ್ವ ಮಿತ್ರರು ಎಂಬ ಎರಡು ನಾಟಕಗಳನ್ನು ಬೆಂಗಳೂರಿನ ಎಸ್.ಆರ್. ಪ್ರಕಾಶನದವರು ಪ್ರಕಟಿಸಿದರೆ ಉಳಿದ ೬ ನಾಟಕಗಳನ್ನು ಸ್ವಯಂ ಗುರುಸಿದ್ದಪ್ಪನವರೇ ತಮ್ಮ ವೇದಾವತಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ.

**ಗಾನಲಹರಿ (೨೦೧೧):** ಈ ಕವನ ಸಂಗ್ರಹದಲ್ಲಿಯ ಬಹುಪಾಲು ಕವಿತೆಗಳು ಅವರದೇ ನಾಟಕಗಳಿಗಾಗಿ ಬರೆದ ವಿನಾಯಕ, ಶಾರದೆ, ಗುರು, ಗೌರಿ, ಶಿವ, ಪಾರ್ವತಿ, ಲಕ್ಷ್ಮೀ, ತಿಪ್ಪೇಶ, ಅಯ್ಯಪ್ಪನವರನ್ನು ಕುರಿತ ಸ್ತುತಿಗೀತೆಗಳಾಗಿವೆ. ಇವೆಲ್ಲದಕ್ಕೂ ರಾಗ-ತಾಳಗಳನ್ನು ಕೊಟ್ಟಿದ್ದಾರೆ. ಇವೆಲ್ಲಾ ಭಕ್ತಿ ಪ್ರಧಾನ ಗೀತೆಗಳು.

ನಾಡಗೀತೆ, ಸುಗ್ಗಿ ಹಾಡುಗಳಲ್ಲದೆ ಈ ಹಿಂದೆ ತಾವು ವಾರ್ತಾ ಮತ್ತು ಪ್ರಚಾರ ಇಲಾಖೆಯ ಕಾರ್ಯಕ್ರಮಗಳಿಗಾಗಿ ಬರೆದ ಕುಟುಂಬ ಯೋಜನೆ, ಅಸ್ಪೃಶ್ಯತೆ, ಮದ್ಯಪಾನ ನಿಷೇಧ, ಸಾಕ್ಷರತಾ ಗೀತೆ, ಕಾಯಕ, ಭಾವೈಕ್ಯತೆ ಗೀತೆ, ಪರಿಸರ ಮಾಲಿನ್ಯ, ಸಹಕಾರ ಸಂಘ, ಸಮಾಜ, ವರದಕ್ಷಿಣೆ, ಕಾರ್ಗಿಲ್ ಯುದ್ಧ, ಏಡ್ಸ್, ಸ್ವಾತಂತ್ರ್ಯ ಇತ್ಯಾದಿ ವಿಷಯಗಳ ಪ್ರಚಾರ ಗೀತೆಗಳು ಇವಾಗಿವೆ. ಇವುಗಳ ಸಾಹಿತ್ಯವನ್ನು ಅವು ನೀಡುವ ಸಂದೇಶಗಳ ಹಿನ್ನೆಲೆಯಲ್ಲಿ ಗಮನಿಸಬೇಕು.

## ಅನುಬಂಧ – ೨

## ಶ್ರೀ ಗುರುಸಿದ್ದಪ್ಪನವರು ನಾಟಕಗಳಲ್ಲಿ ಅಭಿನಯಿಸಿದ ಪಾತ್ರಗಳು

| | |
|---|---|
| ೧. ಭಕ್ತ ಮಾರ್ಕಾಂಡೇಯ | – ನರ್ತಕಿ (ಸ್ತ್ರೀ ಪಾತ್ರ) |
| ೨. ಬಿ.ಪುಟ್ಟಸ್ವಾಮಯ್ಯ–ಕುರುಕ್ಷೇತ್ರ | – ಅಭಿಮನ್ಯು |
| ೩. ಸತೀಸುಲೋಚನ | – ರಾವಣ |
| ೪. ಭೌಮಾಸುರ | – ಭೌಮಾಸುರ |
| ೫. ವೀರಾಭಿಮನ್ಯು | – ಅಭಿಮನ್ಯು |
| ೬ ಉಷಾಸ್ವಯಂವರ | – ಅನಿರುದ್ಧ |
| ೭ ಸ್ತ್ರೀ ನಾಟಕ | – ಬಾಲಚಂದ್ರ |
| ೮. ಗರೂಡ ಸದಾಶಿವರಾಯರ–ಎಚ್ಚಮನಾಯಕ | – ಎಚ್ಚಮನಾಯಕ |
| ೯. ಸೀತಾರಾಮರೆಡ್ಡಿಯವರ–ಚಕ್ರವ್ಯೂಹ | – ಅಭಿಮನ್ಯು |
| ೧೦. ಸೀತಾರಾಮರೆಡ್ಡಿ–ದುರ್ದೈವ | – ಅಶ್ವತ್ಥಾಮ |
| ೧೧. ಮಲ್ಲಾರೆಡ್ಡಿ ವಿರಚಿತ–ಭಾನುಮತಿ | – ಕರ್ಣ |
| ೧೨. ಸಿ.ಕೆ.ವೆಂಕಟರಾಮಯ್ಯನವರ–ಮಂಡೋದರಿ | – ರಾವಣ |
| ೧೩. ಬೆಳಗೆರೆ ಕೃಷ್ಣಶಾಸ್ತ್ರಿ ವಿರಚಿತ ಪಾಶುಪತಾಸ್ತ್ರ | – ಅರ್ಜುನ |
| ೧೪. ಬೆಳಗೆರೆ ಕೃಷ್ಣಶಾಸ್ತ್ರಿ ವಿರಚಿತ–ಸೊಹ್ರಾಬ್‌ರುಸ್ತುಂ | – ಸೊಹ್ರಾಬ್ |
| ೧೫. ಎಚ್ಚಮನಾಯಕ (ಹಿರಣ್ಣಯ್ಯ ಮಿತ್ರಮಂಡಲಿ) | – ಸನ್ಯಾಸಿ |
| ೧೬. ಜಗಜ್ಯೋತಿ ಬಸವೇಶ್ವರ | – ಬಸವೇಶ್ವರ |
| ೧೭. ಶ್ರೀ ಗುರುಸಿದ್ದಪ್ಪನವರು ರಚಿಸಿದ–ತ್ಯಾಗ | – ಪ್ರಭಾಕರ |
| ೧೮. ––––,,–––– ಸುಮಂಗಲ | – ಸದಾಶಿವ |
| ೧೯. ––––,,––––ಗ್ರಾಮಸುಧಾರಣೆ | – ಸುಬ್ಬಯ್ಯ (ಹಾಸ್ಯಪಾತ್ರ) |
| ೨೦. ––––,,––––ಶಿವಪ್ಪನಾಯಕ | – ವೀರ (ಹಾಸ್ಯಪಾತ್ರ) |
| ೨೧. ಗುರು ತಿಪ್ಪೇರುದ್ರಾಸ್ವಾಮಿ ನಾಟಕದಲ್ಲಿ | – ಪಂಡಿತ (ಹಾಸ್ಯಪಾತ್ರ) |

## ಅನುಬಂಧ – ೩
## ಕಥಾಕೀರ್ತನೆಗಳು

೧. ಗಣಪತಿ ವಿಜಯ
೨. ಗಜಗೌರಿ ವ್ರತ
೩. ಪಾಶುಪತಾಸ್ತ್ರ
೪. ಜರಾಸಂಧ ವಧೆ
೫. ಗಣೇಶ ವ್ರತ
೬. ಭೂಕೈಲಾಸ
೭ ದಕ್ಷಯಾಗ
೮. ಉತ್ತರ ಗೋಗ್ರಹಣ
೯. ಕೃಷ್ಣಗಾರುಡಿ
೧೦. ಪಾದುಕ ಪಟ್ಟಾಭಿಷೇಕ
೧೧. ತಿರುನೀಲಕಂಠ
೧೨. ಸತಿ ಅನುಸೂಯ
೧೩. ಭಕ್ತ ಸಿರಿಯಾಳ
೧೪. ಭಕ್ತ ಮಾರ್ಕಂಡೇಯ
೧೫. ಗಿರಿಜಾ ಕಲ್ಯಾಣ
೧೬. ಶಿವರಾತ್ರಿ ಮಹಿಮೆ
೧೭. ಕೀಚಕ ವಧೆ
೧೮. ಧ್ರುವ ಚರಿತೆ
೧೯. ಸೀತಾ ಸ್ವಯಂವರ
೨೦. ರಾಮಾಂಜನೇಯ ಯುದ್ಧ
೨೧. ಶ್ರೀ ಬಸವೇಶ್ವರ
೨೨. ಅಲ್ಲಮಪ್ರಭು
೨೩. ಅಕ್ಕಮಹಾದೇವಿ
೨೪. ಶ್ರೀ ತಿಪ್ಪೇರುದ್ರಸ್ವಾಮಿ
೨೫. ಸಿದ್ಧರಾಮ ಚರಿತ್ರೆ
೨೬. ಝಾನ್ಸಿರಾಣಿ ಲಕ್ಷ್ಮೀಬಾಯಿ
೨೭. ಯಳವನಕಟ್ಟೆ ಗಿರಿಯಮ್ಮ
೨೮. ಸತಿ ಸಾವಿತ್ರಿ
೨೯. ಭಕ್ತ ಸುಧನ್ವ
೩೦. ವಾಲ್ಮೀಕಿ
೩೧. ಚಂದ್ರಶೇಖರಶಾಸ್ತ್ರಿಗಳು
(ಕಡಲೇಕಾಯಿ ಶಾಸ್ತ್ರಿಗಳು)

# ಅನುಬಂಧ – ೪

## ಬಿ. ಗುರುಸಿದ್ದಪ್ಪನವರು ಕಾರ್ಯಕ್ರಮ ನೀಡಿದ ಪ್ರಮುಖ ಪ್ರಸಿದ್ಧ – ಪವಿತ್ರ ಸ್ಥಳಗಳು

೧. ಚಳ್ಳಕೆರೆ ತಾಲ್ಲೂಕು ನಾಯ್ಕನಹಟ್ಟಿಯ "ಶ್ರೀ ತಿಪ್ಪೇರುದ್ರಸ್ವಾಮಿ ದೇವಸ್ಥಾನ".

೨. ಅನಂತಪುರ ಜಿಲ್ಲೆ ರಾಯದುರ್ಗ ತಾಲ್ಲೂಕು "ಮದ್ದಾನೇಶ್ವರ ಸ್ವಾಮಿ" ದೇವಸ್ಥಾನ.

೩. ಅನಂತಪುರದ "ಕಾಶಿ ವಿಶ್ವೇಶ್ವರ ಕೋದಂಡರಾಮ" ದೇವಸ್ಥಾನ.

೪. ಹಿರಿಯೂರು – "ಶ್ರೀರಾಮ ಮಂದಿರ" ಸತ್ಯನಾರಾಯಣ ದೇವಸ್ಥಾನ.

೫. ತುಮಕೂರು ಜಿಲ್ಲೆ ಶಿರಾದ "ಗಣಪತಿ ದೇವಸ್ಥಾನ".

೬ ತುಮಕೂರು ಜಿಲ್ಲೆ ಹುಳಿಯಾರು "ಗಣಪತಿ ದೇವಸ್ಥಾನ".

೭ ಚಿತ್ರದುರ್ಗದ "ಶ್ರೀ ಮುರುಘರಾಜೇಂದ್ರಸ್ವಾಮಿ" ಮಠ.

೮. ಸಿರಿಗೆರೆಯ "ಶ್ರೀ ತರಳಬಾಳು ಜಗದ್ಗುರು"ಗಳ ಮಠ.

೯. "ಶ್ರೀ ರಾಘವೇಂದ್ರಸ್ವಾಮಿ" ಮಠ, ಬೆಂಗಳೂರು.

೧೦. "ಶ್ರೀ ಆದಿಚುಂಚನಗಿರಿ ಮಠ", ಬೆಂಗಳೂರು.

೧೧. "ದಾಸಾಶ್ರಮ", ಬೆಂಗಳೂರು.

೧೨. "ಶ್ರೀ ಹನುಮ ದೇವಾಶ್ರಮ", ಬೆಂಗಳೂರು.

೧೩. "ಶ್ರೀ ಪ್ರಸನ್ನ ರಾಯ ಮಂದಿರ", ಚಿಂತಾಮಣಿ, ಕೋಲಾರ ಜಿಲ್ಲೆ.

೧೪. "ಪದ್ಮಾವತಿ ದೇವಸ್ಥಾನ" ಶಿರೇಕೊಳ, ಬಳ್ಳಾರಿ ಜಿಲ್ಲೆ.

೧೫. "ರಾಘವ ಕಲಾ ಮಂದಿರ" ಬಳ್ಳಾರಿ (ಡಿವೈನ್ ಪಾರ್ಕ್ ಆಶ್ರಯದಲ್ಲಿ)

೧೬. "ಜಗನ್ಮೋಹನ ಪ್ಯಾಲೇಸ್", ಮೈಸೂರು (ಡಿವೈನ್ ಪಾರ್ಕ್ ಆಶ್ರಯದಲ್ಲಿ)

೧೭. "ಸೆಂಚುರಿ ಹಾಲ್", ಮೈಸೂರು.

೧೮. "ಶ್ರೀ ಧರ್ಮಸ್ಥಳ ಕ್ಷೇತ್ರ" ಧರ್ಮಸ್ಥಳ ಲಕ್ಷ ದೀಪೋತ್ಸವ.

೧೯. ಶ್ರವಣಬೆಳಗೊಳದ ಶ್ರೀ ಗೊಮ್ಮಟೇಶ್ವರ ಸನ್ನಿಧಿ, ಮಹಾಮಸ್ತಕಾಭಿಷೇಕ.

೨೦. "ಶಾರದಾಂಬ ದೇವಸ್ಥಾನ" ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ.

೨೧. "ಶ್ರೀಕೃಷ್ಣ ದೇವಸ್ಥಾನ" ಉಡುಪಿ.

೨೨. ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನ, ಮಧೂರು, ಕಾಸರಗೋಡು ಜಿಲ್ಲೆ (ಕೇರಳ).

೨೩. "ಕುಂದೇಶ್ವರ ದೇವಸ್ಥಾನ", ಕುಂದಾಪುರ, ದ.ಕ. ಜಿಲ್ಲೆ.
೨೪. "ಕೋಟಿಲಿಂಗೇಶ್ವರ ದೇವಸ್ಥಾನ", ಕೋಟೇಶ್ವರ, ದ.ಕ. ಜಿಲ್ಲೆ.
೨೫. "ಹಿರೇಮಹಾಲಿಂಗೇಶ್ವರ ದೇವಸ್ಥಾನ", ಕೋಟ, ದ.ಕ. ಜಿಲ್ಲೆ.
೨೬. "ಶ್ರೀ ಸಿದ್ಧಿವಿನಾಯಕ ದೇವಸ್ಥಾನ", ಆನೆಗುಡ್ಡೆ, ದ.ಕ. ಜಿಲ್ಲೆ.
೨೭. "ಮಹಾಲಿಂಗೇಶ್ವರ ದೇವಸ್ಥಾನ", ಉಳ್ಳೂರು, ದ.ಕ. ಜಿಲ್ಲೆ.
೨೮. "ಶ್ರೀ ಲಕ್ಷ್ಮೀ ಜನಾರ್ಧನ ದೇವಸ್ಥಾನ", ಕಾಪು, ದ.ಕ. ಜಿಲ್ಲೆ.
೨೯. "ಆದಿಚುಂಚನಗಿರಿ ಮಠ", ಆದಿಚುಂಚನಗಿರಿ, ಬಾಲಗಂಗಾಧರನಾಥಸ್ವಾಮಿ ಮಠ.
೩೦. "ಆದಿಚುಂಚನಗಿರಿ ಮಠ", ಹಾಸನ.
೩೧. "ಮಣಿಕಲ್ಲು ಕೃಪಾಲಯ", ಶಿವಮೊಗ್ಗ.
೩೨. "ಶ್ರೀ ಮಹಾಬಲ ಭಟ್ಟರ", ಸಂಗೀತಾಲಯ, ಸಾಗರ.
೩೩. "ಶ್ರೀ ವಿನಾಯಕ ದೇವಸ್ಥಾನ", (ರಾಮಯ್ಯ ಪಾರ್ಕ್ ಬಳಿ) ಶಿವಮೊಗ್ಗ.

## ಅನುಬಂಧ – ೫

# ಶ್ರೀ ಬಿ.ಗುರುಸಿದ್ದಪ್ಪನವರಿಗೆ ಸಂದ ಪ್ರಶಸ್ತಿ, ಸನ್ಮಾನಗಳು

| | | | |
|---|---|---|---|
| ೧. | ಶ್ರೀ ವಿದ್ಯಾಗಣಪತಿ ನಾಟಕ ಮಂಡಳಿ<br>ಶಿರಾ, ತುಮಕೂರು ಜಿಲ್ಲೆ | ೧೯೬೮ | ಸನ್ಮಾನ |
| ೨. | ಕಲ್ಪತರು ಕಲಾಸಂಘ<br>ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ೧೯೭೧ | ಪ್ರಶಸ್ತಿ |
| ೩. | ಜಿಲ್ಲಾ ಯುವಜನ ಸೇವಾ ಮಂಡಳಿ<br>ಚಿತ್ರದುರ್ಗ | ೧೯೭೧ | ಪ್ರಶಸ್ತಿ |
| ೪. | ಕನ್ನಡ ಯುವಕ ಸಂಘ, ಗಾನ ಕಲಾ ಬಳಗ<br>ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ೧೯೭೩ | ಪ್ರಶಸ್ತಿ |
| ೫. | ಕೀರ್ತನ ಮಹಾ ವಿದ್ಯಾಲಯ<br>ಬೆಂಗಳೂರು | ೧೯೮೩ | ಪ್ರಶಸ್ತಿ |
| ೬ | ಶ್ರೀ ಗುರು ಕಲಾ ಸಂಘ<br>ಚಳ್ಳಕೆರೆ | ೧೯೮೪ | ಪ್ರಶಸ್ತಿ |
| ೭ | ದಾಸಾಶ್ರಮ, ಅಂತರರಾಷ್ಟ್ರೀಯ ಕೇಂದ್ರ<br>ಬೆಂಗಳೂರು | ೧೯೮೪ | ಸನ್ಮಾನ |
| ೮. | ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಭಕ್ತಮಂಡಲಿ<br>ಬೆಂಗಳೂರು | ೧೯೮೫ | ಪ್ರಶಸ್ತಿ |
| ೯. | ಕಾಶಿ ವಿಶ್ವೇಶ್ವರ ಕೋದಂಡರಾಮಾಲಯಮು<br>ಅನಂತಪುರಂ, ಆಂಧ್ರಪ್ರದೇಶ | ೧೯೮೫ | ಸನ್ಮಾನ |
| ೧೦. | ಭಾವೈಕ್ಯತೆಯ ಸಮುದಾಯ ಗೀತಾ ಶಿಬಿರ<br>ಚಿತ್ರದುರ್ಗ | ೧೯೮೭ | ಪ್ರಶಸ್ತಿ |

| | | | |
|---|---|---|---|
| ೧೧. | ಗಣರಾಜ್ಯೋತ್ಸವ ಸಮಿತಿ<br>ಚಿತ್ರದುರ್ಗ | ೧೯೮೮ | ಪ್ರಶಸ್ತಿ |
| ೧೨. | ವಿಶ್ವಶಾಂತಿ ಆಶ್ರಮ ಟ್ರಸ್ಟ್, ಬೆಂಗಳೂರು<br>ಹುಬ್ಬಳ್ಳಿ | ೧೯೮೮ | ಸನ್ಮಾನ |
| ೧೩. | ನೃತ್ಯ ನಿಕೇತನ (ರಿ)<br>ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ೧೯೮೮ | ಸನ್ಮಾನ |
| ೧೪. | ಶ್ರೀ ಮದನಂತೇಶ್ವರ ವಿನಾಯಕ ದೇವಸ್ಥಾನ<br>ಮಧೂರು, ಕಾಸರಗೋಡು, ಕೇರಳ ರಾಜ್ಯ | ೧೯೯೨ | ಪ್ರಶಸ್ತಿ |
| ೧೫. | ಅಖಿಲ ಭಾರತ ೬೧ನೆಯ ಕನ್ನಡ ಸಾಹಿತ್ಯ<br>ಸಮ್ಮೇಳನ, ದಾವಣಗೆರೆ | ೧೯೯೨ | ಪ್ರಶಸ್ತಿ |
| ೧೬. | ಕರ್ನಾಟಕ ರಾಜ್ಯೋತ್ಸವ ಸಮಿತಿ<br>ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ೧೯೯೨ | ಸನ್ಮಾನ |
| ೧೭. | ಶ್ರೀ ರುದ್ರರೂಪಿಣಿ ಮಹಾಕಾಳಿಗೆಂಡ<br>ಸೇವಾ ಸಂಘ, ಶಿವಮೊಗ್ಗ | ೧೯೯೩ | ಸನ್ಮಾನ |
| ೧೮. | ಶ್ರೀ ಹನುಮದೇವ ಆಶ್ರಮ<br>ಹೆಬ್ಬಾಳ, ಬೆಂಗಳೂರು | ೧೯೯೪ | ಸನ್ಮಾನ |
| ೧೯. | ಮಾರ್ಕಂಸ್ ರೋಟರ್ ಇಂಗ್ಲಿಷ್ ಸ್ಕೂಲ್<br>ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ೩೦-೧೨-೯೬ | ಸನ್ಮಾನ |
| ೨೦. | ಕರುನಾಡ ಕಲಾ ಸಾಹಿತ್ಯ ವೇದಿಕೆ<br>ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ೧೯-೧-೯೭ | ಸನ್ಮಾನ |
| ೨೧. | ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ<br>ಬೆಂಗಳೂರು | ೨೯-೧-೯೭ | ಕರ್ನಾಟಕ<br>ಕಲಾಶ್ರೀ ಪ್ರಶಸ್ತಿ |
| ೨೨. | ನೆಲ್ಸನ್ ಕಾನ್ವೆಂಟ್ ಸ್ಕೂಲ್<br>ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ೨೧-೨-೯೭ | ಸನ್ಮಾನ |
| ೨೩. | ಶ್ರೀ ಕಾಟಲಿಂಗೇಶ್ವರ ನಾಟಕ ಸಂಘ<br>ಕಾಟಪ್ಪನಹಟ್ಟಿ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ೨೪-೨-೯೭ | ಸನ್ಮಾನ |

೨೪. ಸ್ವರ ಸಾಗರ ಸಂಗೀತ ವಿದ್ಯಾಲಯ ದಾವಣಗೆರೆ — ೧೪–೩–೯೭ — ಸನ್ಮಾನ

೨೫. ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು — ೨೨–೩–೯೭ — ಸನ್ಮಾನ

**ಸಂಘ–ಸಂಸ್ಥೆಗಳು ನೀಡಿದ ಬಿರುದಾವಳಿಗಳು:**

ನಾಟ್ಯ ಕವಿ ಚತುರ
ಕಲಾಭೀಷ್ಮ
ಸಂಗೀತ ಕಲಾನಿಧಿ
ಕಲಾತಪಸ್ವಿ
ಸಾಂಸ್ಕೃತಿಕ ರತ್ನ
ಕರ್ನಾಟಕ ಕಲಾಶ್ರೀ

**ಪುಸ್ತಕಗಳಲ್ಲಿ ಗುರುಸಿದ್ದಪ್ಪನವರ ಬಗೆಗಿನ ಮಾಹಿತಿ**

೧. 'ನಮ್ಮ ಕೀರ್ತನ ಕಲಾವಿದರು' (೧೯೮೬), ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು.

೨. 'ಕರ್ನಾಟಕ ನಾಟಕಕಾರರು' (೧೯೯೦), ಕಮಲಕೃಷ್ಣ ಪ್ರಕಾಶನ, ಮೈಸೂರು.

೩. 'ರಂಗ ಗೀತೆಗಳು', ಸಂ: ಕೆ.ವಿ.ಆಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.


# ಅನುಬಂಧ – ೭

## ವಂಶವೃಕ್ಷ

- ಬಸಪ್ಪ–ರುದ್ರಮ್ಮ
  - ಸಿದ್ದಯ್ಯ
  - "ಕಥಾನಾಯಕ"
    ಬಿ.ಗುರುಸಿದ್ದಪ್ಪ – ತಿಪ್ಪಮ್ಮ
    - ಶ್ರೀಮತಿ ರಾಜೇಶ್ವರಿ–ಹೆಚ್.ಸಿ.ವೀರಣ್ಣ
      ಗೃಹಿಣಿ
      - ಶ್ರೀಮತಿ ಹೆಚ್.ವಿ.ಯಮುನ–ರಮೇಶ್
        ಪ್ರೌಢಶಾಲಾ ಶಿಕ್ಷಕಿ–ಉಪನ್ಯಾಸಕರು
        - ಮಧು
        - ಸಮರ್ಥ
      - ಹೆಚ್.ವಿ.ತಿಪ್ಪೇಸ್ವಾಮಿ–ಸುಮಂಗಲ
        ನಿವೃತ್ತ ಮಿಲ್ಟ್ರಿ ಅಧಿಕಾರಿ
        - ಚಿನ್ಮಯಿ
        - ತನ್ಮಯಿ
    - ಜಿ.ಹೇಮಲತ – ತಿಪ್ಪೇಸ್ವಾಮಿ
      ಪ್ರೌಢಶಾಲಾ ಶಿಕ್ಷಕಿ
      - ಜಿ.ಟಿ. ಪ್ರೀತಿ
    - ಜಿ.ಟಿ.ಸ್ವಾಮಿ–ರೇಣುಕಾದೇವಿ
      ಮೃದಂಗ ವಿದ್ವಾನ್ ಲಲಿತ ಕಲಾ ಕಾಲೇಜು
      ಮಾನಸ ಗಂಗೋತ್ರಿ, ಮೈಸೂರು
      - ಎಸ್.ಆರ್.ಯಶಸ್
  - ಪುಟ್ಟೀರಮ್ಮ

# ಅನುಬಂಧ – ೭


## ಚಿತ್ರಾವಳಿ




ಯುವಕ ಗುರುಸಿದ್ದಪ್ಪ



ಗುರುಸಿದ್ದಪ್ಪ-ತಿಪ್ಪಮ್ಮ ದಂಪತಿಗಳು




ತಾಯಿ ರುದ್ರಮ್ಮ-ತಂದೆ ಬಸಪ್ಪ



ಬಾಲಕ ಗುರುಸಿದ್ದಪ್ಪ







ವಾದ್ಯಗಳೊಂದಿಗೆ ಗುರುಸಿದ್ದಪ್ಪ



ವಿದುಷಿ ಶ್ಯಾಮಲಾ ಭಾವೆ ಅವರಿಂದ ಗೌರವ ಸ್ವೀಕಾರ



ಮಂತ್ರಿ ಬಿ. ಸತ್ಯನಾರಾಯಣ ಅವರಿಂದ ಪ್ರಶಸ್ತಿ ಸ್ವೀಕಾರ




ಮಂತ್ರಿ ತಿಪ್ಪೇಸ್ವಾಮಿ ಅವರಿಂದ ಸನ್ಮಾನ



ಮುರುಘಾ ಶರಣರು ಮತ್ತು ಮಂತ್ರಿ ಗೋವಿಂದ ಕಾರಜೋಳ ಅವರಿಂದ ಸನ್ಮಾನ



ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಂದ ಅಭಿನಂದನೆ



ಮೈಸೂರಿನ ಸುತ್ತೂರು ಶ್ರೀಗಳಿಂದ ಸನ್ಮಾನ





ಕರ್ನಾಟಕ ಕಲಾಶ್ರೀ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಗುರುಸಿದ್ದಪ್ಪ



ಯು. ವಿಷ್ಣುಮೂರ್ತಿರಾವ್–ನಿಸರ್ಗ ಗೋವಿಂದರಾಜು
ನಾಟಕ ಅಕಾಡೆಮಿ ಸದಸ್ಯ ಪಿ. ತಿಪ್ಪೇಸ್ವಾಮಿ ಅವರೊಂದಿಗೆ ಗುರುಸಿದ್ದಪ್ಪ



ನಾಟಕ ಸಮಾರಂಭವೊಂದರಲ್ಲಿ ಸಿನಿಮಾ ತಾರೆಯರಾದ ಪಂಢರೀಭಾಯಿ
ಮತ್ತು ಹಾಸ್ಯನಟ ರತ್ನಾಕರ್ ಅವರೊಂದಿಗೆ ಗುರುಸಿದ್ದಪ್ಪ




ನೃತ್ಯನಿಕೇತನ ಸಂಸ್ಥೆಯ ವತಿಯಿಂದ ಸನ್ಮಾನ ಸ್ವೀಕಾರ



ಕುಟುಂಬದವರೊಂದಿಗೆ ಗುರುಸಿದ್ದಪ್ಪ ದಂಪತಿಗಳು



ದಾಂಪತ್ಯಗೀತೆ





ಶಿಷ್ಯ ಸಮೂಹದೊಂದಿಗೆ ಗುರುಸಿದ್ದಪ್ಪನವರು



ಕರ್ನಾಟಕ ಕಲಾಶ್ರೀ ಪ್ರಶಸ್ತಿಯ ಸಂಭ್ರಮದಲ್ಲಿ ಗುರುಸಿದ್ದಪ್ಪ














ಗುರುಸಿದ್ದಪ್ಪನವರ ನಾಟಕಗಳ ರಕ್ಷಾಪುಟ